ಅನೇಕ ಭಾಗದಲ್ಲಿ ರೈತರಿಗೆ ತಿನ್ನುವುದಕ್ಕೇ ರಾಗಿಯಿಲ್ಲ. ಹಾಗಿರುವಾಗ ಅವರು 40 ಸೇರು ಲೆವಿ ಕೊಡಬೇಕೆಂದರೆ ಎಲ್ಲಿಂದ ತಂದುಕೊಡುವುದು ? ಈ ರಾಗಿ ಲೆವಿಯನ್ನು ರದ್ದು ಮಾಡತಕ್ಕ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಕೂಡಲೇ ಹೊರಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು ಅವರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆಯ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ಸೂಚಿಸಲಿಚ್ಛಿಸುತ್ತೇನೆ.

MOTION OF RANKS TO THE GOVERNOR'S ADDRESS

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ) .—

ಸನ್ಮಾನ್ಯ ಅಧ್ಯಕ್ಷಣಿಯರೇ : "ದಿನಾಂಕ ಫೆಬ್ರವರಿ 25, 1974 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರ ಅವರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವುಗಳು ಸನ್ಮಾನ್ಯ ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.

ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ) :—ಮಾನ್ಯ ಅಧ್ಯಕ್ಷಣಿಯರೇ, ನಾನು ಈಗತಾನೆ ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡುರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು : ಶ್ರೀ ಶ್ರೀನಿವಾಸಲು ನಾಯ್ಡು ಅವರು ಸಭೆಯ ಮುಂದೆ ಮಂಡಿಸಿರತಕ್ಕ ವಂದನಾರ್ಪಣೆಯ ನಿರ್ಣಯ ಹೀಗೆ ಇದೆ :—"ದಿನಾಂಕ ಫೆಬ್ರವರಿ 25, 1974ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಅವರ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಬೆಯ ಸದಸ್ಯರಾದ ನಾವುಗಳು ಸನ್ಮಾನ್ಯ ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ".

ಶ್ರೀ ಕೆ. ಅರ್. ಶ್ರೀನಿವಾಸಲು ನಾಯ್ಡು : ಮಾನ್ಯ ಅಧ್ಯಕ್ಷಣಿಯರೇ: ಕಳೆದ ಇದೇ ತಿಂಗಳು 25ನೇ ತಾರೀಖಿನ ದಿನ ಮಾನ್ಯ ರಾಜ್ಯಪಾಲರು—ರವರು ಬಹಳ ಅರಿತು ನುರಿತ ಹಾಗೂ ಬಹಳ ಅನುಭವವುಳ್ಳ ರಾಜಕಾರಿಣಿಗಳು, ಈ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಅಂದರೆ ಇಂದು ಇಲ್ಲಿಯವರೆಗೆ ಮತ್ತೆ ಮುಂದೆ

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಏನೇನು ಕೆಲಸಕಾರ್ಯಗಳನ್ನು ಮಾಡಿದ್ದಾರೆ ಮತ್ತು ಮುಂದೆ ಮಾಡಬೇಕೆಂದಿದ್ದಾರೆ ಎಂಬುದನ್ನೆಲ್ಲಾ ಒಂದು ಪಕ್ಷಿ ನೋಟದಲ್ಲಿ ನಮ್ಮ ಸಭೆಯು ಮುಂದಿಟ್ಟಿದ್ದಾರೆ. ಈ ವಿಷಯ ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಆದರೆ ಈ ಸಂದರ್ಭದಲ್ಲಿ ಈ ಬಗ್ಗೆ ಕೆಲವು ಸೂಕ್ತ ಸಲಹೆಗಳನ್ನು ಸಹ ನಾನು ಕೊಡ ಬಯಸುತ್ತೇನೆ.

ತಮಗೆಲ್ಲರಿಗೂ ಗೊತ್ತಿರುವಂತೆ ನಾವು ಇಂದು ಯೋಜನಾ ಯುಗದಲ್ಲಿದ್ದೇವೆ ಜನರ ಮತ್ತು ಸರಕಾರದ ಸಹಾಯಗಳಿಲ್ಲದೆ ಯಾವ ಕೆಲಸಗಳನ್ನು ನಾವಿಂದು ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಕೆಲಸ ಕಾರ್ಯಗಳನ್ನು ಮಾಡಿದೆ. ಅವುಗಳಲ್ಲಿ ಕೆಲವು ಲೋಪದೋಷಗಳಿರಬಹುದು. ನಾವು ಮಾಡಿರತಕ್ಕದ್ದೆಲ್ಲಾ ಸರಿಯಾಗಿದೆಯೆಂದು ನಾನು ಹೇಳುವುದಿಲ್ಲ. ಈ ದೃಷ್ಟಿಯಿಂದ ನಾನು ಈ ಬಗ್ಗೆ ಮಾಡಬಹುದಾದ ರಚನಾತ್ಮಕವಾದ ಕೆಲವು ಟೀಕೆ ಟಿಪ್ಪಣಿಗಳನ್ನು ಸ್ವಾಗತಿಸತಕ್ಕವರಲ್ಲಿ ನಾನೂ ಒಬ್ಬ, ನಾವು ಈ ದಿವಸ ಯಾವ ಕೆಲಸವನ್ನೇ ಕೈಗೊಂಡರೂ ಅದಕ್ಕೊಂದು ಯೋಜನೆ ಇರಲೇಬೇಕು; ಇದು ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಆದರೆ ನಮ್ಮಲ್ಲಿರತಕ್ಕ ಈ ಅರಂಮ್‌ಡ್ ಛೇರಿನಲ್ಲಿರತಕ್ಕ ಎಕನಮಿಸ್ಟ್‌ಗಳೇನಿದ್ದಾರೆ ಇವರು ಈ ಯೋಜನೆಗಳು ಯಾವ ರೂಪದಲ್ಲಿ ಯಾರಿಗೆ ಯಾವ ಮಟ್ಟದಲ್ಲಿ ಹೇಗೆ? ಮುಟ್ಟಬೇಕೆಂಬ ಬಗ್ಗೆ, ಯಾವಾಗ ಅವರಿಗೆ ಇವು ಮುಟ್ಟಬೇಕು ಎನ್ನತಕ್ಕ ವಿಚಾರದಲ್ಲಿ, ಅವರ ತಪ್ಪು ಹೆಜ್ಜೆಯಿಂದ ನಮ್ಮ ಯೋಜನೆಯಲ್ಲಿ ಕೆಲವು ಲೋಪದೋಷಗಳುಂಟಾಗಿವೆ. ಈ ದೋಷಗಳು ರಾಜ್ಯಮಟ್ಟದವುಗಳು ಇರಬಹುದು, ಇಲ್ಲವೇ ರಾಷ್ಟ್ರ ಮಟ್ಟದವುಗಳಿರಬಹುದು ಅಥವಾ ಅಂತರಾಷ್ಟ್ರೀಯ ಮಟ್ಟದವುಗಳಿರಬಹುದು.

ನಮ್ಮ ರಾಜ್ಯದಲ್ಲಿ ಈ ಹಿಂದೆ ಅಂದರೆ 1972-73ನೇ ಸಾಲಿನಲ್ಲಿ ತಲೆದೋರಿದ್ದಂಥ ಭೀಕರ ಕ್ಷಾಮ ಹಿಂದೆಂದೂ ರಾಜ್ಯದಲ್ಲಿ ತಲೆದೋರಿರಲಿಲ್ಲ ಎಂಬುದನ್ನು ತಾವೆಲ್ಲರೂ ಒಪ್ಪುತ್ತೀರೆಂದುಕೊಳ್ಳುತ್ತೇವೆ ಅಂತಹಾ ಕಾಲಕ್ಕೆ ನಮ್ಮ ಸರ್ಕಾರ ಅಲ್ಲಿ ಜನರ, ಯೋಗ ಕ್ಷೇಮಗಳನ್ನು ಕಾಪಾಡತಕ್ಕ ಮುಖ್ಯ ದೃಷ್ಟಿಯಿಂದ ಸುಮಾರು 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರಲ್ಲಿ ನಮಗೆ ಕೇಂದ್ರದಿಂದ ದೊರೆತ ಸಹಾಯ 43 ಕೋಟಿ ಮಾತ್ರ. ಇದು ಎಷ್ಟು ದೊಡ್ಡ ಪ್ರಮಾಣದ ಹಣ ಎಂಬುದು ನೀವೆ ಯೋಚನೆ ಮಾಡಿ ನೋಡಿ? ಹಿಂದೆ ಇಂಥದೇ ಕ್ಷಾಮಗಳು ದೇಶದಲ್ಲಿ ತಲೆದೋರಿದಾಗ ಹಿಂದಿದ್ದ ಸರಕಾರಗಳು ಕೇವಲ 6—7 ಕೋಟಿಗೆ ಮೀರಿ ಎಂದೂ ಖರ್ಚು ಮಾಡಿಲ್ಲ. ಆದರೆ ಈ ಕ್ಷಾಮವನ್ನು ಸಂಪೂರ್ಣವಾಗಿ ತಡೆಗಟ್ಟತಕ್ಕ ದೆಸೆಯಲ್ಲಿ ನಾವು ಒಂದು ಶಾಶ್ವತವಾದ

ಡ್ರಾಟ್ ಕಂ ಡೆವಲಪ್‌ಮೆಂಟ್ ಪ್ಲಾನ್ ಬೋರ್ಡ್' ಒಂದನ್ನು ರಚಿಸಬೇಕೆಂದು ಸಲಹೆ ಮಾಡುತ್ತೇನೆ. ಕ್ಷಾಮ ನಿವಾರಣೆ ಕಾಲದಲ್ಲಿ ಆ ಪ್ರದೇಶದಲ್ಲಿ, ಅನೇಕ ರಸ್ತೆ ಕಾಮಗಾರಿಗಳನ್ನೂ, ಬಾವಿಗಳನ್ನು ತೋಡಿಸುವ ಕೆಲಸವನ್ನೂ, ಸಾಯಿಲ್ ಕನ್‌ಸರ್ವೇಷನ್ ಕಾರ್ಯಗಳನ್ನೂ ಹಿಂದೆಂದೂ ಮಾಡದಷ್ಟು ಮಾಡಿಸಿದ್ದಾರೆ ಎಂದು ಶ್ರೀ ಆರ್ಮುಗಂರವರು ಈ ವಿಚಾರಗಳನ್ನು ಅವರ ಏಕ ಸದಸ್ಯ ವರದಿಯಲ್ಲಿ ವಿಸ್ತಾರವಾಗಿ ನಮೂದಿಸಿದ್ದಾರೆ ಮತ್ತು ಒಪ್ಪಿಕೊಂಡಿದ್ದಾರೆ. ಆ ದಿವಸ ನಮ್ಮ ಸರ್ಕಾರದವರು ಅಷ್ಟನ್ನೆಲ್ಲಾ ಅಲ್ಲಿ ಮಾಡಿಸದೆ ಇದ್ದಿದ್ದರೆ ಈ ದಿವಸ ಆ ಗುಜರಾತಿನಲ್ಲಿನ ಒಂದು ಪರಿಸ್ಥಿತಿ ಉದ್ಭವಿಸಿದೆ ಅದೇ ಪ್ರಸ್ಥಿತಿ ಇಲ್ಲಿಯೂ ಉದ್ಭವಿಸುತ್ತಿತ್ತೆಂದು ನಾನು ತಿಳಿಸಲಿಕ್ಕೆ ಇಚ್ಛೆ ಪಡುತ್ತೇನೆ. ಇದರಿಂದ ನಮಗೆ ಮುಖ್ಯವಾಗಿ ತಿಳಿದುಬರುವುದು ಇನ್ನೊಂದು ವಿಷಯ ಅಂದರೆ ಕನ್ನಡಿಗರು ಎಂಥ ಕಷ್ಟ ಸಹಿಷ್ಣುಗಳು ಎಂಬುದು ಸ್ವಯಂ ವೇದ್ಯವಾಗುತ್ತದೆ. ಆದರೆ ಯಾವಾಗಲೂ 'ಯುದ್ಧಶಾಲೆ ಶಸ್ತ್ರಾಭ್ಯಾಸ' ಎಂಬುದು ಬೇಡವೆಂದು ಹೇಳುತ್ತೇನೆ. ದೇಶದಲ್ಲಿ ಸದಾ ಒಂದಲ್ಲಾ ಒಂದು ವಸ್ತುವಿಗೆ "ಕ್ಷಾಮ ಇದ್ದೇ" ಇರುತ್ತದೆ. ಅದಕ್ಕಾಗಿ ಶಾಶ್ವತವಾಗಿ ಒಂದು ಖಾಯಂ. ಕ್ಷಾಮ ಪರಿಹಾರ ಬೋರ್ಡನ್ನು ರಚಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಇನ್ನು ನಾನು ಜನರಿಗೆ ಬಹಳ ಅತ್ಯಗತ್ಯವಾಗಿರತಕ್ಕ ಅಹಾರದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಆಹಾರ ಸಮಸ್ಯೆ, ಕೇವಲ ನಮ್ಮ ರಾಜ್ಯವೊಂದರ ಸಮಸ್ಯೆಯಲ್ಲ. ಇದು ಅಂತರಾಷ್ಟ್ರೀಯ ಪ್ರಶ್ನೆ. ತಾವುಗಳು ಎಕನಾಮಿಕ್ ರಿಪೋರ್ಟುಗಳನ್ನು ನೋಡಿದರೆ ಈ ವಿಷಯ ಚೆನ್ನಾಗಿ ಗೊತ್ತಾಗುತ್ತದೆ. ತಮಗೆಲ್ಲರಿಗೂ ಗೊತ್ತಿರುವಂತೆ ನಾವು ಎಲ್ಲರೂ ಶ್ರಮಿಸುತ್ತಿರುವುದು 'ಜೋಟುದ್ದ ಹೊಟ್ಟೆಗಾಗಿ ಮತ್ತು ಗೇಣುದ್ದ ಬಟ್ಟೆಗಾಗಿ', ನಮ್ಮ ರಾಜ್ಯದಲ್ಲಾದರೋ ಇರತಕ್ಕ ಜನರಲ್ಲಿ ಹೆಚ್ಚಿನ ಜನ ಸಂಖ್ಯೆ ಬಡವರೇ ಜಾಸ್ತಿ. ಆದಾಗ್ಯೂ ಸಹ ಆಹಾರ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕಾಗಿ ನಮ್ಮ ಸರ್ಕಾರ ಈ ದೆಶೆಯಲ್ಲಿ ಒಂದು ದಿಟ್ಟ ಹೆಜ್ಜೆಯನ್ನಿಟ್ಟಿದೆ ಎಂದರೆ ತಪ್ಪಾಗಲಾರದು. ಈ ವಿಚಾರದಲ್ಲಿ ಅನೇಕ ಸೂಕ್ತ ಕಾರ್ಯಕ್ರಮಗಳನ್ನು ಸಹ ಕೈಗೊಂಡಿದೆ. ನಮ್ಮಲ್ಲಿ ಸಾಕಷ್ಟು ಆಹಾರಧಾನ್ಯಗಳಿದ್ದರೂ ಜನರಲ್ಲಿ ಏಕೆ ಒಂದು ಶಾಂತಿಸಮಾಧಾನಗಳಿಲ್ಲ ಅಂದರೆ ಇಲ್ಲಿ ನಮ್ಮಲ್ಲಿ ಜನರಿಗೆ ಇನ್ನೂ ಆ ರಾಷ್ಟ್ರೀಯ ಮನೋಭಾವನೆ ಬೆಳೆದಿಲ್ಲ. ಎಲ್ಲೆಲ್ಲೂ ಸ್ವಾರ್ಥದ ತನ್ಮಯ. ಇದರ ವಿತರಣೆಯಲ್ಲಿ ಗೊಂದಲವುಂಟಾಗಿದೆ. ಸರ್ಕಾರದ ರೀತಿ ನೀತಿ ಮತ್ತು ಧೋರಣೆಗಳು ನಿರ್ದಿಷ್ಟವಾಗಿದ್ದರೂ ಇದರ ಹಂಚಿಕೆ ಸರಿಯಾಗಿ ಆಗದಿರುವುದರಿಂದ ಅಲ್ಲಲ್ಲೇ ತೊಂದರೆಗಳಾಗಿದೆ ಎಂದು ಹೇಳುವುದು ಅತಿಶಯೋಕ್ತಿಯೇನಲ್ಲ.

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

2-00 P. M.

ಅಂತರ ಜಿಲ್ಲಾ ಸಾಗಾಣಿಕೆ ಮೇಲಿನ ನಿರ್ಬಂಧವನ್ನು ತೆಗೆದು ಹಾಕಬೇಕು ಹಾಗೆ ಮಾಡುವುದರಿಂದ ಮಾತ್ರ ಅಕ್ಕಿ ಧಾರಾಳವಾಗಿ ಸಿಕ್ಕುತ್ತದೆ ಎಂಬ ಭಾವನೆ ಕೆಲವರಲ್ಲಿ ಮೂಡಿದೆ; ಯಾವ ಕಾರಣದಿಂದ ನಿರ್ಬಂಧವನ್ನು ಮುಂದು ವರಿಸುತ್ತಿದ್ದಾರೆಂದು ಅನೇಕ ಸಂದರ್ಭದಲ್ಲಿ ನಮ್ಮ ಮಿತ್ರರು ನನ್ನನ್ನು ಕೇಳಿದ್ದಾರೆ. ಅಂತರ ಜಿಲ್ಲಾ ಸಾಗಾಣಿಕೆಯ ಮೇಲೆ ನಿರ್ಬಂಧವಿದ್ದರೂ ಸಹ ಯಾವ ಜಿಲ್ಲೆ ಗಳಲ್ಲಿ ಹೆಚ್ಚು ಬೆಳೆ ಬೆಳೆಯುತ್ತದೆ. ಅಲ್ಲಿಯೂ ಸಹ ಏತಕ್ಕೆ ಅಕ್ಕಿಯ ಬೆಲೆ ಕಡಿಮೆ ಯಾಗಿಲ್ಲ, ಬೆಂಗಳೂರು ದಾವಣಗೆರೆ ಮುಂತಾದ ಕೈಗಾರಿಕಾ ಕೇಂದ್ರಗಳಲ್ಲಿ ಬೆಲೆ ಜಾಸ್ತಿಯಾಗಿದ್ದರೂ ನಂಜನಗೂಡು, ಮಂಡ್ಯ ಮುಂತಾದ ನಾಲಾ ಪ್ರದೇಶಗಳಲ್ಲಿ ಬೆಲೆ ಏಕೆ ಕಡಿಮೆಯಾಗಿಲ್ಲವೆಂದು ಕೇಳುತ್ತೇನೆ? ಸಮಾಜಘಾತುಕ ಶಕ್ತಿಗಳಾದ ಸ್ಮಗ್ಲರ್ಸ್, ಹೋರ್ಡರ್ಸ್ ಮತ್ತು ಸ್ಪೆಕ್ಯುಲೇಟರ್ಸ್ ಈ ನಾಲ್ಕೂ ಜನರಿಂದ ಬೆಲೆಗಳು ಜಾಸ್ತಿಯಾಗುತ್ತಿವೆ ಎಂದು ಧಾರಾಳವಾಗಿ ಹೇಳಬಹುದು.

ರಾಜ್ಯದಲ್ಲಿರುವ ಮೂರು ಕೋಟಿ ಜನರಿಗೂ ಆಹಾರವನ್ನು ಸರಿಯಾದ ರೀತಿಯಲ್ಲಿ ಕೊಡಬೇಕೆಂಬ ಪೂರ್ಣ ಆಕಾಂಕ್ಷೆ ಸರ್ಕಾರಕ್ಕೆ ಇದೆ. ಆದುದರಿಂದಲೇ ಕೆಲವು ಮುಖ್ಯವಾದ ಪ್ರದೇಶಗಳಲ್ಲಿ ಅನೌಪಚಾರಿಕ ಪಡಿತರವನ್ನು ಜಾರಿಗೆ ತರಲಾಗಿದೆ. ಶಾಸನಬದ್ಧ ಪಡಿತರ ವ್ಯವಸ್ಥೆಯನ್ನು ಜಾರಿಗೆ ತಂದರೆ ಪ್ರತಿ ಯೊಬ್ಬರಿಗೂ ಆಹಾರವನ್ನು ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ ಆದರೆ ನಾವು ಅನೌಪಚಾರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಉದ್ದೇಶವಾದರೂ ಬಡವರಿಗೆ, ನೊಂದ ಜನಗಳಿಗೆ, ಬೆಂದ ಜನಗಳಿಗೆ ಆಹಾರ ಪದಾರ್ಥಗಳು ಕಡಿಮೆ ಮತ್ತು ಸುಲಭ ಬೆಲೆಯಲ್ಲಿ ಸಿಕ್ಕಬೇಕು ಎನ್ನುವುದೇ ಆಗಿದೆ. ಶಾಸನಬದ್ಧ ಪಡಿತರ ವ್ಯವಸ್ಥೆ ಜಾರಿಗೆ ಬಂದರೆ ಮಾರುಕಟ್ಟೆಯಲ್ಲಿ ಒಂದು ಕಾಳು ಧಾನ್ಯವೂ ಸಿಕ್ಕುವುದಿಲ್ಲ. ಮತ್ತು ಮಾರಲಾಗುವುದಿಲ್ಲ. ಅನು ಕೂಲಸ್ಥರಿಗೆ ಒಳ್ಳೆಯ ಅಕ್ಕಿ ಸಿಕ್ಕರೆ, ಮಾರುಕಟ್ಟೆಯಲ್ಲಿ ಅಂಥವರು ಅಕ್ಕಿಯನ್ನು ಕೊಳ್ಳುವುದಕ್ಕೆ ಅವಕಾಶವಿರಲಿ ಮತ್ತು ಬಡವರಿಗೆ ಕಡಮೆ ಬೆಲೆಯಲ್ಲಿ ಸರ್ಕಾರದ ಮೂಲಕ ಆಹಾರ ಧಾನ್ಯವನ್ನು ಒದಗಿಸುವ ಉದ್ದೇಶದಿಂದ ಅನೌಪಚಾರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಸರ್ಕಾರದವರು ಆಹಾರ ಧಾನ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಕೆಲವು ಲೋಪದೋಷಗಳಿರಬಹುದು. ಸರ್ಕಾರದವರು ಕೇವಲ ನೀತಿನಿಯಮವನ್ನು ಹಾಕುತ್ತಾರೆ. ಅದನ್ನು ಅನುಸ್ಠಾನಕ್ಕೆ ತರುವವರು ಅಧಿಕಾರವರ್ಗದವರಾಗಬಹುದು, ವ್ಯಾಪಾರಸ್ಥರಾಗಬಹುದು, ಅಥವಾ ಸಾರ್ವ ಜನಿಕರಾಗಬಹುದು. ಇವರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ಯಾರು ತಿದ್ದುವುದಕ್ಕೆ ಸಾಧ್ಯವಾಗುತ್ತದೆ? ಬಸವೇಶ್ವರನ ಕಾಲದಿಂದ ತಿದ್ದು

ವುದಕ್ಕೆ ಪ್ರಯತ್ನ ಸತತಾ ಮಾಡಿದರೂ ಈ ಹೊತ್ತಿನವರೆಗೂ ಆ ಕೆಲಸ ಮುಗಿದಿಲ್ಲ ಆದುದರಿಂದ ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವು ದೇನೆಂದರೆ ಕಾಳಸಂತೆಯಲ್ಲಿ ತೊಡಗುವವರಿಗೆ ಕಳ್ಳ ಸಾಗಾಣಿಕೆ ನಡೆಸು ವವರಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸಬೇಕು. ಅಲ್ಲದೆ ಅವರು ರವಾನೆಗೆ ಉಪಯೋಗಿಸತಕ್ಕ ವಾಹನ ಮುಂತಾದುವುಗಳನ್ನು ಸರ್ಕಾರದ ವಶಕ್ಕೆ ತೆಗೆದು ಕೊಂಡು, ಅಂಥಹವರನ್ನು ಮುಟ್ಟುಗೋಲು ಹಾಕಬೇಕು ಈ ರೀತಿಯಾಗಿ ತಿದ್ದುಪಡಿ ಸಂಬಂಧಪಟ್ಟ ಕಾನೂನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲದೆ ಪಂಜಾಬಿನಲ್ಲಿ ಪ್ರತಾಪ್‌ಸಿಂಗ್ ಕೈರಾನ್ ಅವರು ಮುಖ್ಯ ಮಂತ್ರಿಗಳಾಗಿ ದ್ದಾಗ ಆಹಾರ ಪದಾರ್ಥಗಳು ಮತ್ತು ಜೀವನಾವಶ್ಯಕ ವಸ್ತುಗಳಲ್ಲಿ ಯಾವ ಅನೀತಿ, ವ್ಯವಹಾರ, ಮಾಡಿದರು ಅಂಥಹವರ ಕೈಗಳಿಗೆ ಬೇಡಿ ಹಾಕಿ ಮೆರವಣಿಗೆ ಮಾಡುತ್ತಿದ್ದರು. ಅಂಥ ಉಗ್ರ ಕ್ರಮಗಳನ್ನೂ ನಾವು ಸಹ ತೆಗೆದುಕೊಳ್ಳ ಬೇಕೆಂದು ಈ ಸಂದರ್ಭದಲ್ಲಿ ಸಲಹೆಮಾಡುತ್ತೇನೆ.

ದೇಶದಲ್ಲಿ ಚೆನ್ನಾಗಿ ಬೆಳೆಯಾಗಿದೆ, ಸುಭಿಕ್ಷವಿದೆ. ಆದರೂ ಸಹ ಜನರಿಗೆ ಕಷ್ಟವೇಕೆ ಎಂದು ಕೆಲವರು ಕೇಳಬಹುದು ಈಗ ರೈತರಿಗೆ ಮತ್ತು ಬೆಳೆಯು ವವರಿಗೆ ಒಳ್ಳೆಯ ಬೆಲೆ ಸಿಕ್ಕುತ್ತಿದೆ, ಸರ್ಕಾರ ಸಪೋರ್ಟಿಂಗ್ ಪ್ರೈಸ್ ಕೊಡು ತ್ತಿರುವುದರಿಂದ ರೆಮ್ಯುನರೇಟಿವ್ ಪ್ರೈಸ್ ರೈತನಿಗೆ ಸಿಕ್ಕುತ್ತಿದೆ. ಹಿಂದೆಂದೂ ಹೀಗೆ ಅವನಿಗೆ ಸಿಕ್ಕುತ್ತಿರಲಿಲ್ಲ. ಸುಗ್ಗಿಯ ಕಾಲ ಬಂದರೆ ಧಾರಣೆ ಬಹಳ ಮಟ್ಟಿಗೆ ಕೆಳಕ್ಕೆ ಇಳಿದು ಬರುತಿತ್ತು. ನಮ್ಮ ಸರ್ಕಾರ ಬೆಳೆಯುವವರಿಗೆ ಸಪೋರ್ಟಿಂಗ್ ಪ್ರೈಸ್ ಕೊಡುತ್ತಿರುವುದರಿಂದ ಬಡ ಬೋರೇಗೌಡನಿಗೆ ಸಹ ನಾಲ್ಕು ರೂಪಾಯಿ ಸಿಕ್ಕುತ್ತಿದೆ. ಇದಕ್ಕೆ ಸರ್ಕಾರದ ನೀತಿಯೇ ಕಾರಣವೆಂದು ಹೇಳುತ್ತೇನೆ.

ಆಹಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೇಡರ್ ಅಂಡ್ ರಿಕ್ರೂಟ್ ಮೆಂಟ್ ರೂಲ್ಸ್ ಮಾಡಬೇಕೆಂದೂ, ಆ ಇಲಾಖೆಯಲ್ಲಿರುವವರೆಲ್ಲ ಹೊರಗಡೆಯಿಂದ ಡೆಪ್ಯುಟೇಷನ್ ಮೇಲೆ ಬಂದವರಾದ್ದರಿಂದ, ಕೆಲಸದಲ್ಲಿ ಮುತುವರ್ಜಿ ಇರುವುದಿಲ್ಲ ವೆಂದೂ, ಆಹಾರ ಇಲಾಖೆಯನ್ನು ಒಂದು ಪ್ರತ್ಯೇಕ ಇಲಾಖೆಯನ್ನಾಗಿ ಮಾಡ ಬೇಕೆಂದೂ ನಾನು ಅನೇಕ ಸಲ ಒತ್ತಿ ಈ ಸದನದಲ್ಲಿ ಹೇಳಿದ್ದೇನೆ. ಅಲ್ಲಿ ಕೆಲಸ ಮಾಡುವವರಲ್ಲಿ ಅನೇಕರು ಹಣ ಸಂಪಾದನೆ ಮಾಡಿಕೊಂಡು ಮನೆ ಕಟ್ಟುತ್ತಿದ್ದಾರೆ, ಕಾರುಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಭದ್ರವಾಗಿದ್ದರೆ, ಈ ರೀತಿ ಮಾಡಲು ಅವಕಾಶವಿರುವುದಿಲ್ಲವಾದ್ದರಿಂದ ಆಹಾರ ಇಲಾಖೆಯನ್ನು ಒಂದು ಸ್ವತಂತ್ರವಾದ ಪ್ರತ್ಯೇಕ ಇಲಾಖೆಯನ್ನಾಗಿ ಮಾಡ ಬೇಕೆಂದು ಸಲಹೆಯನ್ನೂ ಸಹ ಮಾಡುತ್ತೇನೆ.

ರಚನಾತ್ಮಕವಾದ ಟೀಕೆಗಳನ್ನು ಒಪ್ಪಿಕೊಳ್ಳುವವರಲ್ಲಿ ನಾನು ಒಬ್ಬ. ಭೂ ಸುಧಾರಣೆ ಮಸೂದೆಯ ಬಗ್ಗೆ ಬೇಕಾದಷ್ಟು ಟೀಕೆ ಟಿಪ್ಪಣಿಗಳು ಬಂದುವು.

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಆದರೆ ಇತ್ತೀಚೆಗೆ ಭೂಸುಧಾರಣಾ ತಿದ್ದುಪಡಿ ವಿಧೇಯಕಕ್ಕೆ ರಾಷ್ಟ್ರಪತಿಯವರ ಅಂಗೀಕಾರ ದೊರೆತಿರುವುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಅದೊಂದು ಕ್ರಾಂತಿಕಾರಕವಾದ ವಿಧೇಯಕ ಎಂದು ಹೇಳಿದರೂ ತಪ್ಪಾಗಲಾರದು. ಭೂಮಿಯನ್ನೇ ಅವಲಂಬಿಸಿರುವ ಶೇಕಡ 60ರಷ್ಟು ಜನಗಳಿಗೆ, ನೊಂದ ಜನರಿಗೆ, ಭೂಹೀನ ಕಾರ್ಮಿಕರಿಗೆ, ಗೇಣಿದಾರರಿಗೆ ಅನುಕೂಲವಾಗಬೇಕು, ಉಳುವವನೇ ಭೂಮಿಯ ಒಡೆಯನಾಗಬೇಕು ಎನ್ನುವ ಘನೋದ್ದೇಶದಿಂದ ಈ ಭೂಸುಧಾರಣೆಯನ್ನು ನಾವು ತಂದಿದ್ದೇವೆ. ಭೂಮಿಗೆ ಸಂಬಂಧಪಟ್ಟ ಸಮಸ್ಯೆಗಳು ಪರಿಹಾರವಾದ ಮೇಲೆ ಕೆಲಸ ಅಲ್ಲಿಗೇ ಮುಗಿಯುವುದಿಲ್ಲ. ವ್ಯವಸಾಯ ಮತ್ತು ಕೈಗಾರಿಕೆಗಳು ಜೊತೆ ಜೊತೆಯಾಗಿ ಅಭಿವೃದ್ಧಿಯಾಗಬೇಕು. ಒಂದನ್ನು ಮಾಡಿ ಇನ್ನೊಂದನ್ನು ಬಿಡಬಾರದು. ಬರೀ ವ್ಯವಸಾಯವನ್ನೂ ಅನುಸರಿಸತಕ್ಕ ದೇಶವಾಗಲೀ, ಬರೀ ಕೈಗಾರಿಕೆಯನ್ನು ಅನುಸರಿಸತಕ್ಕ ದೇಶವಾಗಲೀ ಯಾವ ಮಟ್ಟದಲ್ಲಿವೆ ಎಂಬುದನ್ನು ಅವಲೋಕಿಸಿದಲ್ಲಿ ಯಾವ ಸ್ಥಿತಿಗತಿಯಲ್ಲಿವೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದುದರಿಂದ ವ್ಯವಸಾಯ ಮತ್ತು ಅದಕ್ಕೆ ಹೊಂದಿಕೊಂಡಿರುವ ಕೈಗಾರಿಕೆ ಒಟ್ಟೊಟ್ಟಿಗೇ ಅಭಿವೃದ್ಧಿಯಾಗಬೇಕು. ಆದುದರಿಂದ ನಾವು ತಂದಿರುವಂಥ ಭೂಸುಧಾರಣಾ ಕಾನೂನು ಏನಿದೆ ಅದರಿಂದ ಬಡ ಜನರಿಗೆ ಮತ್ತು ಬಡ ರೈತನಿಗೆ ನಿಜವಾಗಿ ಸಹಾಯವಾಗುತ್ತದೆಂದು ಹೇಳುತ್ತೇನೆ.

ಇರಿಗೇಷನ್ ಮತ್ತು ಪವರ್—ಇವೆರಡೂ ಸೇರಿ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವಂಥವುಗಳೆಂದರೆ ತಪ್ಪಾಗಲಾರದು. ನಮ್ಮಲ್ಲಿ ಘಟಪ್ರಭ, ಮಲಪ್ರಭ, ಹಾರಂಗಿ, ಹೇಮಾವತಿ ಕಂಬದಕಡ, ಕಪಿನಿ, ಮುಂತಾದ ಹತ್ತಾರು ನೀರಾವರಿ ಯೋಜನೆಗಳನ್ನು ತೆಗೆದು ನಮ್ಮ ಸಹಕಾರ ತೆಗೆದುಕೊಳ್ಳಲಾಗಿದೆ.

ಇದರಂತೆ, ಸುಮಾರು ಹತ್ತು ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದೇವೆ. ಆದರೆ ಇವುಗಳಲ್ಲಿ ಯಾವ ಪ್ರಾಜೆಕ್ಟನ್ನೂ ಕೂಡ ಇನ್ನೂ ಪೂರ್ತಿ ಮುಗಿಸಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಇವೆಲ್ಲಾ ಪ್ರಾಜೆಕ್ಟುಗಳನ್ನೂ ಪೂರ್ತಿ ಮಾಡುವುದಕ್ಕೆ ನಮ್ಮ ಕರ್ನಾಟಕ ಸರಕಾರಕ್ಕೆ ಕೊನೆ ಪಕ್ಷ ಸುಮಾರು ಮೂನ್ನೂರೈವತ್ತು ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ. ಎಲ್ಲಾ ಪ್ರಾಜೆಕ್ಟುಗಳನ್ನು ಮುಗಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಯಾವ ಯೋಜನೆಯೂ ಇನ್ನೂ ಪೂರ್ತಿಯಾಗಿಲ್ಲ. ಇದರಲ್ಲಿ ನಮಗೆ ಒಂದು ಸಮಾಧಾನ ಎಂದರೆ, ನಮ್ಮ ಸರಕಾರದವರು ಬಹಳ ದಿಟ್ಟತನದಿಂದ ನಮ್ಮ ರಾಜ್ಯದಲ್ಲಿದ್ದ ಸುಮಾರು ಎಪ್ಪತ್ತೆರಡು ಕೋಟಿಯಷ್ಟು ಇದ್ದ ಓವರ್‌ಡ್ರಾಫ್ಟನ್ನು ಸರಿದೂಗಿಸಿ ಇಲ್ಲಿಯವರೆಗೆ ಸುಮಾರು ನೂರ ಅರವತ್ತು ಕೋಟಿಯಷ್ಟು ಹಣವನ್ನು ಈ ಪ್ರಾಜೆಕ್ಟುಗಳಿಗೆ

ಖರ್ಚು ಮಾಡಿದ್ದಾರೆ ಇದರಲ್ಲೇನಾಗಿದೆ ಎಂದರೆ ಕೆಲವು ಕಡೆ ಡ್ಯಾಂ ಗಳಾಗಿವೆ, ಚಾನಲ್ಲುಗಳಾಗಿಲ್ಲ, ಕೆಲವು ಕಡೆ ಚಾನಲ್ಲುಗಳಾಗಿವೆ ಆದರೆ ಡ್ಯಾಂ ಆಗಿಲ್ಲ. ಇನ್ನು ಕೆಲವು ಕಡೆ ಜಮೀನನ್ನು ಸ್ವಾಧಿನಪಡಿಸಿಕೊಳ್ಳುವುದರಲ್ಲಿ ವಿಳಂಬವಾಗಿದೆ. ಇಂತಹ ಒಂದು ಪರಿಸ್ಥಿತಿಯಿಂದಾಗಿ, ನಮ್ಮಲ್ಲಿರುವ ಯೋಜನೆಗಳೆಲ್ಲಾ ಅರ್ಧಂಬರ್ಧವಾಗಿ ಇನ್ನೂ ಪೂರ್ತಿಯಾಗಿ ಮುಗಿದಿಲ್ಲ. ಇದರ ಜೊತೆಗೆ ನಮ್ಮ ರಾಜ್ಯ ಸರಕಾರದವರು ಕೇಂದ್ರದವರನ್ನು ಒತ್ತಾಯಮಾಡಿ ತಮ್ಮ ಪ್ರಭಾವವನ್ನು ಬೀರಿ ಕಾಳೀ ನದಿ ಯೋಜನೆ ಮುನ್ನ ಕಾರ್ಯಗತ ಮಾಡಲು ಪ್ರಯತ್ನ ಮಾಡಿದ್ದಾರೆ ಮತ್ತು ಇದರ ಎಲ್ಲ ಖರ್ಚನ್ನೂ ಕೇಂದ್ರದವರೇ ವಹಿಸಿಕೊಳ್ಳುವಂತೆ ವಾಗ್ದಾನ ಮಾಡಿದ್ದಾರೆ. ಕಾಳಿ ನದಿ ಯೋಜನೆ ಪೂರ್ತಿ ಮಾಡಿದರೆ ನಮ್ಮ ದೇಶದ ಜನತೆಗೆ ಸುಖವಾಗುತ್ತದೆ ಎಂದು ಇದನ್ನು ತ್ವರಿತವಾಗಿ ಮಾಡಲು ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದು ಕೊಳ್ಳುತ್ತಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ:

Power and Irrigation are the two twin pillars of economic development.

"ಪವರು ಪ್ರಾಜಕ್ಟುಗಳಿಂದ ನಮ್ಮ ರಾಜ್ಯಕ್ಕೆ ಬಹಳ ಅನುಕೂಲವಾಗುತ್ತದೆ. ಐವತ್ತು ವರ್ಷಗಳ ಹಿಂದೆಯೇ ನಮ್ಮ ರಾಜ್ಯದಲ್ಲಿ ಪವರು ಪ್ರಾಜಕ್ಟುಗಳಾಗ ಬೇಕೆಂದು ಶ್ರೀ ಎಮ್. ವಿ. ರವರು ಹೇಳಿರುವುದನ್ನು ನಾವು ನೆನಪು ಮಾಡಿ ಕೊಳ್ಳಬೇಕು."

The man who brought electricity to the East for the first time was Sir K. Seshadri Iyer.

ನಿಮಗೆ ಬೇಕಾದರೆ ಪ್ರಾಜೆಕ್ಟುಗಳ ಎಲ್ಲ ಅಂಕೆ ಅಂಶಗಳನ್ನೂ ಒದಗಿಸಿ ಕೊಡುತ್ತೇನೆ. ನಮ್ಮ ದೇಶದಲ್ಲಿ ಪವರು ಪ್ರಾಜೆಕ್ಟುಗಳು ಹೆಚ್ಚಾಗಿ ಮಾಡ ಬೇಕೆಂದು ಕೇಂದ್ರದ ಮೇಲೆ ಒತ್ತಾಯ ತಂದು ಕಾಳಿ ಯೋಜನೆ ನಮ್ಮ ರಾಜ್ಯದಲ್ಲಿ ಮಾಡಲು ಪ್ರಯತ್ನ ಮಾಡಿದರು. ಕಾಳೀ ಯೋಜನೆಯೇ ಅಲ್ಲದೆ ನಮ್ಮ ರಾಜ್ಯ ದಲ್ಲಿ ಇನ್ನೂ ಹತ್ತು ಯೋಜನೆಗಳು ಆಗುತ್ತಿವೆ. ಇವೆಲ್ಲವೂ ಪೂರ್ತಿಯಾದರೆ ನಮಗೆ ಹೆಚ್ಚು ಪವರು ಸಿಗುತ್ತದೆ ಮತ್ತು ನಮ್ಮ ದೇಶ ಸುಭಿಕ್ಷವಾಗುತ್ತದೆ. ಸುಮ್ಮನೆ ಬರೀ ಭಾಷಣ ಮಾಡುವುದರಿಂದ ಜನತೆಗೆ ಅಕ್ಕಿ ಬರುವುದಿಲ್ಲ. ಮತ್ತು Production ಆಗುವುದಿಲ್ಲ. Rice cannot be manufactured. Unless you produce, you cannot distribute. ಪ್ರೊಡಕ್ಷನ್ ಹಾಗೂ ಡಿಸ್ಟ್ರಿಬ್ಯೂಷನ್ ಜೊತೆಯಲ್ಲೇ ಹೋಗಬೇಕು. ಇದಕ್ಕಾಗಿಯೇ ಕೋಟಿ ಗಟ್ಟಲೆ ಹಣವನ್ನು ಪವರು ಪ್ರಾಜಕ್ಟುಗಳಿಗಾಗಿ ಖರ್ಚು ಮಾಡುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು

ಇದನ್ನು ಮಾಡುವುದು ನಮ್ಮ ರಾಜ್ಯದ ಜವಾಬುದಾರಿ. ಪವರು ಪ್ರಾಜಕ್ಟು ಗಳನ್ನು ಹೆಚ್ಚು ಮಾಡಬೇಕೆಂದು ಹಾಗೂ ಇರಿಗೇಷನ್ ಪ್ರಾಜಕ್ಟುಗಳನ್ನೂ ಸಹ ಮಾಡಬೇಕೆಂದು ಸರಕಾರದವರು ಸರಿಯಾದ ಒಂದು ಕಾರ್ಯಕ್ರಮ ಹಾಕಿಕೊಂಡು ಮುಂದುವರಿಯಬೇಕು. ಇದರಿಂದ ನಮ್ಮ ದೇಶದ ಸಂಪತ್ತು ತನ್ನಷ್ಟಿಗೆ ತಾನೆ ಹೆಚ್ಚಾಗುತ್ತದೆ. ಯಾರು ನಮ್ಮ ದೇಶದ ಜನತೆಗೆ ಅನ್ನದಾನ ಮಾಡುತ್ತಾರೋ ಅಂತಹ ರೈತನಿಗೆ ಅವನಿಗೆ ಎಲ್ಲಾ ಸೌಕರ್ಯಗಳನ್ನೂ ಕೊಟ್ಟು, ಹೆಚ್ಚು ಉತ್ಪಾದನೆ ಬರುವಂತೆ ಮಾಡಿದರೆ ಜನತೆಗೆ ಆಗ ಸುಖವಾಗುತ್ತದೆಯೇ ವಿನಾ ಇಲ್ಲದಿದ್ದರೆ ಏನೂ ಆಗುವುದಿಲ್ಲ. ಇದಕ್ಕಾಗಿ ತಕ್ಕ ಕಾರ್ಯಕ್ರಮವನ್ನು ಸರಕಾರ ಕೂಡಲೇ ಹಾಕಿಕೊಂಡು ಮುಂದುವರಿಯಬೇಕೆಂದು ನಾನು ಇಲ್ಲಿ ಸಲಹೆ ಮಾಡು ತ್ತೇನೆ ಇದರಲ್ಲಿ ಕೆಲಸಗಳನ್ನು ಮಾಡುವಾಗ ಪ್ರಯಾರಿಟಿ ಬೇಸಿಸ್ ಮೇಲೆ ಕೆಲಸಗಳನ್ನು ತೆಗೆದುಕೊಂಡು, ಬೇಗನೆ ಮುಗಿಸಬೇಕೆಂದು ಸಲಹೆ ಮಾಡುತ್ತೇನೆ.

ತಮಗೆಲ್ಲರಿಗೂ ಗೊತ್ತಿರುವಂತೆ ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಬಹಳವಾಗಿದೆ. ಇದನ್ನು ಸರಿಯಾಗಿ ಅಭಿವೃದ್ಧಿ ಮಾಡಲೇಬೇಕು ರಾಷ್ಟ್ರಮಟ್ಟ ದಲ್ಲಿ ಅರಣ್ಯ ಸಂಪತ್ತು ಶೇಕಡಾ 23 ರಷ್ಟು ಇದೆ. ನಮ್ಮ ರಾಜ್ಯದಲ್ಲಿ ಶೇಕಡ 15 ರಷ್ಟು ಅರಣ್ಯ ಸಂಪತ್ತು ಇದೆ. ನಮ್ಮಲ್ಲಿರತಕ್ಕ ಪ್ರಕೃತಿ ಸೌಂದರ್ಯ ಬೇರೆಲ್ಲಿಯೂ ಇಲ್ಲ. ಹಾಗಿರುವಾಗ ಇದುವರೆಗೆ ಶೇಕಡಾ 15 ರಷ್ಟು ಇದ್ದ ಅರಣ್ಯ ಸಂಪತ್ತು ಕಡಿಮೆಯಾಗುತ್ತಾ ಬರುತ್ತಿದೆ. ಇಂದು ಇದು ಶೇಕಡಾ 13 ರಷ್ಟು ಆಗಿದೆ. ನಮ್ಮ ನಾಡು ಚಿನ್ನದ ನಾಡು, ಗಂಧದ ಗುಡಿಗೆ ಹೆಸರಾದ ನಾಡು ಎಂದು ಕವಿಗಳು ಹೇಳಿರುವುದನ್ನು ಕೇಳಿದ್ದುದುಂಟು.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅದಕ್ಕೆ ದೇವರಾಜರ ಬೀಡು ಎಂದು ಸೇರಿಸಿದರೆ ವನವಾಸ ಮಾಡಲು ಸರಿಹೋಗುತ್ತದೆ.

ಶ್ರೀ ಕೆ. ಆರ್. ಎಸ್. ನಾಯ್ಡು :—ಸುಮಾರು ನೂರು ವರ್ಷಗಳಿಂದಲೂ ಚೆನ್ನಾಗಿ ಬೆಳೆದಿದ್ದ ಕಾಡುಗಳನ್ನು, ನೀವು ಆಡಳಿತದಲ್ಲಿದ್ದಾಗ ಕಡಿದು ನಾಶ ಮಾಡಿದಿರಿ ಎನ್ನುವುದನ್ನು ತಾವು ಮರೆಯಬಾರದು. ಕಾಡನ್ನು ಬೆಳೆಸಬೇಕಾದರೆ ಬಹಳ ಕಷ್ಟ. ನಿಮ್ಮ 25 ವರ್ಷದ ಆಳ್ವಿಕೆಯಲ್ಲಿ ಕಾಡಿನಲ್ಲಿರುವ ಜಮೀನನ್ನು ಸಾಗುವಳಿಗೆ ಕೊಟ್ಟು ಕಾಡುಗಳೆಲ್ಲಾ ನಾಶವಾದುವು....ಇದೆಲ್ಲಾ ನಿಮ್ಮ ಆಳ್ವಿಕೆಯ ಪ್ರಸಾದವೇ ? ಇದೂ ಅಲ್ಲದೆ ಗಂಧದ ಮರದ ಕಳ್ಳ ಸಾಗಾಣಿಕೆಯೂ ಕೂಡ ಅನೇಕ ಕಡೆಗಳಲ್ಲಿ ನಡೆಯುತ್ತಿವೆ. ಇದನ್ನು ತಪ್ಪಿಸಲು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇನ್ನು ಮುಂದಾದರೂ ಒಂದಂಗುಲ ಭೂಮಿಯನ್ನು

ಹೊರಕ್ಕೆ ಕೊಡಕೂಡದು ಎಂದು ಸರಕಾರ ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳ ಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಈಗಾಗಲೇ ನಮ್ಮ ಅರಣ್ಯ ಇಲಾಖೆಯಲ್ಲಿ ಇಬ್ಬರು ಪ್ರತ್ಯೇಕವಾದ ಕನ್‌ಸರ್‌ವೇಟರುಗಳೆಂದು ಮಾಡಿರುತ್ತಾರೆ. ಒಬ್ಬರು ವನ್ಯಮೃಗಗಳ ಸಂರಕ್ಷಣೆಗಾಗಿ, ಇನ್ನೊಬ್ಬರು ಕಾಡುಗಳನ್ನು ಸಂರಕ್ಷಿಸು ವುದಕ್ಕಾಗಿ ಎಂದು ನೇಮಕ ಮಾಡಿರುತ್ತಾರೆ. ಇನ್ನು ಮುಂದೆ ಆನೆ, ಜಿಂಕೆ ಇಂತಹ ಕಾಡು ಪ್ರಾಣಿಗಳು ಕಾಡಿನಲ್ಲಿರುವುದೋ ಇಲ್ಲವೋ ಎನ್ನುವ ಸಂಶಯ ನನಗೆ ಬರುತ್ತಿದೆ ಮುಂದೆ ಬರೀ ಫೋಟೋಗಳನ್ನು ಹುಡುಗರಿಗೆ ಶಾಲೆ ಮಕ್ಕಳಿಗೆ ತೋರಿಸಬೇಕಾಗುತ್ತದೇನೋ? ಅದಕ್ಕಾಗಿ ಈಗಿನಿಂದ ತಕ್ಕ ಅಭಿ ವೃದ್ಧಿ ಕಾರ್ಯಗಳನ್ನು ತೆಗೆದುಕೊಂಡು ಕಾಡುಗಳನ್ನು ಸಂರಕ್ಷಣೆ ಮಾಡ ಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ರಾಜ್ಯದ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯನ್ನು ಅಭಿವೃದ್ಧಿ ಮಾಡಬೇಕು. ರೈತರಿಗೆ ನೇರವಾಗಿ ಹಣ ತಲಪಬೇಕಾದರೆ ಈ ಇಲಾಖೆಯ ಮೂಲಕವೇ. ರೈತರಿಗೆ ಹಣ ದೊರೆತರೆ ಅವನು ಎತ್ತುಗಳನ್ನು ಕೊಳ್ಳಲು ಅನುಕೂಲವಾಗುತ್ತದೆ ಇದರಿಂದ ಉತ್ಪತ್ತಿ ಹೆಚ್ಚು ಮಾಡಲು ಸಾಧ್ಯವಾಗು ತ್ತದೆ. ಹಿಂದೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಹೇಳಿ ದಂತೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಹಳ್ಳಿಕಾರು ಅಮೃತ ಮಹಲ್ ಥಳಿ ದನಗಳು ಹಾಗೂ ಅಮೃತ ಮಹಲ್ ಕಾವಲುಗಳು ಎಂದು ಇದ್ದವು. ಇಲ್ಲಿಗೆ ರೈತರು ದನಗಳನ್ನು ತಂದು ಚೆನ್ನಾಗಿ ಮೇಯಿಸಿ ತಳಿಯನ್ನು ಅಭಿವೃದ್ಧಿ ಮಾಡುತ್ತಿದ್ದರು. ಈಗ ಎಲ್ಲರೂ ರಾಸಾಯನಿಕ ಗೊಬ್ಬರ ಬೇಕೆಂದು ಫರ್ಟಿಲೈಸರು ಕೊಳ್ಳಲು ಹೊರಟಿದ್ದಾರೆ....ಸುಮಾರು 25 ವರ್ಷಗಳಿಂದ ನೀವೆಲ್ಲ ರಾಜ್ಯವಾಳಿದಾಗ ಮಾಡಿದ ತಪ್ಪುಗಳನ್ನು ಒಂದೆರಡು ವರ್ಷಗಳಲ್ಲಿ ಅವನ್ನು ತಿದ್ದುವುದು ಸಾಧ್ಯವಿಲ್ಲ. ನಿಮಗೆಲ್ಲಾ ತಿಳಿದಿರುವ ಹಾಗೆ ರಾಜ್ಯದಲ್ಲಿ ಬಡ ರೈತರಿಗೆ ಭೂಮಿ ಹಂಚಬೇಕೆಂದು ಸುಮಾರು ನಾಲ್ಕು ಲಕ್ಷ ಎಕರೆಯಷ್ಟು ಭೂಮಿಯನ್ನು ಕಾಡುಗಳಿಂದ, ಹಾಗೂ ಇನ್ನಿತರ ಕಡೆಗಳಿಂದ ತೆಗೆದುಕೊಂಡು ಹಂಚಲು ರೈತರಿಗಾಗಿ ಕೊಟ್ಟಿದ್ದಾರೆ. ಇದರಿಂದಾಗಿ ಇಂದು ರಾಜ್ಯದಲ್ಲಿ ದನಗಳಿಗೆ ಹುಲ್ಲುಗಾವಲುಗಳೇ ಇಲ್ಲದಂತಾಗಿದೆ. ಫಾರೆಸ್ಟು ಭೂಮಿಗಳೂ ಕೂಡ ಆಹಾರ ಬೆಳೆಯಬೇಕೆಂದು ರೈತರಿಗೆ ಕೊಡ ಲಾಯಿತು. ಇವಕ್ಕೆಲ್ಲಾ ಕಾರಣರಾರು? ನಾವು ಕಾರಣರೇ ನೀವೇ ಇದನ್ನು ತಾವೇ ತಿಳಿಸಬೇಕು. ನಾನು ಮೊದಲೇ ಹೇಳಿದೆ. ಆಗ ಶ್ರೀ ದೇವೇಗೌಡರು ಇರಲಿಲ್ಲ. ರಚನಾತ್ಮಕವಾದ ಟೀಕೆಗಳಿಗೆ ನಾವು ಒಪ್ಪುತ್ತೇವೆಂದು. ರೈತರಿಗೆ ನೇರವಾದ ಸಂಬಂಧ ಇರುವುದು ಅನಿಮಲ್ ಹಸ್‌ಬೆಂಡ್ರಿ ಇಲಾಖೆಯ ಮೂಲಕ. ಇಂದು ಹೆಚ್ಚು ಹಾಲು ಉತ್ಪಾದನೆ ಮಾಡಬೇಕೆಂದು ಸರಕಾರದವರು ಕೇಂದ್ರ ಸರಕಾರದ ಮೂಲಕ ವರ್ಲ್ಡ್ ಬ್ಯಾಂಕು ಇವರ ಸಹಾಯ ಪಡೆದು ಒಂದು ಮಿಲ್

ಶ್ರೀ ಕೆ. ಆರ್. ಎಸ್. ನಾಯ್ಡು).—

ಕಾರ್ಪೊರೇಶನ್ ಮಾಡಬೇಕೆಂದು ಇದ್ದಾರೆ. ಇದರಿಂದ ನಮ್ಮ ರಾಜ್ಯದ ತಳಿಗಳನ್ನು ಅಭಿವೃದ್ಧಿ ಮಾಡಲು ಬಹಳ ಸಹಾಯವಾಗುತ್ತದೆ. ಈಗಾಗಲೇ ನಮ್ಮ ಬೆಂಗಳೂರು ಸುತ್ತಮುತ್ತಲೂ ಸುಮಾರು 25 ಮೈಲಿಗಳ ದೂರದಲ್ಲಿ ಪರದೇಶದಿಂದ ತಂದಿರುವ ಜರ್ಸಿ ಹೌಸ್ಟೀ ಹಾಗೂ ಇನ್ನಿತರ ತರಹದ ತಳಿಗಳನ್ನು ತಂದು ಅಭಿವೃದ್ಧಿ ಮಾಡಿದ್ದಾರೆ. ಇದರಿಂದ ಹೆಚ್ಚು ಹಾಲು ಉತ್ಪಾದನೆ ಮಾಡಲು ಅವಕಾಶವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ ಇಲ್ಲಿಯವರೆಗೂ ದೇಶ ಹೆಚ್ಚು ಅಭಿವೃದ್ಧಿಯಾಗದೆ ಇರಲು ಕಾರಣ ನಿಮ್ಮ ಆಡಳಿತದಲ್ಲಿದ್ದ ವೆಸ್ಟೆಡ್ ಇಂಟರೆಸ್ಟೇ ಕಾರಣ ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ರಾಜ್ಯವನ್ನು ಕೈಗಾರಿಕೆಯಲ್ಲಿ ಮುಂದಕ್ಕೆ ತರಬೇಕೆಂದು ಹಿಂದೆ ಇದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳುತ್ತಲೇ ಬರುತ್ತಿದ್ದರು. ಅವರಿಂದಲೇ ನಮ್ಮ ರಾಜ್ಯ ಮಾಡಲ್ ಸ್ಟೇಟು ಎನ್ನುವ ಹೆಸರನ್ನೂ ಸಹ ಪಡೆಯಲು ಕಾರಣವಾಯಿತು. ನಮ್ಮಲ್ಲಿ 300 ಮೈಲಿಯುವರೆಗೆ ಕರಾವಳಿ ಪ್ರದೇಶವಿರುವುದರಿಂದ ಷಿಪ್ ಬಿಲ್ಡಿಂಗ್ ಯಾರ್ಡ್ ಆಗಬೇಕು. ಜೊತೆಗೆ ಮೇರಿನ್ ಫಿಷಿಂಗ್, ಇನ್‌ಲೆಂಡ್ ಫಿಷಿಂಗ್ ಅಭಿವೃದ್ಧಿ ಕೂಡ ಆಗಬೇಕು. ಆಗ ಮೀನಿನ ಅಭಿವೃದ್ಧಿ ಸಾಕಷ್ಟು ಆಗುವುದಕ್ಕೆ ಅವಕಾಶವಾಗುತ್ತದೆ. ಈಗ ನಮ್ಮಲ್ಲಿ ಸಾಕಷ್ಟು ಕೋಲ್ಡ್ ಸ್ಟೋರೇಜ್ ಫೆಸಿಲಿಟೀಸ್ ಇಲ್ಲ. ಅದನ್ನು ಜಾಸ್ತಿ ಮಾಡಬೇಕು. ಮೀನಿನ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ಬೇಕಾಗಿಲ್ಲವಾದ್ದರಿಂದ ಅದರ ಒಂದು ಅಭಿವೃದ್ಧಿ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ, ನಮ್ಮ ಒಂದು ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ, ನಮ್ಮ ಬಡತನ ಹೋಗಬೇಕಾದರೆ, ಆಹಾರದ ಪರಿಸ್ಥಿತಿ ಉತ್ತಮವಾಗಬೇಕಾದರೆ ಮುಖ್ಯವಾಗಿ ಕೈಗಾರಿಕಾ ಅಭಿವೃದ್ಧಿ ಮತ್ತು ವ್ಯವಸಾಯದ ಅಭಿವೃದ್ಧಿ ಆಗಬೇಕಾಗಿದೆ Industrialise or perish ಎಂದು ಸರ್. ಎಂ. ವಿಶ್ವೇಶ್ವರಯ್ಯನವರು 1930ನೇ ಇಸವಿಯಲ್ಲಿಯೇ ಹೇಳಿದ್ದರು; ಆದಕಾರಣ ನಾವು ಕೈಗಾರಿಕಾ ರಂಗದಲ್ಲಿ ಮುಂದುವರೆಯುವುದು ಹೆಚ್ಚಿನ ಅವಶ್ಯಕವಿದೆ. ಅವರ ಕಾಲದಲ್ಲಿ ಅನೇಕ ಕೈಗಾರಿಕೆಗಳು ಸ್ಥಾಪನೆಯಾದವು. ಅವುಗಳನ್ನು ಇನ್ನೂ ಜಾಸ್ತಿ ಮಾಡಬೇಕಾಗಿದೆ. Industrialisation, urbanisation, modern civilization, ಇವುಗಳಿಂದ ನಾವು ಇಂದು ಸೋಮಾರಿಗಳಾಗಿದ್ದೇವೆ. ಇವು ನಮ್ಮನ್ನು ಹಾಳು ಮಾಡಿವೆ. ನಾವು ಕೈಗಾರಿಕಾ ರಂಗದಲ್ಲಿ ಮುಂದುವರಿಯಬೇಕಾದರೆ ಮುಖ್ಯವಾಗಿ ಕಾಟೇಜ್ ಇಂಡಸ್ಟ್ರಿಗೆ, ವಿಲೇಜ್ ಇಂಡಸ್ಟ್ರಿಗೆ ಮತ್ತು ರೂರಲ್ ಇಂಡಸ್ಟ್ರಿಗಳಿಗೆ ಹೆಚ್ಚಿನ ಗಮನ ಕೊಟ್ಟು ಅಭಿವೃದ್ಧಿ ಮಾಡಬೇಕಾಗಿದೆ ಸಣ್ಣ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಯಾಗಬೇಕಾಗಿದೆ. ಇದಕ್ಕಾಗಿಯೇ ಇಂದು ಪ್ರತ್ಯೇಕವಾದ ಮಿನಿಸ್ಟ್ರಿ ಇದೆ. ತಮಗೆಲ್ಲಾ ಗೊತ್ತಿರುವಂತೆ ಕೇಂದ್ರ ಸರ್ಕಾರದವರು ಮೊನ್ನೆ ತಾನೆ ನಮ್ಮ ರಾಜ್ಯದಲ್ಲಿ ಒಂದು

ಸರ್ವೆ ನಡೆಸಿ ನಮ್ಮ ರಾಜ್ಯದ 19 ಜಿಲ್ಲೆಗಳ ಪೈಕಿ 11 ಜಿಲ್ಲೆಗಳು ಕೈಗಾರಿಕಾ ರಂಗದಲ್ಲಿ ಹಿಂದುಳಿದಿವೆ ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಲ್ಲಿಯೂ ರಾಯಚೂರು, ಮೈಸೂರು ಮತ್ತು ತುಮುಕೂರು ಜಿಲ್ಲೆಗಳು ಅತಿ ಹಿಂದುಳಿದ ಜಿಲ್ಲೆಗಳು ಎಂದು ಕರೆದಿದ್ದಾರೆ. ಇಂಡಸ್ಟ್ರಿಯಲ್ ಪೊಟೆನ್ಸಿಯಾಲಿಟಿ ಜಾಸ್ತಿಯಾಗಬೇಕಾದರೆ ಸರ್ಕಾರದವರು ಪ್ರತಿಯೊಂದು ಜಿಲ್ಲೆಯಲ್ಲಿಯೂ ಟೆಕ್ನೋ ಎಕನಾಮಿಕ್ ಸರ್ವೆ ಮಾಡಬೇಕು. ಮುಖ್ಯವಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳು ಮತ್ತು ಕಾಟೇಜ್ ಇಂಡಸ್ಟ್ರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಸ್ಥಾಪನೆಯಾಗಬೇಕು. ಇಂದು ಶೇಕಡಾ 40ರಷ್ಟು ಇಂಡಸ್ಟ್ರಿಗಳು ಬೆಂಗಳೂರು ನಗರದಲ್ಲಿಯೇ ಕೇಂದ್ರೀಕೃತವಾಗಿವೆ. ಇದು ಸರಿಯಲ್ಲ; ಕೈಗಾರಿಕೆಗಳನ್ನು ಈಗಿನಿಂದಲೇ ವಿಕೇಂದ್ರೀಕರಣ ಮಾಡದಿದ್ದರೆ ಮುಂದೆ ಜನರನ್ನು ಪಟ್ಟಣ ಬಿಟ್ಟು ಹೋಗಿ ಎಂದು ಹೇಳುವ ಕಾಲ ಬರಬಹುದು; ಬೆಂಗಳೂರಿನ ಜನಸಂಖ್ಯೆ ಮೊದಲು 2 ಲಕ್ಷವಿತ್ತು; ಈಗ 20 ಲಕ್ಷಕ್ಕೆ ಬಂದಿದೆ. ಇದೇ ರೀತಿ ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಾ ಹೋದರೆ ಬೇಕಾದಷ್ಟು ಸಮಸ್ಯೆಗಳು ಬರಬಹುದು; ಈಗಾಗಲೇ ದೆಹಲಿ, ಮುಂಬೈ, ಕಲ್ಕತ್ತಾ ನಗರಗಳಲ್ಲಿ ಅನೇಕ ಸಮಸ್ಯೆಗಳು ಬಂದಿವೆ. ಈ ದೃಷ್ಟಿಯಿಂದ ಕಾಟೇಜ್ ಇಂಡಸ್ಟ್ರಿ, ರೂರಲ್ ಇಂಡಸ್ಟ್ರಿ, ಮತ್ತು ವಿಲೇಜ್ ಇಂಡಸ್ಟ್ರಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಸ್ಥಾಪನೆ ಮಾಡಬೇಕು. ಆಗ ಜನರು ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುವುದು ತಪ್ಪುತ್ತದೆ ಮತ್ತು ನಗರಗಳ ಸಮಸ್ಯೆಗಳು ಸಹ ಕಡಿಮೆಯಾಗುತ್ತದೆ. ಸುಮಾರು 850 ಕೋಟಿ ರೂಪಾಯಿಗಳ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗುತ್ತಿದೆ. ಕುದುರೆಮುಖ ಯೋಜನೆ ಕಾರ್ಯಗತವಾಗುತ್ತಿದೆ. ಇದೇ ರೀತಿ ನಮ್ಮ ರಾಜ್ಯದಲ್ಲಿ ದೊರೆಯುವ ಎಲ್ಲ ಖನಿಜ ಸಂಪತ್ತನ್ನು ನಾವು ಉಪಯೋಗಿಸಿಕೊಂಡಿದ್ದೇ ಆದರೆ ಕೈಗಾರಿಕಾ ರಂಗದಲ್ಲಿ ನಾವು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯವಾಗಿ ಬೇಕು. ಆಗ ಕೆಲಸ ಜಾಗ್ರತೆಯಾಗುತ್ತದೆ. ಮುಖ್ಯವಾಗಿ ಕೈಗಾರಿಕಾ ಬೆಳವಣಿಗೆ ಹಳ್ಳಿ ಮತ್ತು ಡಿಲ್ಲಿಯಲ್ಲಿ ಒಂದೇ ರೀತಿ ಇರಬೇಕು. ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಇಂದು ಅನೇಕ ಬ್ಯಾಂಕ್‌ಗಳು ಹಣದ ಸಹಾಯ ಮಾಡುತ್ತಿವೆ. ಅದನ್ನು ಉಪಯೋಗಿಸಿಕೊಂಡರೆ ಕೈಗಾರಿಕಾ ಬೆಳವಣಿಗೆ ಜಾಸ್ತಿಯಾಗುತ್ತದೆ. ಕೈಗಾರಿಕೆಗಳು ಒಂದೇ ಭಾಗದಲ್ಲಿ ಕೇಂದ್ರೀಕೃತವಾದರೆ ಕೊಳಚೆ ಪ್ರದೇಶಗಳು ಹೆಚ್ಚುವುದಕ್ಕೆ ಅವಕಾಶವಿದೆ. ಮೊದಲು ಬೆಂಗಳೂರು ನಗರದಲ್ಲಿ ಹತ್ತು ಹನ್ನೆರಡು ಕೊಳಚೆ ಪ್ರದೇಶಗಳು ಇದ್ದರೆ ಇಂದು 144ರವರೆಗೆ ಹೆಚ್ಚಿವೆ. ಅದಕ್ಕಾಗಿ ಇಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಎಂದು ಮಾಡಿದ್ದಾರೆ. ಕೊಳಚೆ ಪ್ರದೇಶಗಳು ಕಡಿಮೆಯಾಗಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂಡಸ್ಟ್ರಿಗಳು ಸ್ಥಾಪನೆಯಾಗಬೇಕು. ಆಗ ಜನರು ವಲಸೆ ಬರುವುದು ಕಡಿಮೆಯಾಗುತ್ತದೆ. ಕೆಟ್ಟು ಪಟ್ಟಣ ಸೇರು ಎಂಬ ಗಾದೆಯಂತೆ ಇಂದು ಹಳ್ಳಿಯ ಬಡ ಜನರು ಉದ್ಯೋಗ

(ಶ್ರೀ ಕೆ. ಆರ್. ಎಸ್. ನಾಯ್ಡು)

ವಿಲ್ಲದ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಇದರಿಂದಲೇ ಬೆಂಗಳೂರಿನ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಕೊಳಚೆ ಪ್ರದೇಶಗಳಿಗೂ ಮತ್ತು ಕೈಗಾರಿಕೆಗಳಿಗೂ ಒಂದು ರೀತಿಯ ಸಂಬಂಧವಿದೆ. ಇದನ್ನು ಹೋಗಲಾಡಿಸಬೇಕಾದರೆ ಕೈಕಾರಿಕೆಗಳು ಒಂದೇ ಕಡೆ ಕೇಂದ್ರೀಕರಣವಾಗುವುದು ತಪ್ಪಬೇಕು. ಧಾರವಾಡ ಜಿಲ್ಲೆ ಮೊದಲು ಕೈಗಾರಿಕಾ ರಂಗದಲ್ಲಿ ಬಹಳ ಹಿಂದುಳಿದ ಜಿಲ್ಲೆಯಾಗಿತ್ತು. ಗದಗ್‌ನಲ್ಲಿ ಕಾಟನ್‌ಮಿಲ್‌ನ್ನು ಕೇವಲ 9 ತಿಂಗಳುಗಳಲ್ಲಿ ಸ್ಥಾಪನೆ ಮಾಡಿದ್ದಾಗ ಅದರ ಬಗ್ಗೆ ಕೇಂದ್ರಸರ್ಕಾರದವರು ಒಂದು ಒಳ್ಳೆಯ ರಿಪೋರ್ಟ್ ಕೊಟ್ಟರು. ಆ ಮಿಲ್ ಸ್ಥಾಪನೆಯಾದ್ದರಿಂದ ಅನೇಕ ಜನರಿಗೆ ಕೆಲಸ ಸಿಗುವುದಕ್ಕೆ ಅವಕಾಶವಾಯಿತು. ಹಿಂದಿನ ಸರ್ಕಾರದವರು ಮೈಸೂರು ಮಿನರ್ವ ಮಿಲ್‌ನ್ನು ಮುಚ್ಚಿದ್ದರು. ಅದನ್ನು ನಮ್ಮ ಸರ್ಕಾರದವರು ಪುನಹ ಪ್ರಾರಂಭ ಮಾಡಿದ್ದು ಸಂತೋಷದ ವಿಷಯ. ಸಕ್ಕರೆ ಕಾರ್ಖಾನೆಗಳು ಇಂದು ನಮ್ಮ ರಾಜ್ಯದಲ್ಲಿ ಜಾಸ್ತಿಯಾಗುತ್ತಿವೆ. ನಾಲಾ ಪ್ರದೇಶಗಳಲ್ಲಿ, ನದಿ ಬಯಲಿನಲ್ಲಿ ಹೆಚ್ಚು ಹೆಚ್ಚು ಕಬ್ಬನ್ನು ಬೆಳೆದರೆ ಸಕ್ಕರೆ ಉತ್ಪಾದನೆ ಹೆಚ್ಚಾಗುತ್ತದೆ. ಸಕ್ಕರೆಯಿಂದ ನಮಗೆ ಫಾರಿನ್ ಎಕ್ಸ್‌ಚೇಂಜ್ ಸಿಗುವುದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಕೂಡ ಉತ್ತಮವಾಗುತ್ತದೆ. ಈ ಮಾತನ್ನು ಕೇಂದ್ರದ ಕೈಗಾರಿಕಾ ಮಂತ್ರಿಗಳು ಹೇಳಿದ್ದಾರೆ. ನಾವು ಭಾಷಣ ಮಾಡಬಹುದು, ಕಾಗದದಲ್ಲಿ ಬರೆಯಬಹುದು, ಆದರೆ ವ್ಯವಸಾಯ ಮಾಡುವುದು ನಿಜವಾಗಿಯೂ ಕಷ್ಟದ ಕೆಲಸವೆಂಬುದನ್ನು ನಾವು ಮರೆಯಬಾರದು. ಪಶುಸಂಗೋಪನೆ, ವ್ಯವಸಾಯ ಮತ್ತು ಕೈಗಾರಿಕೆ ಈ ಮೂರು ಒಂದಕ್ಕೊಂದು ಅಂಟಿಕೊಂಡಿವೆಯಾದ್ದರಿಂದ ಇವುಗಳ ಅಭಿವೃದ್ಧಿ ಒಂದೇ ಮಟ್ಟದಲ್ಲಿ ಆಗಬೇಕಾಗಿದೆ. ಸಕ್ಕರೆ ಉತ್ಪಾದನೆ ಜಾಸ್ತಿಯಾಗಲು ಅನುಕೂಲವಾಗುವಂತೆ ಕಾನ್ಪುರದಲ್ಲಿ ಇರುವಂತೆ ನಮ್ಮ ರಾಜ್ಯದಲ್ಲಿಯೂ ಸಹ ಒಂದು ಷುಗರ್ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟನ್ನು ಸ್ಥಾಪನೆ ಮಾಡಬೇಕು. ಈ ರೀತಿ ಒಂದು ರಿಸರ್ವ್ ಇನ್‌ಸ್ಟಿಟ್ಯೂಟ್ ಸ್ಥಾಪನೆಯಾದರೆ ಹೆಚ್ಚಿನ ಮಟ್ಟದಲ್ಲಿ ಕಬ್ಬನ್ನು ಬೆಳೆಯಲು ಅವಕಾಶವಾಗುತ್ತದೆಂದು ಹೇಳುತ್ತೇನೆ.

2-30 P. M.

ರೇಷ್ಮೆ ಕೈಗಾರಿಕೆಯ ವಿಷಯ ತಮಗೆ ಗೊತ್ತಿದೆ. ಇದು ಮನೆ ಮಕ್ಕಳಿಗೆಲ್ಲಾ ಕೆಲಸವನ್ನು ಕೊಡತಕ್ಕದ್ದು. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಪುಟ್ಟಸ್ವಾಮಯ್ಯನವರ ಕ್ಷೇತ್ರವಾದ ರಾಮನಗರ ಹಾಗೂ ಚನ್ನಪಟ್ಟಣದಲ್ಲಿ ರೇಷ್ಮೆ ಕೈಗಾರಿಕೆ ಇದೆ. ಇದು ಕ್ವೀನ್ ಆಫ್ ಟೆಕ್ಸ್‌ಟೈಲ್ ಇಂಡಸ್ಟ್ರೀ ಎಂದು ಕರೆಯಬಹುದು. ಈ ಕೈಗಾರಿಕೆಗಳನ್ನು ಸರ್ಕಾರದವರು ಸ್ಥಾಪನೆ ಮಾಡಿದ್ದಾರೆ. ಇದಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟರೆ ಇದರಿಂದ ಮನೆಮಕ್ಕಳಿಗೆಲ್ಲಾ ಕೆಲಸ

ವನ್ನು ಒದಗಿಸಬಹುದು. ಆದ್ದರಿಂದ ಇದಕ್ಕೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ. ಇದರ ಜೊತೆಗೆ ನಮ್ಮ ಸರ್ಕಾರದವರು ಕೆಲವು ಕೈಗಾರಿಕೆಗಳಿಗೆ ಬೋರ್ಡನ್ನು ರಚನೆ ಮಾಡಿದ್ದಾರೆ. ಈಗ ಉದಾಹರಣೆಗೆ ಹೇಳುವುದಾದರೆ ಲೆದರ್‌ಬೋರ್ಡ್, ವುಲ್‌ಬೋರ್ಡ್ ಇವುಗಳನ್ನು ಮಾಡಿದ್ದಾರೆ. ಇದರಿಂದ ಕುರಿ ಸಾಕಾಣಿಕೆಯನ್ನು ಮಾಡತಕ್ಕವರಿಗೆ ಅನುಕೂಲವಾಗುತ್ತದೆ. ಕುರಿಯನ್ನು ಸಾಕುವುದರಿಂದ ಬೇಕಾದಷ್ಟು ಮಾಂಸ ಸಿಕ್ಕುತ್ತದೆ, ಮತ್ತು ಉಣ್ಣೆ ಸಿಕ್ಕುತ್ತದೆ. ಇದನ್ನು ಕಂಡು ಸರ್ಕಾರದವರು ನಮ್ಮ ರಾಜ್ಯದಲ್ಲಿ ಒಂದು ಫಾರಂ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಈ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಆಸ್ಟ್ರೇಲಿಯಾದಿಂದ ಒಬ್ಬರು ಎಕ್ಸ್‌ಪರ್ಟ್ ನಮ್ಮ ರಾಜ್ಯಕ್ಕೆ ಬಂದಿದ್ದರು. ಈಗ ನಮ್ಮ ರಾಜ್ಯದಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿ 10 ಸಾವಿರ ಕುರಿಗಳ ಒಂದು ಫಾರಂ ಮಾಡಬೇಕು ಎಂದು ಸರಕಾರದವರು ನಿರ್ಧಾರ ತೆಗೆದುಕೊಂಡಿದ್ದಾರೆ. ಇದರಿಂದ ನಮ್ಮ ರಾಜ್ಯದ ಜನಗಳ ಆರ್ಥಿಕ ಮಟ್ಟ ಉತ್ತಮವಾಗುತ್ತದೆ. ನಮ್ಮ ರಾಜ್ಯದಲ್ಲಿ ಚರ್ಮದ ಕೈಗಾರಿಕೆ ಇಲ್ಲದೆ ಇದ್ದುದರಿಂದ ಚರ್ಮ ನಮ್ಮ ಸಂಸ್ಥಾನದಿಂದ ಪಕ್ಕದ ರಾಜ್ಯಕ್ಕೆ ಹೋಗುತ್ತಿತ್ತು. ಈಗ ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲೇ ಒಂದು ಲೆದರ್ ಬೋರ್ಡ್ ಮಾಡಿರುವುದರಿಂದ ಚರ್ಮ ಹದ ಮಾಡುವುದಕ್ಕೆ ಜನಗಳಿಗೆ ಅನುಕೂಲವಾಗುತ್ತದೆ. ಹಾಗೆಯೇ ವುಲ್ ಬೋರ್ಡನ್ನು ನಮ್ಮ ಸರ್ಕಾರದವರು ಮಾಡಿದ್ದಾರೆ. ಈ ಬೋರ್ಡನ್ನು ಮಾಡಿರುವುದರಿಂದ ಬೆಂಗಳೂರಿನಲ್ಲಿ ಬಿಳಿ ಬಟ್ಟೆ ಮತ್ತು ಬೆಲ್‌ಬಾಟಂ ಪ್ಯಾಂಟು, ಬುಷ್ ಕೋಟುಗಳನ್ನು ಹಾಕಿಕೊಂಡು ತಿರುಗಾಡತಕ್ಕ ಜನಗಳಿಗೆ ಅನುಕೂಲವಾಗುವುದಿಲ್ಲ. ಈ ಬೋರ್ಡುಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ವಿಲೇಜ್ ಇಂಡಸ್ಟ್ರೀ, ಕಾಟೇಜ್ ಇಂಡಸ್ಟ್ರಿ ಮತ್ತು ರೂರಲ್ ಇಂಡಸ್ಟ್ರಿ ಇವುಗಳನ್ನು ಡೆವಲಪ್ ಮಾಡಬೇಕು ಎಂದು ನಾನು ಒತ್ತಿ ಹೇಳುತ್ತೇನೆ.

ಅರಣ್ಯ ಸಂಪತ್ತಿನ ಬಗ್ಗೆ ಹೇಳುವುದಾದರೆ ನಮ್ಮ ಸ್ನೇಹಿತರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ನಿನ್ನೆ ದಿವಸ ಮಲೆನಾಡು ಡೆವಲಪ್‌ಮೆಂಟ್ ಬೋರ್ಡು ಮಾಡಬೇಕು ಎಂದು ಹೇಳಿದರು. ಈಗ ನಮ್ಮ ದೇಶದಲ್ಲಿ ಮಲೆನಾಡು ಏರಿಯಾ ಮೈದಾನ ಏರಿಯಾ ಮತ್ತು ಕರಾವಳಿ ಏರಿಯಾ ಎಂದು ಮೂರು ವಿಧವಾದ ಪ್ರದೇಶಗಳು ಇವೆ. ಆದ್ದರಿಂದ ಮೈದಾನ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಒಂದು ಮೈದಾನ ಡೆವಲಪ್‌ಮೆಂಟ್ ಬೋರ್ಡನ್ನು ಮಾಡಿ ಕೊಟ್ಟರೆ ನಮ್ಮ ಮೈದಾನ ಪ್ರದೇಶವೂ ಕೂಡ ಡೆವಲಪ್ ಆಗುವುದಕ್ಕೆ ಅನುಕೂಲವಾಗುತ್ತದೆ. ಕೋಲಾರ ತುಮಕೂರು, ಚಿತ್ರದುರ್ಗ ಬಳ್ಳಾರಿ ಹಾಗೂ ಬೆಂಗಳೂರಿನ ಕೆಲವು ಪ್ರದೇಶಗಳು ಮೈದಾನ ಪ್ರದೇಶಗಳು. ಆದ್ದರಿಂದ ಇವುಗಳ ಡೆವಲಪ್‌ಮೆಂಟುಗಳಿಗೆ ಸಂಬಂಧ

(ಶ್ರೀ ಕೆ ಆರ್. ಎಸ್. ನಾಯುಡು)

ಪಟ್ಟು ಹಾಗೆ ಒಂದು ಬೋರ್ಡನ್ನು ರಚನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಬೆಂಗಳೂರು ಜಿಲ್ಲೆಯಲ್ಲಿ ಯಾವ ದೊಡ್ಡ ನದಿಯೂ ಇಲ್ಲ, ಡ್ರೈ ಬೆಲ್ಟ್ ಏರಿಯಾ, ಇಲ್ಲಿ 22 ಇಂಚು ಮಳೆ ಆಗುತ್ತದೆ. ಇಲ್ಲಿ ಯಾವ ಅರಣ್ಯ ಸಂಪತ್ತೂ ಇಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಒಂದು ಮೈದಾನ ಡೆವಲಪ್‌ಮೆಂಟ್ ಬೋರ್ಡನ್ನು ಮಾಡಿದರೆ ಈ ಪ್ರದೇಶ ಡೆವಲಪ್ ಆಗುವುದಕ್ಕೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ವಿಷಯದಲ್ಲಿ ಹೇಳುವುದಾದರೆ ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ಪ್ರತಿನಿತ್ಯ ಬೃಹದಾಕಾರವಾಗಿ ಬೆಳೆಯುತ್ತಿದೆ. ಆದ್ದರಿಂದ ನಮ್ಮ ವಿದ್ಯಾಭ್ಯಾಸದ ಕ್ರಮವನ್ನು ಬದಲಾವಣೆ ಮಾಡಬೇಕು. ವೃತ್ತಿ ಶಿಕ್ಷಣವನ್ನು ಕೊಡಬೇಕು. ಈಗ ಸುಮಾರು 100 ಕ್ಕೆ 40 ರಷ್ಟು ಜನ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ. ಇದರ ಜೊತೆಗೆ ನಮ್ಮ ಮಕ್ಕಳಿಗೆ ಶಾಲಾಕಾಲೇಜುಗಳಲ್ಲಿ ಕೊಡತಕ್ಕಂಥಾ ವಿದ್ಯಾಭ್ಯಾಸದ ಮಟ್ಟವನ್ನು ಸಹ ಹೆಚ್ಚಿಸಬೇಕು. ಅವರ ನೈತಿಕ ಮಟ್ಟವನ್ನು ಹೆಚ್ಚಿಸುವಂತಹ ವಿದ್ಯಾಭ್ಯಾಸವನ್ನು ಕೊಡಬೇಕು. ಮಕ್ಕಳು ಫ್ಲವರ್ಸ್ ಆಫ್ ದಿ ನೇಷನ್, ಆದರಿಂದ ಅವರಿಗೆ ನಾವು ಒಳ್ಳೆಯ ವಿದ್ಯಾಭ್ಯಾಸವನ್ನು ಕೊಟ್ಟೇಕೊಡಬೇಕು. We are living in an age of science and technology. ಆದ್ದರಿಂದ ಇವೊತ್ತು ನಾವು ನಮ್ಮ ಮಕ್ಕಳಿಗೆ ಇವೊತ್ತಿನ ಪರಿಸ್ಥಿತಿಗೆ ಹೊಂದಾಣಿಕೆ ಯಾಗುವಂತಹ ವಿದ್ಯಾಭ್ಯಾಸವನ್ನು ಕೊಡಬೇಕು. ಪ್ರೊಟೆಕ್ಟೀವ್, ಅಂಡ್ ಪ್ರೊಡಕ್ಟೀವ್ ಜಾಬ್‌ಗಳ ಕೊಡುವಂತಹ ವಿದ್ಯಾಭ್ಯಾಸವನ್ನು ಕೊಡಬೇಕು. ಟ್ರೈನಿಂಗ್ ಕಂ ಇಂಪ್ಲಾಯ್‌ಮೆಂಟ್, ಅರ್ನಿಂಗ್ ಅಂಡ್ ಲರ್ನಿಂಗ್ ಎರಡೂ ಒಂದೇ ಸಲ ಮಾಡುವಂತೆ ಅವಕಾಶ ಮಾಡಿಕೊಡಬೇಕು. ಅಂಥಾ ಒಂದು ವಿದ್ಯಾಭ್ಯಾಸವನ್ನು ಸರ್ಕಾರದವರು ಕೊಡಬೇಕು. ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ನಮ್ಮ ಬಡ್ಜೆಟ್ಟ್‌ನಲ್ಲಿ ಐದನೇ ಭಾಗದ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೂ ಕೂಡ ನಮ್ಮ ದೇಶದಲ್ಲಿ ವಿಧ್ಯಾವಂತರ ಸಂಖ್ಯೆ ಕೇವಲ 31 ಪರ್ಸೆಂಟ್ ಮಾತ್ರ ಇದೆ. ಹೆಬ್ಬೆಟ್ಟಿನ ಗುರುತು ಹಾಕತಕ್ಕವರು ಇನ್ನು 69 ಪರ್ಸೆಂಟ್ ಇದ್ದಾರೆ. ಆದರಿಂದ ನಾವು ವಿದ್ಯಾವಂತರ ಸಂಖ್ಯೆಯನ್ನು ಇನ್ನೂ ಹೆಚ್ಚು ಮಾಡಬೇಕಾಗುತ್ತದೆ. ಈಗ ನಮ್ಮ ಸರ್ಕಾರದವರು ಅರ್ಧ ಮಿಲಿಯನ್ ಜಾಬ್ ಪ್ರೋಗ್ರಾಮ್ ಹಾಕಿಕೊಂಡಿದ್ದಾರೆ. ಅದರಲ್ಲಿ ವಿದ್ಯಾವಂತರಿಗೆ ಸಹಾಯ ಮಾಡಬೇಕೆಂಬ ಘನ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಸ್ವತಂತ್ರವಾಗಿ ಜೀವನ ಮಾಡತಕ್ಕಂಥಾ ಶಕ್ತಿ ನಮ್ಮ ಯುವಕರಿಗೆ ಬರಬೇಕು. ತನ್ನ ಸ್ವಂತ ಕಾಲಿನ ಮೇಲೆ ಜೀವನ ಮಾಡಬೇಕು. ಇವೊತ್ತು ತಯಾರಾಗತಕ್ಕಂಥಾ ಗ್ರಾಜುಯೇಟ್ಸ್ ಏನಿದ್ದಾರೆ ಇವರು ಅನೇಕ ಸಂದರ್ಭಗಳಲ್ಲಿ ಇಂಟರ್‌ವ್ಯೂಗೆ

ಹೋದಾಗ ಕರ್ನಾಟಕ ಮುಖ್ಯ ಮಂತ್ರಿಗಳು ಯಾರು ಎಂದು ಪ್ರಶ್ನೆಯನ್ನು ಕೇಳಿದರೆ ಅನಂತಕೃಷ್ಣ ಎಂದು ಹೇಳಿದ್ದಾರೆ. ಅವರ ವಿದ್ಯಾಭ್ಯಾಸದ ಮಟ್ಟ ಹೆಚ್ಚಬೇಕು. ಬಡತನ ದೂರವಾಗಬೇಕು. ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಕೊಡಬೇಕು. ಯುವಕರ ಆರ್ಥಿಕ ಮಟ್ಟ ಸುಧಾರಿಸಿ ಅವರು ಒಂದು ಆದರ್ಶವಾದಂತಹ ಜೀವನವನ್ನು ಮಾಡುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು. ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ ಮೊನ್ನೆತಾನೆ ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ತಮಗೆಲ್ಲರಿಗೂ ಗೊತ್ತಿರುವ ಹಾಗೆ ಸುಮಾರು 600 ಜೂನಿಯರ್ ಕಾಲೇಜುಗಳನ್ನು ತೆರೆದಿದ್ದಾರೆ. ಅನೇಕ ಕಡೆ ಹೈಸ್ಕೂಲುಗಳನ್ನು ಅಪ್‌ಗ್ರೇಡ್ ಮಾಡಿ ಅಲ್ಲಿ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಸ್ಥಾಪನೆ ಮಾಡಿದ್ದಾರೆ. ಈ ರೀತಿಯಾಗಿ ನಮ್ಮ ಸರ್ಕಾರದವರು ಹೋದವರ್ಷ ಈ ವಿದ್ಯಾಭ್ಯಾಸಕ್ಕಾಗಿ ಸುಮಾರು 57 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದು ತಮಗೆಲ್ಲಾ ಗೊತ್ತಾದ ವಿಷಯವೇ ಆಗಿದೆ. ಜೊತೆಗೆ ಕನ್ನಡದ ಬಗ್ಗೆ ನಮ್ಮ ಮಾನ್ಯ ಮಿತ್ರರಾದ ಕೋಣಂದೂರು ಲಿಂಗಪ್ಪನವರಿಗೆ ಎಷ್ಟು ಅಭಿಮಾನ ಇದೆಯೋ ಅಷ್ಟೇ ಅಭಿಮಾನ ನಮಗೂ ಇದೆ. ಭಾಷಾ ಪ್ರೇಮ, ಕುಲಪ್ರೇಮ ಮತ್ತು ದೇಶ ಪ್ರೇಮ ಎಲ್ಲರಲ್ಲಿಯೂ ಇದ್ದೇ ಇರುತ್ತವೆ. ನಮ್ಮ ಕನ್ನಡ ಭಾಷೆ ಶಾಲಾ ಮಟ್ಟದಲ್ಲಿ ಮತ್ತು ಕೋರ್ಟುಗಳಲ್ಲಿ ಜಾರಿಯಲ್ಲಿ ಬರಬೇಕು ನನ್ನ ಮಾತೃಭಾಷೆ ತೆಲುಗು. ಆದರೂ ನನಗೆ ಕನ್ನಡದಲ್ಲಿ ಬಹಳ ಅಭಿಮಾನ ಇದೆ, ಇದಕ್ಕೋಸ್ಕರ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನವರು ಬಹಳ ಕೆಲಸವನ್ನು ಮಾಡಬೇಕಾಗಿದೆ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ನಮ್ಮ ಸಾಹಿತ್ಯ ಪರಿಷತ್ತಿನ ಶಾಖೆ ಅಥವಾ ವಿಭಾಗ ಬೆಳೆದು ಬರಹಗಾರರಿಗೆ, ಮತ್ತು ಕಲಾಗಾರರಿಗೆ ಪ್ರೋತ್ಸಾಹವನ್ನು ಕೊಡಬೇಕು. ಅದೇ ರೀತಿ ಕನ್ನಡ ಶೀಘ್ರಲಿಪಿ ಮತ್ತು ತೆಲಗು ಮತ್ತು ಕನ್ನಡ ಟೈಪ್‌ರೈಟಿಂಗನ್ನು ಅಭಿವೃದ್ಧಿಪಡಿಸಲು ಒಂದು ತಜ್ಞರ ಸಲಹಾ ಸಮಿತಿಯನ್ನು ಮಾಡಬೇಕೆಂದು ಹೇಳುತ್ತೇನೆ. ಇದರಿಂದ ನಮ್ಮಲ್ಲಿ ಒಂದು ಭಾವೈಕ್ಯತೆ ಉಂಟಾಗುತ್ತದೆ. ಆಮೇಲೆ ನಾವೆಲ್ಲರೂ ಕನ್ನಡದಲ್ಲಿಯೇ ಭಾಷಣ ಮಾಡಲು ಅನುಕೂಲವಾಗುತ್ತದೆ. ಅದರ ಜೊತೆಗೆ ಅದನ್ನು ಕಲಿಯುಲು ಪ್ರೋತ್ಸಾಹ ಕೊಟ್ಟರೆ ಬಹಳ ಸಂತೋಷ. ಇದರಿಂದ ಹಳೆಯ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬೇರೆ ಭಾಷೆಗಳಿಗೂ ಸಾಹಿತ್ಯ ಭಂಡಾರ ಹಂಚುವುದಕ್ಕೆ ಸಹ ನಮ್ಮ ಯುವಕರು ಮತ್ತು ಬರಹಗಾರರಿಗೆ ಒಂದು ಅವಕಾಶ ಸಿಗುತ್ತದೆ.

ಆ ಮೇಲೆ ಸಾಮಾಜಿಕ ನ್ಯಾಯದ ಬಗ್ಗೆ ಹೇಳುವುದಾದರೆ ನಮ್ಮ ಸರ್ಕಾರ ಬಹಳ ಕೆಲಸಗಳನ್ನು ಮಾಡಿವೆ ಎಂದರೆ ತಪ್ಪಾಗಲಾರದು.

ಶ್ರೀ ಕೆ. ಹೆಚ್. ಹನುಮೇಗೌಡ: ಹೌದು ಎಲ್ಲಿ ನೋಡಿದರೂ ಸ್ವರ್ಗ ಸುಖವೇ ಕಾಣುತ್ತದೆ.

ಶ್ರೀ ಕೆ. ಅರ್. ಎಸ್. ನಾಯುಡು: ನಾವೆಲ್ಲರೂ ಹಳ್ಳಿಗಳಿಂದ ಬಂದಿರತಕ್ಕಂತಹ ಜನರು. ಪರದೇಶಗಳಿಂದ ಬಂದವರಲ್ಲ. ಕೆಲವರು ಹಣಕ್ಕೋಸ್ಕರ ತಮ್ಮ ಆತ್ಮಗೌರವವನ್ನು ಮಾರಿ ಬಿಡುತ್ತಾರೆ. ಆದರೆ ಮೈಸೂರು ದೇಶದ ಜನರು ಸೌಜನ್ಯ ಶೀಲರು. ಎಲ್ಲರೂ ಅವರನ್ನು ಗೌರವದಿಂದ ಕಾಣುತ್ತಾರೆ. ಇದಕ್ಕೆ ಕಾರಣವಾದರೂ ಏನು? ಇದಕ್ಕೆ ನಮ್ಮ ಭಾಷೆ, ನಮ್ಮ ನಡೆ ಮತ್ತು ನುಡಿಗಳೇ ಕಾರಣ. ಅಲ್ಲವೇನು ಸ್ವಾಮಿ? ಮೈಸೂರು ದೇಶದ ಕಲ್ಚರ್ ಹಿಂದಿನಿಂದ ಏನು ನಡೆದು ಬಂದಿದೆ, ಅದನ್ನು ನಾವು ಕಾಪಾಡಿಕೊಂಡು ಬರುವುದು ನಮ್ಮ ಆದ್ಯ ಕರ್ತವ್ಯ. ಸಾಮಾಜಿಕ ಬದಲಾವಣೆಗಳನ್ನು ಮಾಡಲು ಪ್ರಯತ್ನಗಳು 12 ನೇ ಶತಮಾನದಿಂದಲೂ ನಡೆದಿದೆ. ನಮ್ಮಲ್ಲಿ ಕನಕದಾಸರು, ಪುರಂಧರ ದಾಸರು, ಬಸವಣ್ಣನವರು ಹಾಗೂ ಇನ್ನಿತರ ಅನೇಕ ದಾಸಕೂಟದ ಮಹಾನುಭಾವರು ಈ ಸಾಮಾಜಿಕ ಬದಲಾವಣೆಗಳನ್ನು ಮಾಡಲು ಪ್ರಯತ್ನಗಳನ್ನು ಸತತವಾಗಿ ಮಾಡಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ಸಹ ಈ ಹಿಂದುಳಿದ ಜನಾಂಗ ಏನಿದೆ, ಅವರನ್ನು ಮೇಲೆ ತರುವುದಕ್ಕೋಸ್ಕರ ಒಂದು ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಶನನ್ನು ನೇಮಕ ಮಾಡಿದ್ದಾರೆ. ಈ ಹಿಂದುಳಿದ ಜನರ ಏಳಿಗೆಯಾಗದಿದ್ದರೆ ನಮ್ಮ ರಾಜ್ಯವೇ ಮುಂದೆ ಬರಲಾರದು. ಹಿಂದುಳಿದ ಜನಾಂಗವೇ ನಮ್ಮ ದೇಶದ ಬೆನ್ನೆಲುಬು. ಆ ಕಮಿಶನ್ ಇಷ್ಟರಲ್ಲೇ ಒಂದು ವರದಿಯನ್ನು ಕೊಡುತ್ತದೆ. ಇವತ್ತು ನಮ್ಮ ನೆರೆ ರಾಜ್ಯಗಳಲ್ಲಿ ಹಿಂದುಳಿದ ಜನಾಂಗದವರಿಗೋಸ್ಕರ ಒಂದು ಪ್ರತ್ಯೇಕ ಇಲಾಖೆ ಇದೆ, ಪ್ರತ್ಯೇಕ ಮಂತ್ರಿ ಇದ್ದಾರೆ ಮತ್ತು ಪ್ರತ್ಯೇಕ ಸಿಬ್ಬಂದಿವರ್ಗವೇ ಇದೆ. ಅಂಥ ಜನರಿಗೆ ಭಾರತದ ರಾಜ್ಯಾಂಗದ ಆರ್ಟಿಕಲ್ 15 ಮತ್ತು 16 ನ್ನು ಅಳವಡಿಸಿ ಕೊಂಡು ಅನುಕೂಲ ಮಾಡುವುದಕ್ಕೋಸ್ಕರ ಒಂದು ರಿಪೋರ್ಟನ್ನು ಕೊಡುತ್ತದೆ. ನಿಮ್ಮೆಲ್ಲರ ಸಹಕಾರದಿಂದ ಅದರಂತೆ ಆ ಬಡ ಜನರಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡಬೇಕಾಗುತ್ತದೆ. ಇಷ್ಟೇ ಅಲ್ಲದೆ ನಮ್ಮ ಸರ್ಕಾರದವರು ಒಂದು ವಾಕ್‌ಫ್ ಬೋರ್ಡ್ ಸಹ ಮಾಡಿದ್ದಾರೆ. ತಮಗೆ ಗೊತ್ತಿರಬಹುದು. ಆ ವಾಕ್‌ಫ್ ಬೋರ್ಡ್ ಮಹಮದಿಯರಿಗೆ ಸಹಾಯಮಾಡುವುದಿಲ್ಲವೇ? ನಾನು ಅನೇಕ ಸಲ ವ್ಯಾನ್ಯ ಕಂದಾಯ ಮಂತ್ರಿಯವರನ್ನು ಕಂಡು ಎಲ್ಲಾ ಸಂಸ್ಥಾನದ ಎಲ್ಲಾ ದೇವಸ್ಥಾನ ಗಳಿಗೂ ಒಂದು ಯುನಿಫಾರಂ ಕಾನೂನನ್ನು ಮಾಡಬೇಕೆಂದು ಒತ್ತಾಯ ಮಾಡಿದ್ದೇನೆ. ಮೈಸೂರು ದೇಶದಲ್ಲಿ ಸುಮಾರು 35 ಸಾವಿರ ದೇವಸ್ಥಾನಗಳು ಇವೆ; ಮತ್ತು ಅವುಗಳಿಗೆ ಸುಮಾರು 10 ಕೋಟಿ ರೂಪಾಯಿಯಷ್ಟು ಚರ, ಸ್ಥಿರ, ಒಡವೆ ಮತ್ತು ಜಮೀನುಗಳ ಆಸ್ತಿ ಇದೆ. ಹೀಗಿದ್ದರೂ ಹಲವು ದೇವಸ್ಥಾನಗಳಲ್ಲಿ ದೀಪ ಹಚ್ಚುವವರಿಲ್ಲ. ಅದಕ್ಕೋಸ್ಕರ ನಾನು ಮಂತ್ರಿಯವರಲ್ಲಿ ಇವುಗಳಿಗೆಲ್ಲಾ

ಒಂದು ಯುನಿಫಾರಂ ಲೆಜಿಸ್ಲೇಶನ್ ಮಾಡಬೇಕೆಂದು ಒತ್ತಿ ಕೇಳಿಕೊಂಡಿದ್ದೇನೆ. ಇವತ್ತು ನಾವು ದೇವಸ್ಥಾನಗಳ ಜೀರ್ಣೋದ್ಧಾರವನ್ನು ಮಾಡಬೇಕಾಗಿದೆ. ಸಮುದ್ರದ ನೀರು ಹೇಗೆ ಒಂದು ಎಲ್ಲೆಯನ್ನು ಮೀರಿ ಬರುವುದಿಲ್ಲವೋ ಅದೇ ರೀತಿ ನಾವು ನಮ್ಮ ನೀತಿ ದಾಟಿ ಬರಲು ಅಸಾಧ್ಯವಾಗಿದೆ. ನಮ್ಮ ಸಂಸ್ಕೃತಿ ಸಹ ಇಂಥ ದೇವಸ್ಥಾನಗಳಿಂದ ಬಂದಿದೆ ಎಂದರೆ ತಪ್ಪಾಗಲಾರದು. ಒಟ್ಟಿನಲ್ಲಿ ನಮ್ಮ ಎಲ್ಲಾ ದೇವಸ್ಥಾನಗಳಿಗೂ ಒಂದು ಯುನಿಫಾರಂ ಮಸೂದೆಯನ್ನು ತರ ಬೇಕೆಂದು ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಅದೇ ರೀತಿ ನಮ್ಮ ಸರ್ಕಾರ ಮಲ ಹೊರುವ ಪದ್ಧತಿಯನ್ನು ತೆಗೆದು ಹಾಕಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಮಾಡಿದೆ. ಇದರ ಜೊತೆಗೆ ಬೇರೆ ಬೇರೆ ಸಂಸ್ಥಾನದ ಇನ್‌ಫಾರ್ಮಲ್ ಕನ್ ಸಲ್ಟೇಟಿವ್ ಕಮಿಟಿಗಳನ್ನು ಮಾಡಿದ್ದಾರೆ. ಪ್ರತಿಯೊಂದು ಇಲಾಖೆಗಳಲ್ಲಿಯೂ ಅಲ್ಲಿಯ ಪ್ಲಾನ್, ಪ್ರೋಗ್ರಾಂ ಏನಿರಬೇಕು ಮತ್ತು ಅದನ್ನು ಕಾರ್ಯಗತ ಮಾಡು ವುದಕ್ಕೆ ಇಂಥ ಕಮಿಟಿಗಳನ್ನು ಮಾಡುವುದು. ಅತ್ಯವಶ್ಯಕವಲ್ಲವೇ ? ಅದು ಒಂದು ಮುಖ್ಯ ಆಡ್ಮಿನಿಸ್ಟ್ರೇಟಿವ್ ಬದಲಾವಣೆಯಲ್ಲವೇ ?

ಅದೇ ರೀತಿ ಜನತಾ ಹೌಸಿಂಗ್ ಸ್ಕೀಮ್‌ನ್ನು ನಮ್ಮ ಸರಕಾರದವರು ಜಾರಿಗೆ ತಂದಿದ್ದಾರೆ ಮೂರು ಲಕ್ಷ ಜನರಿಗೆ ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಕೊಡುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಒಂದೇ ವರ್ಷದಲ್ಲಿ 3 ಕೋಟಿ ಜನರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಯಾವ ಸರಕಾರದಿಂದಲೂ, ಯಾರಿಂದಲೂ, ಸಾಧ್ಯವಾಗುವುದಿಲ್ಲ. ಅದನ್ನು ಒಂದು ಫೇಸಡ್ ಪ್ರೋಗ್ರಾಂನಲ್ಲಿ ಮಾಡಬೇಕಾಗುತ್ತದೆ. ಆದರೆ ಮನೆಗಳನ್ನು ಕಟ್ಟತಕ್ಕಂತಹ ಕಾಲದಲ್ಲಿ ಅ ತರದಲ್ಲಿ ನಾವು ನಮ್ಮ ಸಂಸ್ಥಾನದ ಕಾಡುಗಳನ್ನು ನಾಶ ಮಾಡುತ್ತಿದ್ದೇವೆ. ಇವತ್ತು ನಮ್ಮಲ್ಲಿರತಕ್ಕ ಅಂದರೆ ಕಲ್ಲುಗಳನ್ನು ಉಪಯೋಗಿಸಿಕೊಂಡು ಇಂಥ ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳು ತ್ತೇನೆ. ಅದೇ ರೀತಿ ನಮ್ಮ ಕಾಡನ್ನು ನಾವು ಮನೆಗಳಿಗೋಸ್ಕರ ಕಡಿದು ನಾಶ ಮಾಡಬಾರದು.

ಇನ್ನು ಕಾವೇರಿ ಬಾಯಾರಿಕೆ ಆರಿಸಲು ಬೆಂಗಳೂರಿಗೆ ಬಂದಳು. ಅದು ಹೇಗೆ ಬಂತು ಎಂಬುದನ್ನು ವಿವರಿಸಲು ಪ್ರಯತ್ನಿಸುತ್ತೇನೆ. ನಮ್ಮ ಸರ್ಕಾರ ದವರು ಯಾವ ಕಾರ್ಯಕ್ರಮವನ್ನು ಹೂಡಿದರೂ ಮತ್ತು ಹಿಡಿದರೂ ಸಹ ಅದನ್ನು ಮತ್ತು ಬೇಗನೆ ಪೂರೈಸಲು ಪ್ರಯತ್ನಿಸುತ್ತಾರೆ. ಸುಮಾರು ಹತ್ತಾರು ಪ್ರಾಜೆಕ್ಟ್ ಗಳನ್ನು ನಮ್ಮ ಕಾಲದಲ್ಲಿಯೇ ಮಾಡಿ ಮುಗಿಸಿದ್ದೇವೆ. ಬಾಯಾರಿದ ಬೆಂಗಳೂರಿನ ಜನರಿಗೆ ಕಾವೇರಿ ನೀರನ್ನು ತರಿಸಿಕೊಟ್ಟು ನೀರಿನ ಪೂರೈಕೆ ಕಾರ್ಯವನ್ನು ಮಾಡಿ ದ್ದೇವೆ. ಇದು ನಿಜವಾಗಿಯೂ ಸಂತೋಷದ ಸಂಗತಿ.

(ಶ್ರೀ ಕೆ. ಆರ್. ಎಸ್. ನಾಯ್ಡು)

ಇನ್ನು ಕಂಟೋನ್‌ಮೆಂಟ್ ಏರಿಯಾದಲ್ಲಿರುವ ಆಸ್ಪತ್ರೆಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಆರೋಗ್ಯಮಂತ್ರಿಗಳು ಇಲ್ಲಿಲ್ಲ. ನಮ್ಮ ಏರಿಯಾದಲ್ಲಿ ಒಂದೇ ಒಂದು ಜನರಲ್ ಆಸ್ಪತ್ರೆ ಇದೆ. ಸಿಟಿಯಲ್ಲಿ ನಾಲ್ಕು ಜನರಲ್ ಆಸ್ಪತ್ರೆಗಳಿವೆ. ದಂಡಿನ ಪ್ರದೇಶದಲ್ಲಿ ಒಂದೇ ಒಂದು ಸರ್ಕಾರದ ಜನರಲ್ ಆಸ್ಪತ್ರೆ ಇದೆ. ಆದರೆ ಬೆಡ್ ಸ್ಟ್ರೆಂಗ್ತ್ ಸುಮಾರು 650. ಇದರ ಮಧ್ಯದಲ್ಲಿ ಮಿಲಿಟರಿ ಏರಿಯಾ ಬೇರೆ. ಆದಕ್ಕಾಗಿ, ನಮ್ಮ ಕಂಟೋನ್‌ಮೆಂಟ್ ಏರಿಯಾದಲ್ಲಿ ಹೆಚ್ಚಿಗೆ ಆಸ್ಪತ್ರೆಗಳನ್ನು ತೆರೆಯಲು ಸೂಕ್ತ ವ್ಯವಸ್ಥೆಯನ್ನು ಮಾಡ ಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯ. ಈಗ ಹಿಂದಿನ ಕೃಷ್ಣ ಮೆನನ್ ದಿನವಲ್ಲ, ಆದರೆ ಶ್ರೀ ಬಾಬು ಜಗಜ್ಜೀವನರಾಮ ಅವರ ದಿನ. ಇಂಡಿಜನಸ್ ಮೆಡಿಸನ್ಸ್ ಬಗ್ಗೆ ಡಾ: ವೇಲ್ಲೋಟಿಯವರ ಸಲಹೆಯಂತೆ ಯತ್ನಗಳು ನಡೆದಿವೆ. ಇಂಡಿಯನ್ ಮೆಡಿಸನ್ಸ್‌ಗೂ ಪ್ರತ್ಯೇಕ ಡೈರೆಕ್ಟರ್ ಮತ್ತು ಇಲಾಖೆಯನ್ನು ಮಾಡಲು ಒಂದು ಹೆಲ್ತ್ ಯೂನಿವರ್ಸಿಟಿ ಮಾಡಬೇಕೆಂಬ ಪ್ರಯತ್ನ ನಡೆದಿದೆ. ಅದು ಒಳ್ಳೆಯ ದಲ್ಲವೇ? ಈಗಾಗಲೇ ಆಲ್ ಇಂಡಿಯಾ ಲೆವಲ್ಲಿನಲ್ಲಿ ಆರು ನ್ಯಾಷನಲ್ ಮೆಡಿಕಲ್ ಇನ್‌ಸ್ಟಿಟ್ಯೂಟ್ ಮಾಡುತ್ತಿದ್ದಾರೆ. ಅಂಥಾದ್ದನ್ನು ಬೆಂಗಳೂರಿನಲ್ಲಿಯೂ ಒಂದು ಮಾಡಬೇಕೆಂದು ಹೇಳುತ್ತಿದ್ದೇವೆ. ಹೀಗೆ ನಮ್ಮಲ್ಲಿ ಬೇಕಾದಷ್ಟು ಕೆಲಸಕಾರ್ಯಗಳಿವೆ. ನಮ್ಮಲ್ಲಿ ವಿದ್ಯಾವಂತ ಡಾಕ್ಟರುಗಳಿದ್ದಾರೆ, ಇಂಜನಿಯರು ಗಳಿದ್ದಾರೆ. ಅದರಲ್ಲಿಯೂ ಜೂನಿಯರ್ ಡಾಕ್ಟರ್ಸ್, ಇಂಜಿನಿಯರ್ಸ್ ಏನು ಇದ್ದಾರೆಯೋ ಅವರಿಗೆ ತಕ್ಕಮಟ್ಟಿಗೆ ಅನುಕೂಲತೆಗಳನ್ನು ಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ 5 ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಒಬ್ಬ ಡಾಕ್ಟರ್, ಪಟ್ಟಣಗಳಲ್ಲಿ 3 ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಒಬ್ಬ ಡಾಕ್ಟರ್ ಇರುತ್ತಾರೆ. ಒಬ್ಬ ಡಾಕ್ಟರನ್ನು ತಯಾರು ಮಾಡಲು ಸರ್ಕಾರಕ್ಕೆ ಒಟ್ಟು 80 ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ. ವಿದ್ಯಾವಂತ ಡಾಕ್ಟರುಗಳಿಗೆ ಮತ್ತು ವಿದ್ಯಾವಂತ ಇಂಜಿನಿಯರುಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಗೆ ಸೌಲಭ್ಯಗಳನ್ನು ಕೊಡುವುದರಿಂದ ಅವರು ನಮ್ಮ ದೇಶದ ಏಳಿಗೆಗಾಗಿ ಹಗಲಿರಳೂ ದುಡಿಯಲು ಸಹಕಾರಿಯಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಅಂಥ ಅನುಕೂಲಗಳನ್ನು ಕಲ್ಪಿಸುವುದು ಬಹಳ ಮುಖ್ಯ.

ಇನ್ನು ಫ್ರೀಡಂ ಫೈಟರ್ಸ್ ವಿಷಯವಾಗಿ ನಾನು ಈಗ ಹೇಳಬೇಕಾಗಿದೆ. ಅವರು ಎಷ್ಟೋ ಸಲ ಜೈಲಿಗೆ ಹೋಗಿದ್ದಾರೆ. ಅವರ ಒಂದು ಸೇವೆಯನ್ನು ನಾವು ಎಂದಿಗೂ ಮರೆಯಬಾರದು ಕೇಂದ್ರ ಸರ್ಕಾರದವರೂ ಮತ್ತು

ಕರ್ನಾಟಕ ಸರ್ಕಾರದವರೂ ಅವರ ಬಗ್ಗೆ ಅನೇಕ ತರದ ಪ್ಲಾನ್ಸ್ ಮತ್ತು ಸ್ಕೀಮ್‌ಗಳನ್ನು ಕೊಟ್ಟಿದ್ದಾರೆ. ಅದು ಏನೋನೂ ಸಾಲದು. ಅವರ ಬಗ್ಗೆ ಸಾಕಷ್ಟು ಸ್ಕೀಮುಗಳನ್ನು ಇನ್ನೂ ಮಾಡಬೇಕಾಗಿದೆ. ಅವರಲ್ಲಿ ಅನೇಕರು ತಮ್ಮ ಆಸ್ತಿಪಾಸ್ತಿಗಳನ್ನು ಕಳೆದು ಕೊಂಡಿದ್ದಾರೆ. ಅದರಿಂದಾಗಿ ಅವರ ಮನೆಮಕ್ಕಳನ್ನು ಕೇಳುವವರೇ ಇಲ್ಲದಂತಾಗಿದೆ. ಅವರು ಪಟ್ಟಿರುವ ಕಷ್ಟ ಹೇಳತೀರದು. ರಾಜಕೀಯದಲ್ಲಿದ್ದು ಯಾರ್ಯಾರು ಕಾರಾಗೃಹವನ್ನು ಅನುಭವಿಸಿದ್ದಾರೋ ಅಂತಹವರಿಗೆ ವಸತಿ ಜಮೀನು ಮತ್ತು ಉದ್ಯೋಗ ಸೌಲಭ್ಯಗಳನ್ನು ಕೂಡಲೇ ಕಲ್ಪಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಮುಖ್ಯವಾಗಿ ಮತ್ತೊಂದು ವಿಚಾರ. ಕರ್ನಾಟಕವೆಂದು ಹೆಸರಿಟ್ಟ ಒಂದು ಹೆಮ್ಮೆ ನಮ್ಮ ಈ ಸರ್ಕಾರಕ್ಕೆ ಬಂದಿದೆ. ಯಾವ ಸರ್ಕಾರ ಸುಮಾರು 15 ವರ್ಷಗಳಿಂದಲೂ ನಮ್ಮ ದೇಶ ಕರ್ನಾಟಕವಾಗಬೇಕೆಂದು ಹೇಳುತ್ತಿತ್ತೋ, ಯಾವ ಕವಿಗಳು ಮತ್ತು ರಾಜಕಾರಣಿಗಳು ಬಹಳ ದಿವಸಗಳಿಂದ ಕರ್ನಾಟಕವಾಗಬೇಕೆಂಬ ಕನಸು ಕಂಡಿದ್ದರೋ ಅದು ಇಂದು ನನಸಾಗಿದೆ ಆ ಒಂದು ದೊಡ್ಡ ಗೌರವ ನಮ್ಮ ಸರ್ಕಾರಕ್ಕೇ ಸೇರತಕ್ಕದಾಗಿದೆ ಇವತ್ತಿನ ದಿವಸ ನಿಜವಾಗಿಯೂ ಭಾವೈಕ್ಯತೆ ನಮ್ಮಲ್ಲಿಮೂಡಿದೆ. ನಮ್ಮಲ್ಲಿ ಹೈದರಾಬಾದ್ ಕರ್ನಾಟಕ, ಆಂಧ್ರ ಕರ್ನಾಟಕ ಅಥವಾ ತಮಿಳುನಾಡು ಕರ್ನಾಟಕವೆಂದು ಇರಬಹುದು. ನಮಗೆ ಇನ್ನೂ ಸೇರದೇ ಇರತಕ್ಕ ಕೆಲವು ಭಾಗಗಳೂ ಸಹ ಇರಬಹುದು. ಆದರೆ ನಾವೆಲ್ಲರೂ ಈಗ ಒಂದಾಗಿದ್ದೇವೆ, ನಾವು ಅಣ್ಣ ತಮ್ಮಂದಿರಂತೆ ಇದ್ದೇವೆ. ಕನ್ನಡಿಗರು ನಿಜವಾಗಿ ಒಳ್ಳೆಯವರು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮತ್ತು ಹೆಮ್ಮೆಪಡುತ್ತೇನೆ.

ಕೊನೆಯದಾಗಿ, ಮಾನ್ಯ ಅಧ್ಯಕ್ಷಣಿಯವರು ನನಗೆ ಈ ಸಂದರ್ಭದಲ್ಲಿ ನಾಲ್ಕಾರು ಮಾತುಗಳನ್ನು ಆಡಲಿಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ಸಿರಿಗನ್ನಡಂ ಗೆಲ್ಗೆ, ತಾಯ್ನಾಡಿನ ಬಾಳ್ಗೆ, ಜೈ ಕರ್ನಾಟಕವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ) : ಮಾನ್ಯ ಅಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸಿ ಮಾನ್ಯ ಶ್ರೀ ಕೆ. ಆರ್. ಶ್ರೀನಿವಾಸಯ್ಯನವರು ಅವರ ಸೂಚನೆಗೆ ನಾನು ಬೆಂಬಲ ಕೊಟ್ಟು ನಾಲ್ಕು ಮಾತುಗಳನ್ನು ಆಡಬಯಸುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕಳೆದ ವರ್ಷ ಸರ್ಕಾರದವರು ಮಾಡಿರುವ ಕೆಲಸ ಕಾರ್ಯಗಳ ಬಗ್ಗೆ, ಹಾಗೂ ಇನ್ನು ಮುಂದೆ ಮಾಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಬಹು ಸೂಕ್ಷವಾಗಿ ಸ್ವಲ್ಪದರಲ್ಲಿ ಕಾಣಿಸಿ

(ಶ್ರೀ ಪಿ. ಪಿ. ಹೆಗಡೆ)

ದ್ದಾರೆ. ಆ ಬಗ್ಗೆ ಕೆಲವು ಅಂಶಗಳನ್ನು ಮಾತ್ರ ಹೇಳಬಯಸುತ್ತೇನೆ. ನನ್ನ ಮಿತ್ರರಾದಂಥ ಮಾನ್ಯ ಶ್ರೀ ನಾಯ್ಡು ಅವರು ಹೇಳಿದ ಪ್ರಕಾರ ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮಹಾ ಭಯಂಕರವಾದ ಬರಗಾಲದಿಂದ ಜನರಿಗೆ ಅತ್ಯಂತ ತೊಂದರೆಯಾಯಿತು. ತ್ರಾಸಾಯಿತು. ಸರ್ಕಾರಕ್ಕೂ ಬಹಳಮಟ್ಟಿಗೆ ಕಷ್ಟವಾಯಿತು, ಆದರೂ ಸರ್ಕಾರ ಧೈರ್ಯ ಸ್ಥೈರ್ಯಗಳಿಂದ ಬರಗಾಲ ನಿವಾರಣೆಗೆ ಸಾಕಷ್ಟು ಹಣವನ್ನು ಖರ್ಚು ಮಾಡಿ ಸಾಕಷ್ಟು ಜನರಿಗೆ ಕೆಲಸಗಳನ್ನು ಕೊಟ್ಟು ಹೇಗೋ ಜನರ ಸಂಕಷ್ಟಗಳನ್ನು ಪಾರು ಮಾಡಿದರು. ನಮ್ಮಲ್ಲಿ ಯಾವಾಗಲೂ ಬರಗಾಲ ಬರಬಾರದೆಂಬ ವಿಷಯದಲ್ಲಿ ಸರ್ಕಾರ ಈಗಾಗಲೇ ಏನೇನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದೆ. ಈ ವಿಚಾರದಲ್ಲಿ ನಾವು ಒಂದು ಅಂಶವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕ. ನಮ್ಮದು ಕರ್ನಾಟಕ ರಾಜ್ಯ. ಹಿಂದುಸ್ಥಾನದ ಬಗ್ಗೆ ಹೇಳಿದರೂ ಅಡ್ಡಿ ಇಲ್ಲ. ನಮ್ಮದು ಒಕ್ಕಲುತನ ಪ್ರದೇಶವಾಗಿರುವುದರಿಂದ ನಮ್ಮ ಜೀವನವೆಲ್ಲಾ ಒಕ್ಕಲುತನದ ಮೇಲೆಯೇ ಆಧಾರವಾಗಿದೆ. ನಮ್ಮ ಒಕ್ಕಲುತನ ನಿಸರ್ಗದ ಮೇಲೆಯೇ ಅವಲಂಬಿಸಿದೆ. ಅನೇಕವೇಳೆ ನಮ್ಮ ದೇಶದಲ್ಲಿ ಮಳೆ ನಾನಾ ಭಾಗದಲ್ಲಿ ಸಕಾಲದಲ್ಲಿ ಆಗುವುದಿಲ್ಲ. ಮಳೆ ಬಾರದೆ ಬೆಳೆ ಹೋಗುತ್ತದೆ, ಕೆಲವು ಸಂದರ್ಭಗಳಲ್ಲಿ ಮಳೆ ಹೆಚ್ಚಿಗೆ ಬಂದೂ ಬೆಳೆ ಹೋಗುತ್ತದೆ. ಅಂದರೆ, ನಾವು ನಿಸರ್ಗದ ವಿರುದ್ಧ ಹೋರಾಟವನ್ನು ಮಾಡಬೇಕಾಗಿದೆ. ನಮಗೆ ನಿಶ್ಚಯವಾಗಿ ಒಂದೇ ರೀತಿಯಲ್ಲಿ ಮಳೆಯಾಗುವುದಿಲ್ಲ. ಸಕಾಲದಲ್ಲಿ ಮಳೆಯಾಗದೇ ಇರುವುದರಿಂದ ಬೆಳೆಯೂ ಚೆನ್ನಾಗಿ ಆಗುವುದಿಲ್ಲ. ಯಾವಾಗ ಮಳೆ ಬೇಕೋ ಆಗ ಮಳೆಯಾಗದೇ ಇರುವುದರಿಂದ ಇತ್ತೀಚಿನ ವರ್ಷಗಳಲ್ಲಿ ನಮ್ಮ ಬೆಳೆಗಳಿಗೆ ಅಪಾಯವುಂಟಾಗಿದೆ. ಇದರಿಂದ ನಾವು ನಿಸರ್ಗದ ವಿರುದ್ಧ ಕೆಲವು ಸಂದರ್ಭಗಳಲ್ಲಿ ಹೋರಾಟ ಮಾಡಬೇಕಾಗಿದೆ. ಅದಕ್ಕಾಗಿ ನಮ್ಮ ಸರ್ಕಾರದವರು ಈಗಾಗಲೇ ಸಾಕಷ್ಟು ಯೋಜನೆಗಳನ್ನು ಮಾಡುತ್ತಿದ್ದಾರೆ. ನಾವು ಒಂದೊಂದು ಸಾರಿ ನಿಸರ್ಗದ ಮೇಲೆ ಅವಲಂಬಿಸಿ ಇದ್ದರೂ ಕೂಡ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕಾಗಿದೆ. ಏಕೆಂದರೆ ನಮ್ಮ ರಾಜ್ಯದಲ್ಲಿ ನದಿಗಳು ಸಾಕಷ್ಟಿವೆ. ನದಿಗಳಿಗೆ ಒಡ್ಡು ಕಟ್ಟಿ ನೀರಾವರಿ ಯೋಜನೆಗಳನ್ನು ಮಾಡಿ ಜನಗಳಿಗೆ ನೀರು ಒದಗಿಸುವ ಯೋಜನೆ ನಮ್ಮ ಸರ್ಕಾರದವರು ಮಾಡಬೇಕು. ಇಂತಹ ಯೋಜನೆಗಳನ್ನು ಸಾಕಷ್ಟು ಪೂರ್ವದಿಂದ ವಿಚಾರ ಮಾಡುತ್ತಿದ್ದರೂ ಕೂಡ ಈ ಕಾರ್ಯಕ್ರಮದಲ್ಲಿ ಅಷ್ಟು ವೇಗದಿಂದ ನಾವಿನ್ನೂ ಸಾಗಿಲ್ಲ. ಅದರ ಪರಿಣಾಮವಾಗಿಯೇ ನಾವು ಇತ್ತೀಚಿನ ವರ್ಷಗಳಲ್ಲಿ ನಾನಾ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಈಗ ನಮ್ಮ ಸರ್ಕಾರದವರು ನಮ್ಮ ರಾಜ್ಯದಲ್ಲಿ ಮಹಾನದಿಯಾದ ಕೃಷ್ಣಾ ನದಿಗೆ ಅಲ್ಲಲ್ಲಿ ಒಡ್ಡು ಕಟ್ಟಿ

ಕೃಷ್ಣಾ ಮೇಲ್ದಂಡೆ ಮತ್ತು ಎಡದಂಡೆ ಯೋಜನೆಗಳನ್ನು ಕೈಗೊಂಡಿದ್ದಾರೆ. ಮೊದಲಿನಿಂದಲೂ ಈ ಯೋಜನೆಗೆ ಸಾಕಷ್ಟು ಹಣ ಪೂರೈಸಲಿಲ್ಲವಾದ ಕಾರಣ ಈ ಯೋಜನೆಗಳು ತೀವ್ರಗತಿಯಲ್ಲಿ ಇನ್ನೂ ಮುಗಿಯಲಿಲ್ಲ. ಆದ್ದರಿಂದಲೇ ಈಗ ನಮ್ಮ ಸರ್ಕಾರದವರು ಕೃಷ್ಣಾ ಜಲಾಶಯ ಯೋಜನೆಗಾಗಿ ಸಾಕಷ್ಟು ಹಣವನ್ನು ಪೂರೈಸುವುದಾಗಿ ಹೇಳಿರುವ ಅಂಶವನ್ನು ರಾಜ್ಯಪಾಲರು ಅವರ ಭಾಷಣದಲ್ಲಿ ಭರವಸೆ ಕೊಟ್ಟಿದ್ದಾರೆ. ಆ ರೀತಿಯಾಗಿ ಸರ್ಕಾರದವರು ಸಾಕಷ್ಟು ಹಣವನ್ನು ಈ ಯೋಜನೆಗಾಗಿ ಒದಗಿಸಿದರೆ ಈ ಕಾರ್ಯಗಳು ತೀವ್ರಗತಿಯಿಂದ ಕಾರ್ಯಗತ ಮಾಡಲು ಅನುಕೂಲವಾಗುತ್ತದೆ. ನಮ್ಮ ಒಂದು ಆಹಾರ ಪರಿಸ್ಥಿತಿಯನ್ನೂ ಸಹ ಅತಿಯಾಗಿ ಸುಧಾರಿಸಬಹುದು. ಯಾವ ಭಾಗದಲ್ಲಿ ಈಗ ಬರಗಾಲ ಪರಿಸ್ಥಿತಿ ಇದೆಯೋ ಅದನ್ನು ನಿರ್ಮೂಲ ಮಾಡಬಹುದು. ಹೆಚ್ಚಿಗೆ ಆಹಾರ ಧಾನ್ಯಗಳನ್ನು ಅಲ್ಲಿ ಬೆಳೆಯುವುದಕ್ಕೂ ಅವಕಾಶವುಂಟಾಗುತ್ತದೆ. ಆದರೆ ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯುವುದಕ್ಕೆ ನೀರಿನ ಸೌಕರ್ಯ ಸಾಲದು. ಇತ್ತೀಚೆಗೆ ನಮಗೆ ಸಗಣಿ ಗೊಬ್ಬರ, ನಿಸರ್ಗ ಗೊಬ್ಬರ ಸಾಕಷ್ಟು ದೊರೆಯುತ್ತಿಲ್ಲ. ಕಾರಣ, ರಾಸಾಯನಿಕ ಗೊಬ್ಬರ ಉಪಯೋಗ ಮಾಡಬೇಕಾಗಿದೆ. ಎಲ್ಲಿ ನೀರಾವರಿ ಜಮೀನಿದೆಯೋ ಅಲ್ಲಿ ರಾಸಾಯನಿಕ ಗೊಬ್ಬರ ಬೇಕು.

3-00 P. M.

ಎಲ್ಲಿ ನಮ್ಮಲ್ಲಿ ನೀರಾವರಿ ಸೌಕರ್ಯಗಳಿವೆಯೋ ಅಲ್ಲಿಗೆ ಈ ರಾಸಾಯನಿಕ ಗೊಬ್ಬರ ಕೊಡದಿದ್ದರೆ ಅಲ್ಲಿ ಸರಿಯಾಗಿ ಬೆಳೆಯಾಗುವುದೇ ಇಲ್ಲ. ನಾವು ಹೀಗೆ ರೈತರಿಗೆ ಒಂದು ಕಡೆ ನೀರಿನ ಪೂರೈಕೆ ಮಾಡಿದರೆ ಇನ್ನೊಂದು ಕಡೆ ರೈತರಿಗೆ ಅಗತ್ಯವಾದ ಗೊಬ್ಬರದ ಪೂರೈಕೆಗೆ ತೊಂದರೆಗಳು ಇದ್ದೇ ಇರುತ್ತವೆ. ನಿಸರ್ಗದ ಬದಲಾವಣೆಗೆ ತಕ್ಕಂತೆ ನಾವು ದೇಶದಲ್ಲಿ ನೀರಾವರಿ ಸೌಲಭ್ಯಗಳನ್ನು ಅಳವಡಿಸಿಕೊಂಡರೂ ಅದಕ್ಕೆ ಅತ್ಯಗತ್ಯವಾಗಿ ಬೇಕಾದ ರಾಸಾಯನಿಕ ಗೊಬ್ಬರ ದೊರೆಯದೆ ರೈತರಿಗೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅಡಚಣೆಯುಂಟಾಗಿದೆ. ಈ ಹಿಂದೆ ನಾವು ರೈತರಿಗೆ ಎಷ್ಟು ವಿಧವಾಗಿ ಹೇಳಿದರೂ ಈ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ಎಲ್ಲೆಲ್ಲಿ ನೀರಾವರಿ ಸೌಲಭ್ಯಗಳು ದೊರೆತಿವೆಯೋ ಅಲ್ಲೆಲ್ಲಾ ಈ ರಾಸಾಯನಿಕ ಗೊಬ್ಬರಕ್ಕೆ ಪೂರ್ಣ ಡಿಮ್ಯಾಂಡಿದೆ, ಅಲ್ಲಿ ಈ ಗೊಬ್ಬರದ ಅಗತ್ಯ ಬಹಳವಾಗಿದೆ. ಈ ಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸದಿದ್ದರೆ ನಮ್ಮಲ್ಲಿ ಹೆಚ್ಚು ಉತ್ಪಾದನೆಗೆ ಅವಕಾಶವಿಲ್ಲ. ಹೀಗಾಗಿ ನಮ್ಮಲ್ಲಿ ರೈತ ತೊಂದರೆಗೀಡಾಗಿದ್ದಾನೆ. ಸರ್ಕಾರ ಸುಮ್ಮನೆ ಹೆಚ್ಚು ಬೆಳೆಯಿರಿ ಎಂದರೆ ಹೇಗೆ ಸಾಧ್ಯ? ಸರ್ಕಾರ ರೈತರಿಗೆ ಬೇಕಾದ ಗೊಬ್ಬರ ಮತ್ತು ಇತರೇ ಅನುಕೂಲಗಳನ್ನು ಕಲ್ಪಿಸಿಕೊಡದೆ ಸುಮ್ಮನೆ ಹೆಚ್ಚು ಆಹಾರ ಬೆಳೆಯಿರಿ ಎಂದರೆ ಹೇಗೆ ಬೆಳೆಯುವುದು ಎಂದು ರೈತರು ನಮ್ಮನ್ನು ಹೋದಲ್ಲಿ ಕೇಳಲಿಕ್ಕೆ ಹತ್ತಿದ್ದಾರೆ. ಈಗ ನಮ್ಮಲ್ಲೂ ಈ ರಾಸಾ

(ಶ್ರೀ ಪಿ. ಪಿ. ಹೆಗರೆ)

ಯನಿಕ ಗೊಬ್ಬರದ ತಯಾರಿಕೆಯನ್ನು ಪ್ರಾರಂಭಮಾಡಿದೆ, ಮತ್ತು ಪರದೇಶಗಳಿಂದಲೂ ಇದನ್ನು ತರಿಸಲಾಗುತ್ತಿದೆ. ಆದಾಗ್ಯೂ ಇದು ರೈತರಿಗೆ ಸರಿಯಾಗಿ ದೊರೆಯುತ್ತಿಲ್ಲ. ಇದಕ್ಕೆ ಇನ್ನೊಂದು ಕಾರಣ ಅಂದರೆ ಇದರ ವಿತರಣೆಯಲ್ಲೂ ಕೂಡ ಲೋಪದೋಷಗಳಿವೆ. ಇದರ ವಿತರಣೆ ಒಂದು ದೊಡ್ಡ ಸಮಸ್ಯೆ. ನಮ್ಮಲ್ಲಿ ಕೆಲವು ವಸ್ತುಗಳಿದ್ದರೂ ಅವುಗಳನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡದಿರುವುದರಿಂದ ಜನರಲ್ಲಿ ಅಸಂತೃಪ್ತಿ ಉಂಟಾಗಿದೆ. ಇಂಥ ಒಂದು ಪರಿಸ್ಥಿತಿ ಇಲ್ಲಿ ಉದ್ಭವವಾಗುವುದಕ್ಕೆ ನಾವೆಲ್ಲರೂ ಕಾರಣರೆಂಬುದನ್ನು ತಾವು ಮರೆಯಬಾರದು. ನಮ್ಮಲ್ಲಿ ಸ್ವಾರ್ಥ ಅಳಿದು ಆ ರಾಷ್ಟ್ರೀಯ ಮನೋಭಾವನೆ ನಮ್ಮೆಲ್ಲರಲ್ಲೂ ಇನ್ನೂ ಬೆಳೆದು ಬಂದಿಲ್ಲ. ದೇಶದಲ್ಲಿ ಉಂಟಾಗಿರತಕ್ಕ ಅನೇಕ ಗೊಂದಲಗಳಿಗೆ ಇದೂ ಒಂದು ಕಾರಣ. ನಾವು ಈ ರಾಸಾಯನಿಕ ಗೊಬ್ಬರವನ್ನು ಸಹಕಾರ ಸಂಸ್ಥೆಗಳ ಮೂಲಕವೇ ಆಗಲಿ, ರಾಸಾಯನಿಕ ಗೊಬ್ಬರವನ್ನು ಸಹಕಾರ ಸಂಸ್ಥೆಗಳ ಮೂಲಕವೇ ಆಗಲಿ ಅಥವಾ ಪಂಚಾಯಿತಿಗಳ ಮೂಲಕವಾಗಲಿ ಇಲ್ಲವೇ ತಾಲ್ಲೂಕ್ ಬೋರ್ಡುಗಳ ಮೂಲಕವಾಗಲಿ ಹಂಚುವಂತೆ ಮಾಡೋಣ ಎಂದರೆ ಅಲ್ಲಿಯೂ ಸ್ವಾರ್ಥ? ಅಪ್ರಮಾಣಿಕತನ? ಹೀಗೆ ನಾವು ನಡೆದರೆ ಇದಕ್ಕೆ ನಾವೇಕೆ ಸರ್ಕಾರವನ್ನು ದೂರಬೇಕು? ದೂಷಣೆ ಮಾಡಬೇಕು? ಜನರಲ್ಲಿರತಕ್ಕ ದೋಷಕ್ಕೆ ಸರ್ಕಾರವನ್ನು ದೂಷಣೆ ಮಾಡಿದರೆ ಅದು ನ್ಯಾಯವಾದ್ದಲ್ಲ. ಈ ರಾಸಾಯನಿಕ ಗೊಬ್ಬರವನ್ನು ಪ್ರಾಮಾಣಿಕತೆಯಿಂದ ವಿತರಣೆ ಮಾಡಿದ್ದರೆ ಇದರ ಬಗ್ಗೆ ಜನರು ಗಾಬರಿ ಆಗಬೇಕಾಗಿರಲಿಲ್ಲ. ಆದರೆ ನಮ್ಮಲ್ಲಿ ಆ ಪ್ರಾಮಾಣಿಕತೆ ಇಲ್ಲದ ಕಾರಣ ಯಾರಿಗೆ ಗೊಬ್ಬರದ ಅಗತ್ಯ ವಿಶೇಷವಾಗಿದೆಯೋ ಅವನಿಗೆ ಗೊಬ್ಬರ ಸಿಕ್ಕದೆ ಅನಗತ್ಯವಾದವನಿಗೆ ಸಿಕ್ಕುತ್ತಿದೆ. ಇದಕ್ಕೆ ಸರ್ಕಾರ ಕಾರಣವಲ್ಲ. ಇನ್ನು ಈ ಕಾಳಿಕಡಿ ವಿಚಾರವಾದರೂ ಇಷ್ಟೇ. ಇದರ ವಿತರಣೆಯಲ್ಲೂ ದೋಷವಿದೆ. ರಾಜ್ಯದಲ್ಲಿ ಕೆಲವು ಭಾಗದಲ್ಲಿ ಮಳೆ ಬಂದಿಲ್ಲ; ಬೆಳೆಯಾಗಿಲ್ಲ. ಜನರಿಗೆ ಆಹಾರದ ತೊಂದರೆ ಇದೆ. ಆದಾಗ್ಯೂ ಈ ವರ್ಷ ರಾಜ್ಯದಲ್ಲಿ ಬೆಳೆಗಳು ಬಹಳಮಟ್ಟಿಗೆ ಉತ್ತಮವಾಗಿದೆ. ನಮ್ಮ ರಾಜ್ಯದಲ್ಲಿ 1972-73ರಲ್ಲಿ 48 ಲಕ್ಷ ಟನ್ನುಗಳ ಆಹಾರ ಉತ್ಪಾದನೆಯಾಗಿದ್ದರೆ ಈ ಕಳೆದ ಸಾಲಿನಲ್ಲಿ ನಮ್ಮ ರಾಜ್ಯದ ಆಹಾರ ಉತ್ಪತ್ತಿ 63 ಲಕ್ಷ ಟನ್ನಿಗೆ ಏರಿದೆ. ಆದಾಗ್ಯೂ ಈ ದಿವಸ ಮಾರುಕಟ್ಟೆಯಲ್ಲಿ ಸಾಲುವಷ್ಟು ಧಾನ್ಯಗಳಿಲ್ಲ ಕಾರಣವೇನು ? ಕೆಲವು ಹಿತಾಸಕ್ತಿಗಳು ಈ ಕೃತಕ ಕೊರತೆಯನ್ನು ಉಂಟುಮಾಡುತ್ತಿವೆ. ಅನೇಕರು ಸಾವಿರಾರು ಪಲ್ಲ ಧಾನ್ಯವನ್ನು ಬಚ್ಚಿಟ್ಟಿದ್ದ ಅನೇಕ ಪ್ರಸಂಗಳನ್ನು ನಮ್ಮ ಸರ್ಕಾರ ಇತ್ತೀಚೆಗೆ ಬಯಲಿಗೆಳೆದಿರುವ ಪ್ರಸಂಗಗಳನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಓದಿರಬಹುದು. ಹೀಗೆ ಧಾನ್ಯಗಳನ್ನು ಬಚ್ಚಿಡುವುದ ಧಾನ್ಯದ ಬೆಲೆ

ಯನ್ನು ವಿನಾ ಕಾರಣ ಹೆಚ್ಚಿಸುದಕ್ಕಲ್ಲದೆ ಬೇರೇನೂ ಕಾರಣವಿಲ್ಲ. ಅಂಥ ಅಕ್ರಮ ನಡವಳಿಕೆಯು ಜನರಿಗೆ ಸರ್ಕಾರ ಉಗ್ರವಾದ ದಂಡನೆಗಳನ್ನು ಶಿಕ್ಷೆ ಯನ್ನೂ ವಿಧಿಸಬೇಕೆಂದು ಒತ್ತಾಯ ಮಾಡುತ್ತೇನೆ ಅದರ ಜೊತೆಗೆ ಸರ್ಕಾರ ಜನರಲ್ಲಿ ರಾಷ್ಟ್ರೀಯ ಮನೋಭಾವನೆ ಬೆಳೆಯುವುದಕ್ಕೆ ಅವಕಾಶ ಆಗತಕ್ಕ ದಾರಿಯನ್ನೂ ಕೂಡ ಹುಡುಕಬೇಕೆಂದು ಹೇಳುತ್ತೇನೆ.

ಇನ್ನು ಎರಡನೇ ವಿಷಯ ರಾಜ್ಯದಲ್ಲಿ ಕುಡಿಯುವ ನೀರಿಗಿರತಕ್ಕ ಅಭಾವಕ್ಕೆ ಸಂಬಂಧ ಪಟ್ಟಿದ್ದು. ರಾಜ್ಯದ ಕೆಲವು ಭಾಗದಲ್ಲಿ ಇನ್ನೂ ಹರಿಜನರಿಗೆ ಇದರ ತೊಂದರೆ ಇದ್ದೇ ಇದೆ. ನೀರಿನ ಕೊರತೆ ಇರುವ ಪ್ರದೇಶಗಳಲ್ಲಿ ಹರಿಜನರಿಗೆ ಕುಡಿ ಯುವ ನೀರಿನ ವ್ಯವಸ್ಥೆ ಏನೂ ಇಲ್ಲ. ಹರಿಜನರಿಗಾಗಿ ಸ್ವತಂತ್ರವಾದ ಬಾವಿ ಬೇಕು ಎನ್ನುವುದು ನನ್ನ ವಿಚಾರವಲ್ಲ. ಅವರು ಸಾರ್ವಜನಿಕ ಬಾವಿಯೊಳಗೇ ನೀರನ್ನು ತುಂಬಬೇಕು. ಅವರಿಗೆ ಆ ಹಕ್ಕು ಇದೆ ಎನ್ನುವ ವಿಚಾರವಿರುವವನು ನಾನು. ನಮ್ಮ ಸಂವಿಧಾನದಲ್ಲಿರುವಂಥ ಹಕ್ಕುಗಳನ್ನು ನೋಡಿ ನಾವು ಸಮಾಧಾನಪಟ್ಟುಕೊಳ್ಳ ಬೇಕೇ ಹೊರತು ಅವು ಪ್ರತ್ಯಕ್ಷವಾಗಿ ಜನತೆಗೆ ಲಭಿಸಿಲ್ಲ. ಆದ ಕಾರಣ ಎಲ್ಲೆಲ್ಲಿ ಹರಿಜನ ರಿಗೆ ನೀರಿನ ವ್ಯವಸ್ಥೆ ಇಲ್ಲವೋ ಅಲ್ಲೆಲ್ಲ ಕೂಡಲೇ ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಈ ಪ್ರಸಂಗದಲ್ಲಿ ಸರಕಾರಕ್ಕೆ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಸರ್ಕಾರದವರು ನಾನಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಹರಿಜನ ಗಿರಿಜನರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದ ಸಮಾಜದ ಸಲು ವಾಗಿ ನಮ್ಮ ಸಂವಿಧಾನದಲ್ಲಿ ಕೆಲವು ಸವಲತ್ತುಗಳನ್ನು ನೀಡಿದ್ದಾರೆ. ಆ ಸವಲತ್ತುಗಳನ್ನು ಜಾರಿಗೊಳಿಸುವುದಾಗಿ ರಾಜ್ಯಪಾಲರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಶಿಕ್ಷಣದ ವಿಷಯವಾಗಿ ಆರರಿಂದ ಹತ್ತು ವರ್ಷದೊಳಗಿನ ಬಾಲಕರು ನೂರಕ್ಕೆ ನೂರರಷ್ಟು ಶಾಲೆಗೆ ಹೋಗುವಂತೆ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ರಾಜ್ಯಪಾಲರು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ಬಡಜನರ ಸಮಾಜವಿದೆ, ಹರಿಜನರು, ಗಿರಿಜನರು ಇತರ ಬಡ ಜನರೂ ಇದ್ದಾರೆ. ಈ ಸಮಾಜದ ಬಾಲಕರು ಶಾಲೆಗೆ ಹೋಗಬೇಕಾದರೆ ಅವರಿಗೆ ಏನೂ ಆಧಾರ ವಿರುವುದಿಲ್ಲ. ಅವರ ಪಾಲಕರಿಗೆ ತಮ್ಮ ಕುಟುಂಬದ ಜನರಿಗೆ ಒಂದು ತುತ್ತು ಅನ್ನವನ್ನು ಗಳಿಸುವುದಕ್ಕೇ ಶಕ್ತಿ ಇಲ್ಲ. ಇಂಥ ಪ್ರಸಂಗದೊಳಗೆ ಅವರು ಚಿಕ್ಕ ಬಾಲಕರನ್ನು ಶಾಲೆಗೆ ಕಳುಹಿಸುವುದಕ್ಕೆ ಸಮರ್ಥರಿರುವುದಿಲ್ಲ, ಅವರು ಅದಕ್ಕೆ ತಯಾರಿರುವುದಿಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರದ ಮೇಲೆ ದೊಡ್ಡ ಹೊರೆ ಬೀಳುತ್ತದೆ. ಯಾರಿಗೆ ತಮ್ಮ ಬಾಲಕರನ್ನು ಶಾಲೆಗೆ ಕಳುಹಿಸುವುದಕ್ಕೆ ಅಸಾಧ್ಯ ವಿದೆಯೋ ಅಂಥವರಿಗೆ ಒಂದು ತುತ್ತು ಅನ್ನ ಮತ್ತು ಅರಿವೆಗೆ ಸರ್ಕಾರದವರು

(ಶ್ರೀ ಪಿ. ಪಿ. ಹೆಗರೆ)

ವ್ಯವಸ್ಥೆ ಮಾಡಬೇಕು. ರಾಜ್ಯಪಾಲರು ಕೆಲವೊಂದು ಸವಲತ್ತನ್ನು ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರಿಂದ ಹತ್ತು ವರ್ಷದ ಒಳಗಿನ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂದು ಹೇಳುವಾಗ ಬಡ ಸಮಾಜದ ಬಾಲಕರ ಊಟ ಮತ್ತು ಅರಿವೆ ವ್ಯವಸ್ಥೆಯನ್ನು ಸರ್ಕಾರದವರು ಮಾಡಲೇಬೇಕಾಗುತ್ತದೆ. ಹಾಗೆ ಮಾಡದೆ ಹೋದರೆ ರಾಜ್ಯಪಾಲರು ಅವರ ಭಾಷಣದಲ್ಲಿ ಏನು ಘೋಷಣೆಯನ್ನು ಮಾಡಿದ್ದಾರೆ ಅದು ಪೂರ್ಣವಾಗಲಿಕ್ಕಿಲ್ಲ. ಆದುದರಿಂದ ಸರ್ಕಾರದವರು ಯಾವ ರೀತಿಯಿಂದ ಬಡ ಸಮಾಜಕ್ಕೆ ಸಹಾಯ ಮಾಡಬಹುದು ಎನ್ನುವುದನ್ನು ಪರಿಶೀಲಿಸಿ, ಅವರಿಗೆ ಸಹಾಯವನ್ನು ಒದಗಿಸಿ ಬಾಲಕರನ್ನು ಶಾಲೆಗೆ ಕಳುಹಿಸುವಂತೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಈಗಿನ ಕಾಲದಲ್ಲಿ ಜನತೆಗೆ, ರಾಜ್ಯಕ್ಕೆ, ದೇಶಕ್ಕೆ ಮಹತ್ವವಾದ ಶಕ್ತಿ ಬೇಕು. ಯಾವ ಶಕ್ತಿಯಿಂದ ಎಲ್ಲ ಕೆಲಸಗಳನ್ನೂ ನಾವು ಮಾಡಿಕೊಳ್ಳುತ್ತೇವೆಯೋ ಅದು ವಿದ್ಯುಚ್ಛಕ್ತಿ. ಜನತೆಗಾಗಲೀ, ಸರ್ಕಾರಕ್ಕಾಗಲೀ ಸಾಕಷ್ಟು ವಿದ್ಯುಚ್ಛಕ್ತಿ ದೊರೆತರೆ ಅದರಿಂದ ಬೇರೆ ಶಕ್ತಿಯನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಿದೆ. ನೂರು ವರ್ಷಗಳ ನಂತರ ವಿದ್ಯುಚ್ಛಕ್ತಿ ಸಿಕ್ಕಲಾರದು ಅದರ ಕೊರತೆಯುಂಟಾಗುತ್ತದೆ ಎಂಬುದಾಗಿ ಒಬ್ಬ ವಿದ್ವಾನ ಲೇಖಕರು ಭವಿಷ್ಯ ನುಡಿದಿದ್ದಾರೆ. ನಮ್ಮ ರಾಜ್ಯದ ವಿಷಯವನ್ನು ಮಾತ್ರ ಹೇಳಬೇಕಾದರೆ ನಮ್ಮಲ್ಲಿ ಕಳೆದ ವರ್ಷ ವಿದ್ಯುಚ್ಛಕ್ತಿಯ ಕೊರತೆ ಬಂದು 25 ಪರ್ಸೆಂಟ್ ಕಡಿಮೆಯಾಯಿತು. ನಮಗೆ ಆಗುವ ವಿದ್ಯುಚ್ಛಕ್ತಿ ಇನ್ನೂ ಸಾಕಷ್ಟಿಲ್ಲ. ಆದರೆ ನಮ್ಮ ರಾಜ್ಯ ಸರ್ಕಾರ ಕಾಳಿನದಿ ಯೋಜನೆಯನ್ನು ತೆಗೆದುಕೊಂಡಿದ್ದಾರೆ ಮತ್ತು ಅದರ ಕೆಲಸ ಪ್ರಾರಂಭವಾಗಿದೆ. ಅದರಿಂದ ಹೊರಡಬಹುದಾದ ವಿದ್ಯುಚ್ಛಕ್ತಿ ನಮಗೆ ಸಾಕಷ್ಟು ಪುರೋಟಿಯಾಗುತ್ತದೆ ಅದು ನಮ್ಮ ಔದ್ಯೋಗೀಕರಣಕ್ಕೆ ಮತ್ತು ಇತರ ಕಾರ್ಯಕ್ರಮಗಳಿಗೆ ಸಾಕಷ್ಟು ಉಪಯೋಗವಾಗಿ ನಮ್ಮ ರಾಜ್ಯ ಪ್ರಗತಿಪಥದಲ್ಲಿ ಸಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. 1976ಕ್ಕೆ ಕಾಳಿನದಿ ಯೋಜನೆಯಿಂದ ವಿದ್ಯುಚ್ಛಕ್ತಿ ನಮಗೆ ದೊರೆಯುತ್ತದೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆ ರೀತಿ ದೊರೆಯುತ್ತದೆ ಎನ್ನುವ ವಿಶ್ವಾಸ ನನಗಿದೆ.

ನೀರಾವರಿ ಯೋಜನೆಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ನಮ್ಮಲ್ಲಿ ಸಾಕಷ್ಟು ನದಿಗಳಿದ್ದರೂ ಕೂಡ ಈ ನದಿಗಳ ನೀರು ಸಮುದ್ರಕ್ಕೆ ಹೋಗಿ ವ್ಯರ್ಥವಾಗುತ್ತಿದೆ. ನಮ್ಮ ಸರ್ಕಾರದವರು ಸಾಕಷ್ಟು ಯೋಜನೆಗಳನ್ನು ಕೈಕೊಂಡಿದ್ದರೂ ಸಹಿತ ಒಂದು ಕಾಲಕ್ಕೆ ಈ ರೀತಿಯ ಯೋಜನೆ ಕೈಗೊಳ್ಳಬೇಕಾಗಿತ್ತಲ್ಲ, ಯಾವ ನದಿಯು ನೀರೂ ಸಮುದ್ರಕ್ಕೆ ಹೋಗಬಾರದು ಎನ್ನುವಂತೆ ಯೋಜನೆ ಮಾಡಬಹುದಾಗಿತ್ತೋ ಏನೋ ಎಂದು ಕಾಣಲಿಕ್ಕೆ ಹತ್ತಿದೆ. ಅಂಥ,

ಮದ್ರಾಸ್ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ನೀರಾವರಿಯಾಗಿರುವ ಪ್ರದೇಶ ಬಹಳ ಕಡಿಮೆ ಇದೆ, ನಾವು ನೀರಾವರಿ ಯೋಜನೆಗಳನ್ನು ಇನ್ನೂ ಸಾಕಷ್ಟು ಮಾಡಬೇಕಾಗಿದೆ. ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳು, ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳು ಮತ್ತು ಚಿಕ್ಕ ನೀರಾವರಿ ಯೋಜನೆಗಳು ಇವುಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಸರ್ಕಾರದವರು ಸಾಕಷ್ಟು ಯೋಜನೆಗಳನ್ನು ಕೈಗೊಂಡಿದ್ದಾರೆ. ಚಿಕ್ಕ ನೀರಾವರಿ ಯೋಜನೆಗಳಿಂದ 60 ಸಾವಿರ ಹೆಕ್ಟೇರ್ ಭೂಮಿಗೆ ನೀರು ಉಣ್ಣಿಸುವಂಥ ವಿಚಾರವನ್ನು ರಾಜ್ಯಪಾಲರು ಹೇಳಿದ್ದಾರೆ. ಇದರಲ್ಲಿ ನಾವು ಇನ್ನೂ ಮುಂದುವರಿಯಬೇಕು. ಹಳ್ಳಿಪಳ್ಳಿಗಳಲ್ಲಿ ನದಿಗಳು ಹರಿಯುತ್ತಿರುತ್ತವೆ. ಅವುಗಳಿಗೆ ಸಣ್ಣಪುಟ್ಟ ಒಡ್ಡುಗಳನ್ನು ಹಾಕಿ ಸಾಕಷ್ಟು ಜಮೀನಿಗೆ ನೀರು ಕೊಡುವುದಕ್ಕೆ ಸಾಧ್ಯವಿದೆ. ಆದರೆ ಇಂಥ ಸಣ್ಣಪುಟ್ಟ ಯೋಜನೆಗಳನ್ನು ಇನ್ನೂ ಕೈಗೊಂಡಿಲ್ಲ. ಲಿಫ್ಟ್ ಇರಿಗೇಷನ್ ಸ್ಕೀಮ್ಸ್ ತೆಗೆದುಕೊಂಡು ನೀರನ್ನು ಪರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ. ಲಿಫ್ಟ್ ಇರಿಗೇಷನ್ ಮಾಡುವವರಿಗೆ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಒದಗಿಸಲು ವಿಶೇಷ ವ್ಯವಸ್ಥೆ ಮಾಡಿ ವಿದ್ಯುಚ್ಛಕ್ತಿಯನ್ನು ಕೊಡಿಸಿ ಅನುಕೂಲ ಮಾಡಿ ಕೊಟ್ಟರೆ ಸಾಕಷ್ಟು ಭೂಮಿ ನೀರಾವರಿಗೆ ಬರುತ್ತದೆ ಮತ್ತು ನಮ್ಮಲ್ಲಿ ಆಹಾರದ ಉತ್ಪಾದನೆ ಹೆಚ್ಚಾಗಿ ಆಗುತ್ತದೆ ಎನ್ನುವ ಸಂಪೂರ್ಣ ವಿಶ್ವಾಸ ನನಗಿದೆ. ನೀರಾವರಿಗಾಗಿ ಕಾರ್ಯಕ್ರಮವನ್ನು ತೆಗೆದುಕೊಂಡು ಅದು ಪೂರ್ಣವಾದಾಗ ನಮ್ಮಲ್ಲಿ ಸಾಕಷ್ಟು ಜಮೀನುಗಳಿಗೆ ನೀರನ್ನು ತರುವುದಕ್ಕೆ ಆಗುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ.

ಸಮಾಜ ಕಲ್ಯಾಣ ದೊಡ್ಡ ವಿಷಯ. ನಮ್ಮ ದೇಶದಲ್ಲಿ ಸಮತಾವಾದ ಸಮಾಜವನ್ನು ರಚನೆ ಮಾಡುತ್ತೇವೆ, ಬಡತನವನ್ನು ನಿರ್ಮೂಲ ಮಾಡುತ್ತೇವೆ ಎಂದು ಸಾರಿದ್ದೇವೆ. ಆದರೂ ಇದು ಅಸಾಧ್ಯವಾಗಿದೆ. ಇದಕ್ಕೆ ಕಾರಣ ಸಾಮಾಜಿಕ ನ್ಯಾಯ ಯಾರಿಗೆ ದೊರೆಯಬೇಕೋ ಅವರಿಗೆ ದೊರೆತಿಲ್ಲದಿರುವುದು. ಸಮಾಜಕಲ್ಯಾಣ ಎನ್ನುವಾಗ ಸಾಮಾಜಿಕ ನ್ಯಾಯ ಎಲ್ಲರಿಗೂ ದೊರೆಯಬೇಕು. ಆದರೆ ಇದರಲ್ಲಿ ಮೂಲ ಪ್ರಶ್ನೆಯನ್ನೇ ಬಿಟ್ಟು ಬಿಡುತ್ತೇವೆ. ಬಡತನ, ದಾರಿದ್ರ್ಯ, ನಿರುದ್ಯೋಗ ಈ ಎಲ್ಲ ಪ್ರಶ್ನೆಗಳೂ ಉಲ್ಲೇಖವಾಗುತ್ತವೆ. ಇದಕ್ಕಾಗಿ ನಮ್ಮ ರಾಜ್ಯದಲ್ಲಿ ಹರಿಜನ ಗಿರಿಜನರಿಗಾಗಿ ಸಾಮಾಜಿಕ ನ್ಯಾಯ ದೊರೆಯುವಂತೆ ಸಾಕಷ್ಟು ವ್ಯವಸ್ಥೆ ಮಾಡಿದ್ದಾರೆ. ಇದಕ್ಕಾಗಿ ನಮ್ಮ ಘಟನಾಕಾರರು ರಾಜ್ಯಾಂಗದಲ್ಲಿರುವಂತೆ ಸಂಸತ್ತಿನಲ್ಲಿ ಹಾಗೂ ಅಸೆಂಬ್ಲಿಯಲ್ಲಿ ಹಿಂದುಳಿದ ವರ್ಗಗಳವರಿಗಾಗಿ ಸುಮಾರು ಹತ್ತು ವರ್ಷಗಳ ಕಾಲ ಸ್ಥಾನವನ್ನು ಕಾದಿರಿಸಬೇಕೆಂದು ಹೇಳಿದ್ದರು. ಹತ್ತು ವರ್ಷಗಳ ಕಾಲ ಯಾವ ರೀತಿಯ ವಿನಾಯತಿ ಕೊಡಬೇಕೆಂದು ಘಟನಾವಳಿಯಲ್ಲಿ ಉಕ್ತವಾಗಿದೆ. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಹಾಗೂ ಫಂಡಮೆಂಟಲ್

(ಶ್ರೀ ಪಿ. ಪಿ. ಹೆಗರೆ)

ರೈಟ್ಸ್ ಇವುಗಳನ್ನೆಲ್ಲಾ ಸವಿಸ್ತಾರವಾಗಿ ಹೇಳಿದ್ದಾರೆ. ಇದನ್ನು ಪ್ರಾಮಾಣಿಕ ವಾಗಿ ಸರಕಾರದವರು ಜಾರಿಮಾಡಿದರೆ ನಮ್ಮ ಸಮಾಜದಲ್ಲಿ ಈ ವರ್ಗದ ಜನತೆಗೆ ನ್ಯಾಯ ದೊರೆಯುತ್ತದೆ ಎಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ನಮ್ಮ ರಾಜ್ಯಪಾಲರು ಕೂಡ ಅವರ ಭಾಷಣದಲ್ಲಿ ಒಂದು ಅಶ್ವಾಸನೆಯನ್ನೂ ಕೊಟ್ಟಿದ್ದಾರೆ. ಅದು ಪುಟ 10ರಲ್ಲಿ ಹೇಳಿದ್ದಾರೆ.

" ಸಮಾಜ ಕಲ್ಯಾಣ "

> ಸಮಸ್ತ ಜನತೆಯ ಕಲ್ಯಾಣವನ್ನು ಸಾಧಿಸುವ ಸಮಾಜ ವ್ಯವಸ್ಥೆಯನ್ನು ಆಗಮಾಡಿಸಲು ನಮ್ಮ ಸರ್ಕಾರದವರು ಬದ್ಧಕಂಕಣರಾಗಿದ್ದಾರೆ. ಆ ಉದ್ದೇಶಕ್ಕಾಗಿ ಹರಿಜನ ಗಿರಿಜನ ಮತ್ತು ಬೇರೆ ದುರ್ಬಲ ವರ್ಗಗಳ ಸಾಮಾಜಿಕ ಹಾಗೂ ಆರ್ಥಿಕ ಪುರೋಭಿವೃದ್ಧಿಯ ಮತ್ತು ವಿದ್ಯಾಭಿವೃದ್ಧಿಯ ನಿಮಿತ್ತವಾಗಿ ಸಂವಿಧಾನ ದಲ್ಲಿ ನೀಡಿರುವ ರಕ್ಷಣೆಗಳನ್ನು ಅನುಷ್ಠಾನಕ್ಕೆ ತರಲಾಗುವುದು.....

ಇದನ್ನು ಮಾಡಿದರೆ ಸಾಕು. ಇದಕ್ಕಿಂತ ಹೆಚ್ಚಾಗಿ ಹರಿಜನ ಹಾಗೂ ಗಿರಿಜನರು ಏನನ್ನೂ ಬೇಡುವುದಿಲ್ಲ. ಅದಕ್ಕಾಗಿ ನಾನು ಸರಕಾರವನ್ನು ಪ್ರಾರ್ಥನೆ ಮಾಡು ವುದು ರಾಜ್ಯಪಾಲರು ಏನು ಅಶ್ವಾಸನೆಯನ್ನು ಕೊಟ್ಟಿರುತ್ತಾರೋ ಅದನ್ನು ತೀವ್ರ ವಾಗಿ ಪೂರ್ಣಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತು ಗಳನ್ನು ಮುಗಿಸುತ್ತೇನೆ.

MADAM SPEAKER : The amendments to the motion may be moved now.

SRI T. R. SHAMANNA:—(Fort) Sir I beg to move :

The following words shall be added at the end of the motion but regret that there is no mention in the address regarding :

1) Steps for arresting effectively, the gallopping rise in the price of essential commodities which has brought about misery and hardship to the people.

2) Fruitful plans to check the growing unemployment of educated as well as uneducated persons in the State.

3) Effective steps for reducing poverty of the masses in the State.

4) Effective steps for increasing production of agricultural and non-agricultural products.

5) Steps to increase the supply of chemical manure

6) Steps to supply Kannada Typewriters.

7) Steps not taken to remove the inter-District movement of food-grains and border areas sealed to help consumers to get food-grains at reasonable cost.

The following words shall be added at the end of the motion but regret to note failure of the Government :

8) In not holding elections to the Taluk Boards and to many Municipalities in the State.

9) In allowing prohibitive cost of building materials and thereby check the house building activities.

10) In giving adequate financial assistance through Housing Board and other agencies to promote house building activities.

11) In allowing corruption in all walks of life.

12) In arresting the manufacture and sale of illicit drinks (like Kallabhatti).

13) In checking the abnormal rise in the cost of textile goods.

14) To check adulteration of food-stuffs.

15) To solve the problem of unrest among the Teachers, Doctors, Students, Labourers and in general, among all sections of the people.

(SRI T. R. SHAMANNA)

16) In providing funds for development activities of the State.

17) To supply adequate medicines to Government Hospitals.

18) In stopping Grants to the Mahila Seva Samajas in the State.

19) To give a good and clean and efficient administration in the State.

SRI B. B. SAVANAK (Belgaum) : Sir I beg to move :

That the following words shall be added at the end of motion but regrets that :

1) No mention is made of Karnataka-Maharashtra border dispute which is pending more than 18 years. The Maharashtra-Karnataka border dispute must be solved on the basis of village as the unit, Geographical contiguity, relative majority and wishes of the people.

2) No mention is made of soaring price. It is very difficult for the common man to live in at the present state affairs.

3) No steps is taken to eradicate the corruption, neopolism.

4) The Government has failed to safe-guard the minorities in the state. Their life and property is not safe in Karnataka State.

SRI N. B. SIRDESAI (Khanapur) Sir, I beg to move :

That the following words shall be added at the end of motion but regret that :

1) The Governor has failed to make reference of the untold sufferings caused to Marathi people in Belgaum and other areas ; hence his report regarding Law and Order situation is one sided and partial.

2) The Governor has failed to make reference of the long pending unsolved border problem between Karnataka and Maharashtra and has failed to mention a solution to settle the Border issue by the State Government.

3) That the Govenor has mentioned about the agitation against rising prices and the steps taken to maintain Law and Order position, but has failed to mention the steps Government have taken to maintain the price level in the State.

4) That the Governor has failed to mention that though the levy demand is fulfilled by the growers excess quantity of paddy is being colleted from the growers inspite of their filing stock declaration and that too by using Police force.

5) The Governor has failed to make special reference of the schemes that would be taken in the Malnad Talukas of the State; during the Fifth Five Year Plan Period.

6) The Governor has failed to make mention of the Major Medium and Minor Irrigation Projects to be taken up in the Malnad Talukas of Border Areas.

7) That the Governor has failed to mention that though the Government have not supplied Ferti-

(SRI N. B. SIRDESAI)

lisers to the growers; Government are collecting levy of Food grains from them.

8) Though the Governor has said that it is necessary greatly to expand Sugar Production and it is proposed to start ten Sugar Factories during the coming year but has failed to state whether preference will be given to Malnad and Forest covered Talukas where sufficient lands and Irrigation facilities are available.

9) The Governor has failed to mention that under the plea of paucity of funds and non-availability of Alluminium conductors etc., the Karnataka State Electricity Board has not extended the power supply to I. P. sets in Belgaum District.

10) The Governor has not made specific reference to the Industrialisation in Malnad and forest covered Talukas of the State.

11) The Governor has failed to admit that the Government are showing scant respect to the proposals of water supply schemes and National Rural Water Supply Schemes in the Malnad and Forest covered areas of the Border areas.

12) The Governor has failed to admit that Government have not supplied medicines and paid the salary of S. M. P. Doctors in Belgaum District, for the last over six months under the plea of paucity of funds.

SRI P. A. PAWASHE (Uchagaon) Sir I beg to move :

That the following words shall be added at the end of the motion but regret that :

1) The Governor has failed to make any reference to the long pending border dispute between Maharashtra and Karnataka, The Governor ought to mentioned that this dispute be solved on the basis of Pataskar Formula, so that no injustice will be caused to any party.

2) The Governor has failed to make any reference to the attrocities committed by Police and Kannadigas on the Marathi speaking people of Belgaum and border area.

3) The Governor has failed to mention why Government is not in a position to check the trend of rising prices of the food-grains even though there is good Khariff harvest and there are better prospects of a satisfactory rabbi crop.

4) The Governor has failed to mention the steps Government has taken to check the rising prices of food-grains and essential commodities and against the Blackmarketers.

5) The Governor has failed to make any reference to the serious problem of Rural and Urban unemployment and a solution to solve the same.

6) The Governor has failed to mention in short the details of the programe which needs of small and marginal farmers so that their economic conditions are improved.

7) The Governor has failed to make any reference as to how Government is going to make adequate medical provisions to protect the cattle wealth in the rural area as the existing number of veterinary dispensaries and other arrangements are not sufficient to meet the needs.

8) The Governor failed to mention about the serious consideration of problem of Drinking water in the rural area.

9) The Governor has failed to make any reference to the financial and other difficulties of poor

(SRI P. A. PAWASHE)

and middle class people who intend to take higher education and to ought to have declared Secondary and Higher Education free to all

10) The Governor has ignored the problem of rural communications which needs serious consideration and which is one of the major cause of our rural backwardness.

(11) The Governor has not made any reference as what steps Government is going to take to eradicate corruption.

SRI N. S. GURUSIDDAPPA (Beligere):—Sir, I beg to move that the following words shall be added at the end of the motion but regret that there is no mention in the address regarding:

1. Steps to supply fertilisers seeds, financial help at the door of the farmers.
2. Steps to electrify all the villages in the State.
3. Steps for rural water supply and sewerage board
4. Steps to supply adequate food grains to the villages
5. Steps to solve un-employment in rural areas
6. Steps to remove collection of levy from the farmers.

MADAM SPEAKER:—Amendments moved:

That the following words shall be added at the end of the motion but regret that there is no mention in the address regarding:

1) Steps for arresting effectively, the gallopping rise in the price of essential commodities which has brought about misery and hardship to the people.

2) Fruitful plans to check the growing unemployment of educated as well as uneducated persons in the State.

3) Effective steps for reducing poverty of the masses in the State.

4) Effective Steps for increasing production of agricultural and non-agricultural products.

5) Steps to increase the supply of chemical manure.

6) Steps to supply Kannada Typewriters.

) Steps not taken to remove the inter-District movement of food-grains and border areas sealed to help consumers to get food-grains at reasonable cost.

The following words shall be added at the end of the motion but regret to note failure of the Government.

8, In not holding elections to the Taluk Boards and to many Municipalities in the State.

9, In aollowing prohibitive cost of building materials and thereby check the house building activities.

10) In giving adequate financial assistance through Housing Board and other agencies to promote house building activities.

11) In allowing corruption in all walks of life

12) in arresting the manufacture and sale of illicit drinks (like Kallabhatti).

13) In checking the abnormal rise in the cost of textile goods.

(MADAM SPEAKER)

14) To check adulteration of food-stuffs

15) To solve the problem of unrest among the Teachers, Doctors, Students, Labourers and in general, among all sections of the people.

16) In providing funds for development activities of the State.

17) To supply adequate medicines to Government Hospitals.

18) In stopping Grants to the Mahila Seva Samajas in the State.

19) To give a good and clean and efficient administration in the State.

Now Amendment of SRI B. B. SAYANAK is moved :

That the following words shall be added at the end of moon but regrets that :

1) No mention is made of Karnataka-Maharashtra border dispute which is pending more than 18 years. The Maharashtra-Karnataka border dispute must be solved on the basis of village as the unit, Geographical contiguity, relative majority and wishes of the people.

2) No mention is made of soaring price. It is very difficult for the common man to live in at the present state affairs.

3) No steps is taken to eradicate the corruptions neopolism.

4) The Government has failed to safe-guard the minorities in the state. Their life and property is not safe in Karnataka State.

Now Amendment of SRI N. B. SIRDESAI is moved :

That the following words shall be added at the end of motion but regret that :

1) The Governor has failed to make reference of the untold sufferings caused to Marathi people in Belgaum and other areas; hence his report regarding Law and Order situation is one sided and partial.

2) The Governor has failed to make reference of the long pending unsolved border problem between Karnataka and Maharashtra and has failed to mention a solution to settle the Border issue by the State Government.

3) That the Governor has mentioned about the agitation against rising prices and the steps taken to maintain Law and Order position, but has failed to mention the steps Government have taken to maintain the price level in the State.

4) That the Governor has failed to mention that though the levy demand is fulfilled by the growers excess quantity of paddy is being collected from the growers inspite of their filing stock declaration and that too by using Police force.

5) The Governor has failed to make special reference of the schemes that would be taken in the Malnad Talukas of the State; during the Fifth Five Year Plan Period.

6) The Governor has failed to make mention of the Major Medium and Minor Irrigation Projects to be taken up in the Malnad Talukas of Border Areas.

(MADAM SPEAKER)

7) That the Governor has failed to mention that though the Government have not supplied Fertilisers to the growers; Government are collecting levy of Food grains from them.

8) Though the Governor has said that it is necessary greatly to expand Sugar Prouction and it is proposed to start ten Sugar Factories during the coming year but has failed to state whether preference will be given to Malnad and Forest covered Talukas where sufficient lands and Irrigation facilities are available.

9) The Governor has failed to mention that under the plea of paucity of funds and non-availability of Alluminium conductors etc., the Karnataka State Electricity Board has not extended the power supply to I. P. sets in Belgaum District.

10) The Governor has not made specific reference to the Industrialisation in Malnad and Forest covered Talukas of the State.

11) The Governor has failed to admit that the Government are showing scant respect to the proposals of water supply schemes and National Rural Water supply Schemes in the Malnad and Forest covered areas of the Border areas.

12) The Governor has failed to admit that Government have not supplied medicines and paid the salary of S. M. P. Doctors in Belgaum District, for the last over six months under the plea of paucity of funds.

Now Amendment of SRI P. A. PAWASHE is moved:

That the following words shall be added at the end of the motion but regret that:

1) The Governor has failed to make any reference to the long pending border dispute between Maharashtra and Karnataka. The Governor ought to mentioned that this dispute be solved on the basis of Pataskar Formula, so that no unjustice will be caused to any party.

2) The Governor has failed to make any reference to the attrocities committed by Police and Kannadigas on the Maharathi speaking people of Belgaum and border area.

3) The Governor has failed to mention why Government is not in a position to check the trend of rising prices of the food-grains even though there is good Khariff harvest and there are better prospects of a satisfactory rabbi crop.

4) The Governor has failed to mention the steps Government has taken to check the rising prices of food-grains and essential commodities and against the Blackmarketers.

5) The Governor has failed to make any reference to the serious problem of Rural and Urban unemployment and a solution to solve the same.

6) The Governor has failed to mention in short the details of the programme which needs of small and marginal farmers so that their economic conditions are improved.

7) The Governor has failed to make any reference as to how Government is going to make adequate medical provisions to protect the cattle wealth in the rural area as the existing number of veterinary dispensaries and other arrangements are not sufficient to meet the needs.

(MADAM SPEAKER)

8) The Governor failed to mention about the serious consideration of problem of Drinking water in the rural area.

9) The Governor has failed to make any reference to the financial and other difficulties of poor and middle class people who intend to take higher education and to ought to have declared Secondary and Higher Education free to all.

10) The Governor has ignored the problem of rural communications which needs serious consideration and which is one of the major cause of our rural backwardness.

11) The Governor has not made any reference as to what steps Government is going to take to eradicate corruption.

Now Amendment of SRI N. S. GURUSIDDAPPA, is moved :

That the following words shall be added at the end of the motion but regret that there is no mention in the address regarding :

1) Steps to supply fertilisers seeds, financial help at the door of the farmers.

2) Steps to electrify all the villages in the State.

3) Steps for rural water supply and sewerage board.

4) Steps to supply adequate food-grains to the villages.

5) Steps to solve un-employment in rural areas.

6) Steps to remove collection of levy from the farmers.

‡ ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡಿರುವುದರ ಬಗ್ಗೆ ನನ್ನ ಮಿತ್ರರಾದ ಶ್ರೀಮಾನ್ ನಾಯ್ಡುರವರು ಒಂದು ನಿರ್ಣಯವನ್ನು ಮಂಡಿಸಿ ಈ ಸಭೆಯ ಮುಂದೆ ಸಾಂಪ್ರದಾಯಿಕವಾಗಿ ಇಟ್ಟಿದ್ದಾರೆ ಬಹುಶಃ ರಾಜ್ಯಪಾಲರು ರಾಜ್ಯಾಂಗದಲ್ಲಿ ಹೇಳಿರುವಂತೆ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಬೇಕು ಎನ್ನುವುದು ಇಲ್ಲದೇ ಇದ್ದರೆ ನಿನ್ನೆ ನಾವು ಬಹಿಷ್ಕಾರ ಹಾಕಿದಂತೆ ರಾಜ್ಯಪಾಲರು ಕೂಡ ಈ ಸರಕಾರಕ್ಕೆ ಬಹಿಷ್ಕಾರ ಹಾಕುತ್ತಿದ್ದರು ಮತ್ತು ಹೀಗೆ ಭಾಷಣ ಮಾಡಲು ತಿರಸ್ಕಾರ ಮಾಡುತ್ತಿದ್ದರು. ಆದರೆ ಇದೊಂದು ಕಾನ್‌ಸ್ಟಿಟ್ಯೂಷನಲ್ ಅಬ್ಲಿಗೇಷನ್ನು ಎಂದು ಅವರು ಮಾಡಿದ್ದಾರೆ. ರಾಜ್ಯಪಾಲರು ಕೇಂದ್ರ ಸರಕಾರದ ಏಜಂಟರಾಗಿ ಇಲ್ಲಿದ್ದಾರೆ. He is nothing but an Agent of the Central Government. ಇದು ದೇಶದ ದುರ್ದೈವದ ಸಂಗತಿ. ಕಳೆದ ಒಂದು ವರ್ಷದ ಘಟನೆಗಳನ್ನು ನಾವು ಅವಲೋಕನ ಮಾಡಿದರೆ ರಾಜಾಸ್ಥಾನದಲ್ಲಿ ಮಂತ್ರಿ ಮಂಡಲದ ಪುನರ್ರಚನೆ, ಗುಜರಾತಿನಲ್ಲಿ ಮಂತ್ರಿ ಮಂಡಲದ ಪುನರ್‌ರಚನೆ, ತಮಿಳುನಾಡಿನ ರಾಜ್ಯಪಾಲರೊಡನೆ ಚರ್ಜೆ, ಕರ್ನಾಟಕ ರಾಜದಲ್ಲಿ ಮಂತ್ರಿ ಮಂಡಲದ ಪುನರ್ರಚನೆ, ರಾಜ್ಯಪಾಲರಾದ ಶ್ರೀ ಮೋಹನ್‌ಲಾಲ್ ಸುಖಾದಿಯಾರವರ ದೆಹಲಿ ಬೇಟಿ. ಇದೇ ಇವರು ಮಾಡುವ ಕೆಲಸ. ಕಾನ್‌ಸ್ಟಿಟ್ಯೂಷನ್ ಇದೆ ಆದರಂತೆ ಇಲ್ಲಿ ಸರಕಾರದವರು ಅಚ್ಚು ಹಾಕಿರುವ ಭಾಷಣವನ್ನು ತಂದು ಇಲ್ಲಿ ಓದಿದ್ದಾರೆ. ಇದು ಕೇಂದ್ರ ಸರಕಾರದ ಏಜಂಟರಾಗಿ ನಮ್ಮ ರಾಜ್ಯಪಾಲರು ಮಾಡುವ ಕೆಲಸ. ಅವರಿಂದ ಈ ಭಾಷಣವನ್ನು ಓದಿಸಿದ್ದೀರಿ. ನಾನು ಕೂಡ ಅವರ ಭಾಷಣವನ್ನು ನೋಡಿದೆ. ಅದು ಸುಮಾರು 12 ಪುಟಗಳಷ್ಟು ಮಾತ್ರ ಇದೆ. ನಿಮ್ಮ ಮಾಗ್ದಾನ, ಮಿಮ್ಮ ಸಾಧನೆ ಇದರಲ್ಲಿ ಕೊಟ್ಟಿರುವುದು ಕಳೆದ ಸಾರಿ ಎಂದರೆ 1973ರಲ್ಲಿ ಕೊಟ್ಟಿರುವ ಮಾಗ್ದಾನ ರಾಜ್ಯದ ಜನತೆಗೆ ಕೊಡುವಾಗ ಸುಮಾರು 18 ಪುಟಗಳಷ್ಟು ಇದ್ದವು. ಈಗ ತಂದಿರತಕ್ಕ ಭಾಷಣದಲ್ಲಿ ಸಾಧನೆ ಮಾಡಿರುವುದು ಇವರ ಭಾಷಣ 12 ಪುಟಗಳಿಗೆ ಇಳಿಯಿತು. ಇದರಲ್ಲಿ ರಾಜ್ಯಪಾಲರು ಕೊನೆಯ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಅದನ್ನು ಮಾತ್ರ ಇಲ್ಲಿ ಸಭೆಯ ಗಮನಕ್ಕೆ ತರುತ್ತೇನೆ. ಮಾನ್ಯ ನಂಜೇಗೌಡರು ನಾನು ಹೇಳುತ್ತಾ ಇರುವುದನ್ನು ಕೇಳುತ್ತಿದ್ದಾರೆ ಅವರಿಗೆ ಮೊದಲು ಹೆಚ್ಚು ಭಾಷಣ ಮಾಡಲು ಅವಕಾಶವಿರಲಿಲ್ಲ ಈಗ ಭಾಸಣ ಮಾಡಲು ಅವಕಾಶ ಅವರಿಗೆ ಸಿಕ್ಕಿದೆ. ರಾಜ್ಯಪಾಲರು ಅವರ ಭಾಷಣದಲ್ಲಿ ಪುಟ 11ರಲ್ಲಿ

(ಶ್ರೀ ಹೆಚ್. ಡಿ. ದೇವೇಗೌಡ)

ಹೇಳಿರುವುದು ಹೀಗಿದೆ: "ನಮ್ಮ ದೇಶ ಮಾತ್ರವಲ್ಲದೆ ಸಮಗ್ರ ಜಗತ್ತೇ ಇಂದು ಸಂಕಟ ಕಾಲದಲ್ಲಿದೆ. ಮುಂದಿನ ವರ್ಷ, ಹೆಚ್ಚಿನ ಸಲ ನಮ್ಮ ನಿಯಂತ್ರಣಕ್ಕೆ ಮೀರಿದ ಕಾರಣಗಳಿಂದ ಹಲವಾರು ಸಮಸ್ಯೆಗಳನ್ನು ನಾವು ಇದಿರಿಸಬೇಕಾಗುವುದು. ನಮ್ಮ ಕಷ್ಟ ಕಾರ್ಪಣ್ಯಗಳ ನಿವಾರಣೆಗೆ ಹಿಂಸಾವೃತ್ತಿಯಾಗಲೀ, ಆರೋಪ ಪ್ರತ್ಯಾರೋಪಗಳಾಗಲೀ ಸೂಕ್ತ ಸಾಧನವಲ್ಲ. ಮಿತವ್ಯಯೋಪಾಯ, ಜನತೆಯ ಪ್ರತಿಯೊಂದು ಪಂಗಡದ ಹಾರ್ದಿಕ ಸಹಕಾರ—ಇದೇ ಅದಕ್ಕೆ ಪರಿಹಾರ ಮಾರ್ಗ...."

ಇದರೊಳಗೆ ಆರ್ಥಿಕವಾಗಿ ಸಾಮಾಜಿಕ ಕಾರ್ಯಕ್ರಮಗಳನ್ನು ಯಾವ ರೀತಿ ಸಾಧನೆ ಮಾಡಿದ್ದೀರಿ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಇದೇ ರೀತಿ 1973ರಲ್ಲಿ ರಾಜ್ಯಪಾಲರು ಮಾಡಿರುವ ಭಾಷಣದಲ್ಲಿ ಕೂಡ ಇದನ್ನೇ ಹೇಳಿದ್ದಾರೆ. ಇದರಲ್ಲೂ ಕೂಡ ರಾಜ್ಯಪಾಲರು ಸಮಾಜವಾದಕ್ಕೆ ಬದ್ಧರಾಗಿದ್ದಾರೆಂದು ಸೂಚಿಸುತ್ತದೆ. ಆಗ ಕೂಡ ರಾಜ್ಯಪಾಲರು ಪುಟ 17ರಲ್ಲಿ ಹೇಳಿರುವುದು ಹೀಗಿದೆ:

"ನಮ್ಮ ದೇಶವು ಜಾತ್ಯಾತೀತತೆಗೂ ಸಮಾಜವಾದಕ್ಕೂ ಬದ್ಧವಾಗಿದೆ. ಬಡತನ ಮಾಯವಾಗುವಂತೆ, ಅಸಮತೆಗಳು ಕಡಿಮೆಯಾಗುವಂತೆ, ಅನ್ಯಾಯ ತೊಲಗುವಂತೆ, ಸ್ವಾವಲಂಬನೆಯನ್ನು ಆಧರಿಸಿ ಸೂಕ್ತವಾದ ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೆ ತಂದು ಈ ಆದರ್ಶಗಳನ್ನು ಸಾಧಿಸುವ ನಿಮಿತ್ತ ನಿರಂತರವಾಗಿ ದುಡಿಯಲು ಸಂಬಂಧಪಟ್ಟವರೆಲ್ಲರೂ ಯತ್ನಿಸಬೇಕಾಗಿದೆ".

1972ರಲ್ಲಿ ರಾಜ್ಯಪಾಲರು ಹೇಳಿರುವುದು ಕೂಡ ಇದೇ ರೀತಿಯಲ್ಲಿದೆ. ಅದರಲ್ಲಿ ಕೂಡ ಪುಟ 30ರಲ್ಲಿ ಹೀಗಿದೆ:

" ನಮ್ಮ ರಾಷ್ಟ್ರವು ಪ್ರಜಾಪ್ರಭುತ್ವ, ಜಾತ್ಯಾತೀತತೆ ಮತ್ತು ಸಮಾಜವಾದಕ್ಕೆ ಬದ್ಧವಾಗಿದೆ. ದೇಶದಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಈ ತತ್ವಗಳ ನಿರ್ದುಷ್ಟತೆಯನ್ನು ಸಮರ್ಥಿಸಿವೆ. ಬಡತನ ಮಾಯವಾಗಬೇಕಾದರೆ, ಅಸಮತೆಗಳು ಕಡಿಮೆಯಾಗಬೇಕಾದರೆ, ಅನ್ಯಾಯಗಳು ದಮನ ಹೊಂದಬೇಕಾದರೆ ಸ್ವಾವಲಂಬನೆಯ ಆಧಾರದ ಮೇಲೆ ಸೂಕ್ತವಾದ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತಂದು ಈ ಆದರ್ಶಗಳನ್ನು ಸಾಧಿಸುವ ನಿಮಿತ್ತ ನಿರಂತರವಾಗಿ ದುಡಿಯಲು ಸಂಬಂಧಪಟ್ಟವರೆಲ್ಲರೂ ಪ್ರಯತ್ನಿಸಬೇಕು " ಎಂದು ಇದೆ.

SRI D. B. KALMANKAR:—There cannot be any change in the basic policies of the Government. We cannot go on drifting every year.

ಶ್ರೀ ಹೆಚ್. ಡಿ. ದೇವೇಗೌಡ :—ನಮ್ಮ ರಾಜ್ಯದ ಘಟನೆಗಳನ್ನು ಕುರಿತೇ ನಿಮ್ಮ ಬೇಸಿಕ್ ಪಾಲಿಸಿಗಳು ಯಾವ ರೀತಿಯಾಗಿವೆ ಎಂದು ಹೇಳುತ್ತಿದ್ದೇನೆ. ಬೇಸಿಕ್ ಪಾಲಿಸಿಗಳ ಬಗ್ಗೆ ಹೇಳುತ್ತೇನೆಯೇ ವಿನಾ ಅದಕ್ಕೆ ಮುಂದೆ ಹೋಗುವುದಿಲ್ಲ. ನಿಮ್ಮ ಬೇಸಿಕ್ ಪಾಲಿಸಿಗಳೆಲ್ಲಾ ಬರೀ ಕಾಗದದಲ್ಲಿವೆಯೇ ಹೊರತು ಯಾವುದೂ ಕಾರ್ಯರೂಪಕ್ಕೆ ಬಂದು ಕೃತಿಗೆ ಇಳಿಯಲಿಲ್ಲ 1971ರಲ್ಲಿ ಚುನಾವಣೆ ನಡೆಯುವಾಗ ಜನತೆಗೆ ಏನು ಆಶ್ವಾಸನೆ ಕೊಟ್ಟು ನಿಮ್ಮ ನೀತಿ ಹಾಗೂ ಪ್ರಣಾಳಿಕೆ ಯಾವ ರೀತಿ ಇತ್ತು ಅದರಂತೆ ಇಂದು ಜನತೆಗೆ ನಿಮ್ಮ ಪಕ್ಷದವರು ಕೊಟ್ಟ ವಾಗ್ದಾನವನ್ನು ಕಾರ್ಯರೂಪಕ್ಕೆ ತಂದಿದ್ದೀರಾ? ಇದರ ಬಗ್ಗೆ ನಿಮ್ಮ ರಾಜ್ಯಪಾಲರೇ ಅವರ ಭಾಷಣದಲ್ಲಿ ಹೇಳಿದ್ದಾರೆ. ತಾವೂ ಹೇಳಿದ್ದೀರಿ, ಪ್ರಜಾಸತ್ತೆ ರಕ್ಷಣೆ ಮಾಡುವುದೇ ಸಮಾಜವಾದದ ಕಾರ್ಯಕ್ರಮಗಳು ಎಂದು ಸಾಮಾಜಿಕ ನ್ಯಾಯವನ್ನು ಈ ರಾಷ್ಟ್ರದ ದುರ್ಬಲ ವರ್ಗದವರಿಗೆ ಒದಗಿಸುವುದರಲ್ಲಿ ನೀವು ಕೊಟ್ಟಂತಹ ಅಶ್ವಾಸನೆಗಳೇನು ಎಂದರೆ ಮೂರು ಮಹಾ ಮಂತ್ರಗಳು. ಎಂದರೆ ಪ್ರಜಾಸತ್ತೆ, ಸಾಮಾಜಿಕ ನ್ಯಾಯ ಮತ್ತು ಸಮಾಜವಾದ ಎಂದು ಬರೆದು ಬೆಳ್ಳಿಯ ತಾಯಿತದಲ್ಲಿ ಇಟ್ಟು ರಾಷ್ಟದ 56 ಕೋಟಿ ಜನರನ್ನು ಮುಗ್ಧ ಮಾಡಿ 1971ರಲ್ಲಿ ಚುನಾವಣೆಯಲ್ಲಿ ಅರಿಸಿ ನಿಮ್ಮ ಧ್ವಜ ಪತಾಕೆಯನ್ನು ಹಾರಿಸಿದಿರಿ ಕಳೆದ ಮೂರು ವರ್ಷಗಳಿಂದಲೂ ಈ ಮೂರು ಮಹಾ ಮಂತ್ರಗಳಂತೆ ನೋಡಿದರೆ ದೇಶದಲ್ಲಿ ಸಾಮಾಜಿಕ ನ್ಯಾಯ ಕಡಿಮೆಯಾಯಿತೇ? ಇದನ್ನ ಎಷ್ಟು ಕಾರ್ಯರೂಪಕ್ಕೆ ತಂದಿದ್ದೀರಿ? ಇದನ್ನು ಸಭೆಯಲ್ಲಿ ತಮ್ಮನ್ನು ಕೇಳುತ್ತಿದ್ದೇನೆ. ಮಾನ್ಯ ಸಭೆಯಲ್ಲಿ ಮುಖ್ಯ ಮಂತ್ರಿಗಳು ಇಲ್ಲ. ಎಲ್ಲಿಗೆ ಹೋದರೋ ನನಗೆ ಗೊತ್ತಿಲ್ಲ. ಅವರು ಇಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು 1972ರ ಚುನಾವಣೆಗಳಲ್ಲಿ ತಾವು ಕೊಟ್ಟಂತಹ ಅಶ್ವಾಸನೆಗಳನ್ನು ಈಡೇರಿಸಲು ರಾಷ್ಟ್ರದಲ್ಲಿ ಸುಭದ್ರವಾದ ರಾಜ್ಯ ಸರಕಾರಗಳು ಇರಬೇಕೆಂದು ಹೇಳಿದ್ದರು. ಹಾಗಿದ್ದರೆ ಸಮಾಜವಾದವನ್ನು ಕಾರ್ಯರೂಪಕ್ಕೆ ತರಬಹುದು ಎಂದು ಹೇಳಿದಂತಹ ಸಮಾಜವಾದ ಕಾರ್ಯರೂಪಕ್ಕೆ ಬಂದು ಉಳಿದಿದೆಯೇ? ಇದು ಬರೀ ಪ್ರಚಾರಕ್ಕಾಗಿ ಭಾಷಣ ಮಾಡಿದಂತೆ ಘೋಷಣೆ ಮಾಡಿದರು.

3-30 P. M.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು) : 1972ರಲ್ಲಿ ಹಿಮಾಚಲ ಪ್ರದೇಶದಿಂದ ಹಿಡಿದು ಕನ್ಯಾಕುಮಾರಿಯವರಿಗೆ ತಮಿಳುನಾಡು ಒಂದನ್ನು ಬಿಟ್ಟು

(ಶ್ರೀ ಹೆಚ್. ಡಿ. ದೇವೇಗೌಡ)

ನಿಮ್ಮ ಪಕ್ಷವೇ ಆಡಳಿತಕ್ಕೆ ಬಂತು. ಆದರೆ ಇವೊತ್ತು ಪ್ರಜಾಸತ್ತೆಯ ಪರಿಸ್ಥಿತಿ ಏನಾಗಿದೆ, ಸುಭದ್ರ ಸರಕಾರದ ಪರಿಸ್ಥಿತಿ ಏನಾಗಿದೆ; ಇದಕ್ಕೆ ಯಾರು ಹೊಣೆ ಎಂಬುದನ್ನು ಸರ್ಕಾರದವರು ತಮ್ಮ ಉತ್ತರದಲ್ಲಿ ಹೇಳಬೇಕು. ಕಳೆದ 3 ವರ್ಷಗಳಲ್ಲಿ ರಾಷ್ಟ್ರದಲ್ಲಿ ನಡೆದಿರುವ ಘಟನೆಗಳನ್ನು ಅವಲೋಕನ ಮಾಡಿದರೆ, ಇಂದು ಪ್ರಜಾಸತ್ತೆಯ ಅಳಿವು ಮತ್ತು ಉಳಿವಿನ ಪ್ರಶ್ನೆ ನಮ್ಮ ಮುಂದೆ ಇದೆ. ಇದನ್ನು ಪ್ರಜಾಸತ್ತೆ ಎಂಬುದಕ್ಕೆ ಬದಲಾಗಿ ಪ್ರಜೆಸತ್ತೆ ಎಂದು ಹೇಳಬಹುದು. 1972ರಲ್ಲಿ ತಾವು ಜನತೆಯಿಂದ ಆರಿಸಿ ಬಂದ ಮೇಲೆ ಸುಭದ್ರ ಸರ್ಕಾರವನ್ನು ರಚನೆ ಮಾಡಿದಿರಿ: ಅಲ್ಲಿಂದ ಇಲ್ಲಿಯವರೆಗೆ ನಡೆದಿರುವ ಘಟನೆಗಳನ್ನು ಅವಲೋಕನ ಮಾಡಿದರೆ, ಆಂಧ್ರದಲ್ಲಿ 11 ತಿಂಗಳ ಕಾಲ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬಂತು: ಇದಕ್ಕೆ ಯಾರು ಕಾರಣ ಎಂಬುದನ್ನು ಮಾನ್ಯ ದಿಗಂಬರರಾವ್ ಅವರು ಹೇಳಬೇಕು. ಒರಿಸ್ಸಾದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬಂತು: ಉತ್ತರ ಪ್ರದೇಶದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬಂತು: ಗುಜರಾತಿನಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬಂತು, ನಂದಿನಿ ಸತ್ಪತಿಯವರು ಮನೆಗೆ ಹೋಗುವುದಕ್ಕೆ ಆಡಳಿತ ಪಕ್ಷದವರು ಕಾರಣರೇ ಅಥವಾ ವಿರೋಧ ಪಕ್ಷದವರು ಕಾರಣರೇ ಎಂಬುದನ್ನು ಹೇಳಬೇಕು. ಆಂಧ್ರದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬರಲು ಆಡಳಿತ ಪಕ್ಷದ ಮುಖಂಡರೇ ಕಾರಣ. ಈಗ ಮತ್ತೆ ಅವರೇ ಅಧಿಕಾರಕ್ಕೆ ಬಂದಿದ್ದಾರೆ. ಗುಜರಾತ್, ಒರಿಸ್ಸಾದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯಿದ್ದರೂ ಸಹ ಅಲ್ಲಿಯ ಶಾಸನ ಸಭೆಗಳು ಇವೊತ್ತಿಗೂ ಕೂಡ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ ಅಲ್ಲಿಯ ಶಾಸಕರು ತಮ್ಮ ಪಗಾರವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ರೀತಿಯಾಗುತ್ತದೆಂದು ರಾಜ್ಯಾಂಗವನ್ನು ಬರೆದವರು ನಿರೀಕ್ಷೆ ಮಾಡಿರಲಿಲ್ಲವೆಂದು ಕಾಣುತ್ತದೆ. ಮತ್ತು ಈ ಒಂದು ಮಟ್ಟದಲ್ಲಿ ಆಡಳಿತ ನಡೆಯುತ್ತದೆಂದು ಅವರ ನಿರೀಕ್ಷೆ ಮಾಡಿರಲಿಲ್ಲ ದುರ್ದೈವದ ಸಂಗತಿ ಎಂದರೆ ಆಂಧ್ರದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಇದ್ದಾಗಲೇ ಸಿ ಆರ್. ಪಿ. ಅವರು ಹೆಣ್ಣುಮಕ್ಕಳನ್ನು ರೇಪ್ ಮಾಡಿದ ಘಟನೆಗಳು ನಡೆದಿವೆ.

ಉಪಾಧ್ಯಕ್ಷರು . ಆ ವಿಚಾರವೆಲ್ಲ ಇದರಲ್ಲಿ ಬರುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ : ಸಮಾಜವಾದದ ಮೂಲಕ ಸಾಮಾಜಿಕ ನ್ಯಾಯವನ್ನು ಜಾರಿಗೆ ತರುವುದಕ್ಕೆ ಕೆಲಸ ಮಾಡುತ್ತಿದ್ದೇವೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದಕಾರಣ ಅದರ ಒಂದು ವ್ಯಾಪ್ತಿಯಲ್ಲಿ ನಾನು ಮಾತನಾಡುತ್ತಿದ್ದೇನೆಯೇ ಹೊರತು, ಅದರ ಹೊರಗೆ ಹೋಗಿ ನಾನು ಮಾತನಾಡುತ್ತಿಲ್ಲ. ಮಾನ್ಯ ಕೃಷ್ಣ ಅವರು ಈ ಕಡೆ ಕುಳಿತುಕೊಂಡಿದ್ದಾಗ ಅವರು ಮಾಡುತ್ತಿದ್ದ ಭಾಷಣಗಳನ್ನು ನಾನು ಗಮನವಿಟ್ಟು ಕೇಳುತ್ತಿದ್ದೆ. ಇಂದಿನ ಪರಿಸ್ಥಿತಿಗೆ ಯಾರು ಕಾರಣ ಎಂಬುದನ್ನು ಅವರು ಹೇಳಬೇಕು.

MR. DEPUTY SPEAKER :—The Governor has delivered a speech pertaining to the policies of this Government and the State Government has got its own borders. Beyond that, we cannot go. How can you go beyond that, even if it is a policy matter? I can understand, if the Hon. Member had been in the Lok Sabha or the *R*ajya Sabha.

SRI H. D. DEVE GOWDA.—I will read relevant portions of the Governor's speech for your information. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವಂತಹ ಅಂಶದ ವ್ಯಾಪ್ತಿಯಲ್ಲಿಯೇ ನಾನು ಭಾಷಣ ಮಾಡುತ್ತಿದ್ದೇನೆ. ಇಂದು ಗುಜರಾತಿನಲ್ಲಿ ಏನಾಗಿದೆ. ಅಂತಹ ಅರಾಜಕತೆಗೆ ಕಾರಣ ಏನು ಎಂಬುದನ್ನು ಹೇಳಬೇಕು.

MR. DEPUTY SPEAKER.—I have not got a reply from Sri. Deve Gowda, to my question. I asked you that the Governor's speech pertains to the policy matters and the State has its own borders. How can this house discuss Andhra, and Gujarat here.

SRI H. D. DEVE GOWDA : I want to ask for a clarification from the Hon. Deputy Speaker. What is the policy of the Congress R. Government headed by Sri. Devaraj Urs in the State? If the wholesale take over is going to be a failure, am I not entitled to discuss the policy of the Government of India in taking that decision. You cannot curtail my expression so far as the failure of the policy of the Government of India, because in the State also the same party is responsible for that policy. I am within my limits.

MR. DEPUTY SPEAKER.—So far as the State is concerned, how can a member have refer to Gujarat? This Assembly is sovereign so far as this State is concerned. The Governor's Address very clearly refers to the policies of this State Government. And this State Government has got its borders. Hon. members

(MR. DEPUTY SPEAKER)

can refer to the policy of the State Government pertaining to the Address or whatever it is. Beyond that, it is very difficult to understand how the Hon. Leader of the opposition can refer to matters of Andhra Pradesh, Delhi, Gujarat, Pondycherry, etc. Casual reference here and there may be allowed. But repeated references, in my humble opinion, will be beyond the scope.

SRI H. D. DEVE GOWDA.—If I want to question the industrial policy of the State, is it not relevant to discuss the industrial policy laid down by the Government of India?

MR. DEPUTY SPEAKER.—Casual references could be allowed. But how can he speak about other states here?

SRI S.M. SEERANALLY CHANDRASHEKHAR.—On a point of order Sir. How can he threaten the speaker like that?

MR. DEPUTY SPEAKER.—He has not defied the Chair. He is just in the process of getting further clarification. But let him tell me how can he refer to Gujarat and Andhra Pradesh?

ಶ್ರೀ ಹೆಚ್. ಡಿ. ದೇವೇಗೌಡ : ದಯಮಾಡಿ ನಾನು ತಮ್ಮ ರೂಲಿಂಗನ್ನು ಧಿಕ್ಕರಿಸುತ್ತೇನೆಂದು ತಾವು ತಿಳಿಯಬಾರದು; ಈ ಬಗ್ಗೆ ತಾವು ಹತ್ತು ಸಲ ಆಲೋಚನೆ ಮಾಡಿ ಹೇಳಬೇಕಾಗುತ್ತದೆ. ಏಕೆಂದರೆ ತಮಗೆ ನನಗಿಂತ ಹೆಚ್ಚಿನ ಅನುಭವವಿದೆ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡುವ ರೀತಿಯಲ್ಲಿ ಭಾಷಣ ಮಾಡಬೇಕು ಎಂದು ತಾವು ಆದೇಶ ಕೊಡುವುದಾದರೆ ನಾನು ನನ್ನ ಭಾಷಣವನ್ನು ಇಲ್ಲಿಗೇ ಮುಗಿಸಿ ಕುಳಿತುಕೊಳ್ಳುತ್ತೇನೆ.

ಈ ಬಗ್ಗೆ ತಾವು ರೂಲಿಂಗ್ ಕೊಡಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ದೇವೇಗೌಡರು ಉಪಾಧ್ಯಕ್ಷರು ಹೇಳಿರತಕ್ಕಂಥಾ ಗೈಡ್‌ಲೈನ್ ಏನಿದೆ ಇದರ ಸ್ಪಿರಿಟ್ ಮಾತ್ರ ತೆಗೆದುಕೊಳ್ಳಬೇಕು. ಗುಜರಾತಿನ ವಿಷಯವಾಗಲೀ, ಆಂಧ್ರದ ವಿಷಯವಾಗಲೀ, ಡೆಮಾಕ್ರಸಿ ಸೋಷ್ಯಾಲಿಸಂ ದೃಷ್ಟಿಯಿಂದ ರೆಫರ ಮಾಡಬೇಕಾಗುತ್ತದೆ. ಶ್ರೀ ಮಾನ್ ದೇವೇಗೌಡರ ಸ್ಟೇಟಸ್‌ನಲ್ಲಿ ಕೆರೆಕಟ್ಟೆಗಳ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ.

All that the Deputy Speaker meant was, if I have understood, that casual references here and there should be made.

Sri H. D. DEVE GOWDA.— How democracy is functioning in this country today is what I want to mention here.

MR. DEPUTY SPEAKER.— The Hon. Member knows me very well. Does he think I want to curb his rights? Have I done it any time?

Sri H. D. DEVE GOWDA. No Sir. Why I am giving all these examples is to mention how democracy is functioning in this country. ತಾವು ನನ್ನ ಭಾಷಣವನ್ನು ಮೊಟಕು ಮಾಡಿ ಎಂದು ಹೇಳಿದರೆ ನಾನು ಮುಂದುವರಿಸುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಇವೊತ್ತು ಗುಜರಾತಿನಲ್ಲಿ ನಡೆದಿರತಕ್ಕ ಕರಾಳ ಕೃತ್ಯ ಏನಿದೆ? ಯಾವ ಕಾರಣಗಳಿಂದ ಅಲ್ಲಿ ಅರಾಜಕತೆ ಉಂಟಾಗಿದೆ? ಅಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎನ್ನುವ ಪರಿಸ್ಥಿತಿ ಉಂಟಾಗಿದೆ, ಅಲ್ಲಿ ನಡೆದಿರತಕ್ಕ ಘಟನೆಗಳಿಗೆ ಕೇಂದ್ರ ಸರ್ಕಾರವೇ ಹೊಣೆ ಎಂದು ಚಿಮನ್‌ಭಾಯ್ ಪಟೇಲರು ಹೇಳಿದ್ದಾರೆ. ಅಲ್ಲಿನ ನಗರ ಸಭೆಯುವರು ಅಲ್ಲಲ್ಲಿ ಅಹಾರ ಧಾನ್ಯಗಳು ಇದ್ದರೂ ಅದನ್ನು ಸರಿಯಾಗಿ ವಿತರಣೆ ಮಾಡತಕ್ಕ ಕೆಲಸವನ್ನು ರಾಜ್ಯ ಸರಕಾರದವರು ಸರಿಯಾಗಿ ನಿರ್ವಹಣೆ ಮಾಡದೆ ಈ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತಾರೆ. ನಿಮ್ಮ ಪಕ್ಷದವರೇ ಆಗಿರತಕ್ಕ 25 ಜನ ಶಾಲಕರು ಹೇಳುತ್ತಾರೆ ಸರಕಾರ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಈ ಅನಾಹುತವಾಗಿದೆ ಎಂದು ಹೇಳುತ್ತಾರೆ. ಅಲ್ಲಿನ ಮೂರು ಜನ ಸಚಿವರು ಹೇಳುತ್ತಾರೆ. ರಾಷ್ಟ್ರಕ್ಕೆ ಒಳ್ಳೆಯ ನಾಯಕತ್ವ ಇಲ್ಲದೇ ಇರುವುದರಿಂದ ಈ ಪರಿಸ್ಥಿತಿ ಬಂದಿದೆ ಎಂದು. ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅದರು ದೇಶದ ಮುಖಂಡತ್ವವನ್ನು ವಹಿಸಬೇಕು ಎಂದು 3 ಜನ ಸಚಿವರು ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ.

Sri S. M. SHEERANALY CHANDRASEKHAR.— This is a very serious statement made by the Hon. Leader of the Opposition.

Sri K. B. SHIVAIAH.— I want to know who are the members of the Council of Ministers?

MR. DEPUTY SPEAKER.— I have understood. I am trying to follow. Please have little patience.

Sri S. M. SHEERANALY CHANDRASEKHAR.-- The Hon. Leader of the opposition cannot make some grave allegations. It is a very serious allegation against the Party. Let the Hon. Leader of the opposition tell the names and quote the instances and prove his case.

(INTERRUPTIONS)

MR. DEPUTY *SPEAKER.*— I am sufficiently competent to taken care of.

Sri S. M. SHEERANALLY CHANDRASEKHAR. -- I request the Hon. Leader of the opposition through the Chair to give clarification about his statement.

ಶ್ರೀ ಹೆಚ್. ಡಿ. ದೇವೇಗೌಡ :- ನಾನು ಯಾವುದೇ ಮಾತನ್ನು ಆಡುವಾಗ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳತಕ್ಕಂಥಾ ಮಾತನಾಡುವುದಕ್ಕೆ ನಾನು ಸಿದ್ಧನಿಲ್ಲ, ಇವೊತ್ತು ರಾಷ್ಟ್ರದ ಪ್ರಮುಖ ಪತ್ರಿಕೆಗಳಲ್ಲಿ ಬಂದಿರತಕ್ಕ ಹೇಳಿಕೆಗಳು ಏನಿವೆ ಅವುಗಳನ್ನು ನಾನು ಇಟ್ಟುಕೊಂಡಿದ್ದೇನೆ. ಬೇಕಾದರೆ ತಾವು ಅಪ್ಪಣೆ ಕೊಟ್ಟರೆ ಅವುಗಳನ್ನು ಓದುತ್ತೇನೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ದೇವರಾಜ್ ಅರಸ್ ಅವರು ಸೂಂಡೂರಿನಲ್ಲಿ ಭಾಷಣ ಮಾಡುತ್ತಾ ನಮ್ಮ ರಾಷ್ಟ್ರಕ್ಕೆ ಯೋಗ್ಯ ನಾಯಕತ್ವ ಇಲ್ಲದೆ ಇರುವುದರಿಂದ ಇಂಥಾ ಅಶಾಂತಿಗೆ ಕಾರಣವಾಗಿದೆ ಎಂದು ಹೇಳಿದ್ದಾರೆ. ಈ ದಿವಸ ಪ್ರಜಾಸತ್ತೆಗೆ ಎಂತಹ ಪರಿಸ್ಥಿತಿ ಬಂದಿದೆ ಎಂದರೆ ನಗೆಪಾಟಲಿಗೆ ಈಡಾಗತಕ್ಕಂಥಾ ಪರಿಸ್ಥಿತಿ ಬಂದಿದೆ. ಈ ಮೂರು ವರ್ಷಗಳಲ್ಲಿ ನಿಮ್ಮ ಆಡಳಿತದಲ್ಲಿ ನಿಮಗೆ ವಿರೋಧವಾಗಿರತಕ್ಕ ಯಾವುದೇ ಸರ್ಕಾರ ಇದ್ದರೂ ಅದಕ್ಕೆ ಕಿರುಕುಳ ಕೊಟ್ಟು ಅದಕ್ಕೆ ಮರಣವನ್ನು ಉಂಟು ಮಾಡುವುದಕ್ಕೆ ಬೇಕಾದ ಎಲ್ಲಾ ಪ್ರಯತ್ನವನ್ನು ನಡೆಸಿದ್ದೀರಿ. ಈ ಪ್ರಜಾಸತ್ತೆಯ ಪರಿಸ್ಥಿತಿ ಹೇಗಿದೆ ಎಂದರೆ ಮೋಟಾರು ಟ್ಯೂಬು ತೂತು ಬಿದ್ದು ಪಂಕ್ಚರ್ ಆಗಿರುವಾಗ ಸಮಾಜವಾದದ ಗಾಳಿಯನ್ನು ಹೊಡೆದು ನೀವು ಪ್ರಜೆಗಳನ್ನು ಜೀವಂತವಾಗಿ ಉಳಿಸುವುದಕ್ಕೆ ಹೊರಟಿದ್ದೀರಿ. ನಿಮ್ಮ ಸಮಾಜವಾದದ ಗಾಳಿಯನ್ನು ಹೊಡೆದು ಟ್ಯೂಬು ಪಂಕ್ಚರ್ ಆಗಿದೆ. ಈಗ ಟ್ಯೂಬಿಗೆ ಸಮಾಜವಾದದ ಗಾಳಿಯನ್ನು ತುಂಬಿಕೊಂಡು ಹೋಗುತ್ತಿದ್ದೀರಿ. ಗುಜರಾತಿನಲ್ಲಿ ಜನ ಅನ್ನ ಕೇಳಿದರೆ ಅವರಿಗೆ ನೀವು ಕೊಟ್ಟ ಉಡುಗೊರೆ ಏನು?

1974 ನೇ ಇಸವಿಯಲ್ಲಿ ಜನವರಿ ತಿಂಗಳಿನಲ್ಲಿ ಸುಮಾರು 56 ಜನಗಳು ನಿಮ್ಮ ಪೋಲೀಸಿನವರ ಗುಂಡಿಗೆ ಆಹುತಿಯಾಗುವಂತಹ ಪರಿಸ್ಥಿತಿ ಬಂದಿದೆ. ಇದು ಫ್ರೆಂಚ್ ರೆವಿಲ್ಯೂಷನ್ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಲ್ಲಿ ಶಾಸಕರಾಗಲೀ ಮಂತ್ರಿಗಳಾಗಲೀ ಬೀದಿಗಳಲ್ಲಿ ಓಡಾಡುವುದಕ್ಕೆ ಶಕ್ಯವಿಲ್ಲ. ಗುಜರಾತಿನಲ್ಲಿ 4 ಸಾವಿರ ಜನ ಮೆರವಣಿಗೆಯಲ್ಲಿ ಪುರಸಭೆಗೆ ಹೋಗಿ ಅಲ್ಲಿನ ಮೇಯರ್ ಅನ್ನು ನೀವು ಸರಿಯಾಗಿ ಕೆಲಸ ಮಾಡಿಲ್ಲ ರಾಜೀನಾಮೆಯನ್ನು ಕೊಟ್ಟು ಆಚೆ ಹೋಗಿ ಎಂದು ಅವರನ್ನು ಹೊರಗಡೆ ಕಳುಹಿಸಿದ್ದಾರೆ. ಇದು ಗುಜರಾತಿನಲ್ಲಿ ನಡೆದಿದೆ. ಪ್ರಜಾಸತ್ತೆ ಯಾವರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ರಾಷ್ಟ್ರಪತಿ ಶ್ರೀಮಾನ್ ವಿ. ವಿ. ಗಿರಿಯವರು ಹೇಳಿದ್ದಾರೆ. ವಿನೋಬಾಭಾವೆಯವರು ಹೇಳಿದ್ದಾರೆ. ಶ್ರೀಮಾನ್ ಜಯಪ್ರಕಾಶ್‌ನಾರಾಯಣ್ ಅವರು ಹೇಳಿದ್ದಾರೆ. ಯಾರು ಹಿತವಚನ ಹೇಳಿದರೂ ಕೂಡ ನಿಮಗೆ ಹಿಡಿಸುವುದಿಲ್ಲ

ನಾನು ನಿಮಗೆ ಒಂದು ಸೂಚನೆಯನ್ನು ಕೊಡುತ್ತೇನೆ. ನಿಮ್ಮ ಅವಸಾನ ಘಂಟಾನಾದ ಬಡೆಯಲಿಕ್ಕೆ ಪ್ರಾರಂಭವಾಗಿದೆ. ಅದು ಗುಜರಾತಿನಲ್ಲಿ ಶುರುವಾಗಿದೆ. ಮಹಾರಾಷ್ಟ್ರದಲ್ಲಿಯೂ ನಡೆದಿದೆ; ಕರ್ನಾಟಕಕ್ಕು ಬರುತ್ತದೆ. ಆದರಿಂದ ನೀವು ಎಚ್ಚರಿಕೆಯಿಂದ ದೇಶದ ಆಡಳಿತವನ್ನು ನಡೆಸಿ ಎಂದು ಹೇಳುತ್ತೇನೆ.

ಇನ್ನು ಸಮಾಜವಾದದ ಬಗ್ಗೆ ಹೇಳುವುದಾದರೆ, ತಮ್ಮ ಸಮಾಜವಾದವನ್ನು ಎಷ್ಟು ಮಟ್ಟಿಗೆ ರಾಷ್ಟ್ರದಲ್ಲಿ ಜಾರಿಯಲ್ಲಿ ತಂದಿದ್ದೀರಿ ? ನಾನು ಸಮಾಜವಾದವನ್ನು ಉಲ್ಲೇಖ ಮಾಡುವ ಮೊದಲು ಪ್ರಜಾಸತ್ತೆಯ ಉಳಿವಿಗಾಗಿ ಪತ್ರಿಕೆಗಳು ಕೂಡ ತುಂಬಾ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ದೇಶದಲ್ಲಿ ಜನತೆಯ ಅಭಿಪ್ರಾಯವನ್ನು ಮೂಡಿಸುವುದಕ್ಕೆ ಪತ್ರಿಕೆಗಳು ಸಹ ತಮ್ಮ ಕರ್ತವ್ಯವನ್ನು ಯಾರ ಹಂಗಿಗೂ ಒಳಗಾಗದೆ ಮಾಡಬೇಕಾಗುತ್ತದೆ. ಇಲ್ಲವಿದ್ದರೆ ಪ್ರಜಾಸತ್ತೆಯ ನಾಶಕ್ಕೆ ಅವರು ಸಹ ಕಾರಣಕರ್ತರಾಗುತ್ತಾರೆ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ. ಒಂದು ಉದಾಹರಣೆಗೆ ಹೇಳುವುದಾದರೆ ಒಬ್ಬ ಸಾಮಾನ್ಯವಾದಂತಹ ಇಂದಿರಾ ಬ್ರಿಗೇಡಿನ ಕಮ್ಯಾಂಡೆಂಟ್ ಒಂದು ಹೇಳಿಕೆ ಕೊಟ್ಟರೆ ಅದು ಪತ್ರಿಕೆಯ ಪ್ರಥಮ ಪುಟದಲ್ಲಿ ಬರುತ್ತದೆ. ಆದರೆ ಜಯಪ್ರಕಾಶ್ ನಾರಾಯಣರಂಥವರು ಒಂದು ಹೇಳಿಕೆ ಕೊಟ್ಟರೆ ಅದು ಪತ್ರಿಕೆಯ 7ನೇ ಪುಟದಲ್ಲಿ ಬರುತ್ತದೆ. ಇದು ದೇಶದ ದುರ್ದೈವ ಎಂದು ಹೇಳಬೇಕಾಗುತ್ತದೆ. ಪತ್ರಿಕೆಗಳು ಸಹ ತಮ್ಮ ಕರ್ತವ್ಯವನ್ನು ಅರಿತುಕೊಳ್ಳದಿದ್ದರೆ ಅವರು ಪ್ರಜಾಸತ್ತೆಯ ಅಳಿವಿಗೆ ಕಾರಣರಾಗುತ್ತಾರೆ. ಮೊನ್ನೆ ಸಂಕೇಶ್ವರದ ಚುನಾವಣೆಯ ಸಮಯದಲ್ಲಿ ಪತ್ರಿಕಾಕರ್ತರು ಬಂದಿದ್ದರು. ನಾನು

(ಶ್ರೀ ಹೆಚ್. ಡಿ. ದೇವೇಗೌಡ)

ಆ ಚುನಾವಣೆಯಲ್ಲಿ ಗೆದ್ದಿದ್ದೇವೆ ಎಂದು ಬೆನ್ನು ತಟ್ಟುವುದಕ್ಕೆ ಹೇಳುತ್ತಾ ಇಲ್ಲ: ಮಾನ್ಯ ಕೆ. ಕೆ. ಮೂರ್ತಿಯವರ ನೇತೃತ್ವದಲ್ಲಿ ಪತ್ರಿಕಾಕರ್ತರ ಸಂದರ್ಶನ. ನಮ್ಮ ರಾಜ್ಯದ ಸಚಿವ ಸಂಪುಟದಲ್ಲಿ ಬ್ರಾಹ್ಮಣರಿಗೆ ಪಾತ್ರವಿಲ್ಲ. ಮೈಸೂರಿನಲ್ಲಿ ನಡೆಯುತ್ತಿರುವ ಉಪಚುನಾವಣೆಯಲ್ಲ ಒಬ್ಬ ಕೆ. ಕೆ. ಮೂರ್ತಿಯಂಥ ಮಹನೀಯರನ್ನು ಅಲ್ಲಿ ನಿಲ್ಲಿಸಿ ಗೆಲ್ಲಿಸುವ ಒಂದು ಸದವಕಾಶವನ್ನು ತಾವು ಕಳಕೊಂಡಿದ್ದೀರಿ. ಈ ಮಾತನ್ನು ನಾನು ಬಹಳ ನೊಂದ ಹೃದಯದಿಂದ ಹೇಳಬೇಕಾಗುತ್ತದೆ. 11 ಜನ ಮಂತ್ರಿಗಳು ಸಂಕೇಶ್ವರದಲ್ಲಿ ಬಿಡಾರ ಮಾಡಿದ್ದಾರೆ. ಮಾನ್ಯ ಸಿದ್ದವೀರಪ್ಪನವರು ಈ ಜಾಗದಲ್ಲಿ ಕೂತು ಅನೇಕ ಸಾರಿ ಹಲವು ಭಾಷಣಗಳನ್ನು ಮಾಡಿದ್ದಾರೆ. ನೀವು ಹೀಗೆ ಹೀಗೆ ಆಡಳಿತ ಯಂತ್ರದ ದುರುಪಯೋಗ ಮಾಡಿದ್ದೀರಿ ನಿಜಲಿಂಗಪ್ಪನವರೇ ಎಂದು ಹೇಳಿದ್ದಾರೆ. ಅಲ್ಲಿ ಚುನಾವಣೆಗೆ ಕೇವಲ ನಾಲ್ಕು ದಿನಗಳ ಹಿಂದೆ ನೂರಾರು ಅಧಿಕಾರಿಗಳ ವರ್ಗಾವಣೆ ಆಗಿದೆ. ಅದೇ ರೀತಿ ನಾವು ಸಕ್ಕರೆ ಕಾರ್ಖಾನೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆಂದು ಸಹ ಮುಖ್ಯಮಂತ್ರಿಯವರು ಘೋಷಣೆ ಮಾಡಿದ್ದಾರೆ. ಇವತ್ತು ಸಹಕಾರೀ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕಂತಹ ಯಾವುದಾದರೂ ಕಾರ್ಖಾನೆ ಇದ್ದರೆ, ಅದು ಸಂಕೇಶ್ವರದ ಕಾರ್ಖಾನೆ ಎಂದು ಮಾನ್ಯ ಚನ್ನಬಸಪ್ಪನವರು ಒಪ್ಪುತ್ತಾರೆ ಎಂದು ತಿಳಿಯುತ್ತೇನೆ. ಬಹುಶಃ ಅಲ್ಲಿರತಕ್ಕಂತಹ ವ್ಯಕ್ತಿಯ ಮೇಲೆ ನಿಮಗೆ ಯಾವುದೇ ಕಳಂಕವನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮುಖ್ಯಮಂತ್ರಿಯವರು ಏನು ಅಲ್ಲಿ ಹೇಳಿದ್ದಾರೆ ಎಂಬುದನ್ನು ತಾವು ಸರಿಯಾಗಿ "ಕೋಟ್" ಮಾಡಿ ಹೇಳುತ್ತಾ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಎಲ್ಲರ ಕಬ್ಬನ್ನು ತೆಗೆದುಕೊಳ್ಳದಿದ್ದರೆ ಸರ್ಕಾರ ಆ ಕಾರ್ಖಾನೆಯನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ಮಾತ್ರ ಜನರು ನಿಮಗೆ ದೂರು ಕೊಟ್ಟರೇ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಜನರ ದೂರು ಬಂದಾಗ ಆ ರೀತಿ ಹೇಳಿರುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಸಕ್ಕರೆ ಕಾರ್ಖಾನೆಯನ್ನು ಸುಪರ್‌ಸೀಡ್ ಮಾಡಿದರೆ ನಿಮ್ಮನ್ನು ದೇಶದ ಜನರು ಸುಪರ್‌ಸೀಡ್ ಮಾಡುವುದಕ್ಕೆ ಕಾಯುತ್ತಿದ್ದಾರೆ.

ಕೊನೆಯದಾಗಿ ರಾಷ್ಟ್ರಕ್ಕೆ ಪ್ರಜಾಪ್ರಭುತ್ವವನ್ನು ತಂದುಕೊಡುವುದಕ್ಕೆ ಹೋರಾಟ ಮಾಡಿದಂಥ ಪ್ರಮುಖರಲ್ಲಿ ದಿವಂಗತ ಜವಾಹರಲಾಲ ನೆಹರೂರವರು ಒಬ್ಬರು. ಅವರೇ ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ ಅವರ ಮಗಳಾದ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಪ್ರಜಾಸತ್ತೆಯ ಸಾವು ಉಂಟಾದರೆ ಆ ಕೀರ್ತಿ ಸಹ ಅವರ ಮನೆತನಕ್ಕೆ ಹೋಗುತ್ತದೆ ಎಂಬ ಮಾತನ್ನು ಇಲ್ಲಿ ಹೇಳುತ್ತೇನೆ. ಇದು ರಾಷ್ಟ್ರದ ಚರಿತ್ರೆಯಲ್ಲಿ ಬರೆದಿಡಬೇಕಾದಂತಹ ವಿಚಾರ.

ಇನ್ನು ಸಮಾಜವಾದ. ಬಹುಶಃ ಮಾನ್ಯ ಕೃಷ್ಣನವರಿಗೆ ಹೇಳಿದರೆ ಬೇಸರವಾಗಬಹುದೋ ಏನೋ. ತಾವು ಅದೇ ಪಕ್ಷದಿಂದ ಬಂದಂಥವರು. ತಮಗೆ ಅದರಲ್ಲಿ ಏನೊಂದು ನಂಬಿಕೆ ಇತ್ತು ಅದು ಈಗ ಹೋಗಿದೆ ಎಂದು ಕಾಣುತ್ತದೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಲು 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ತಾತ್ಕಾಲಿಕವಾದ ಚಪ್ಪರವನ್ನು ಹಾಕಿ ಅಲ್ಲಿ ಮೂರು ದಿವಸ ನಿಮ್ಮ ಪ್ರಧಾನ ಮಂತ್ರಿಯವರು ಇದ್ದರು. ಇದು ಅಲ್ಲಿರತಕ್ಕಂತಹ ಬಡವರನ್ನು ಉದ್ಧಾರ ಮಾಡುವುದಕ್ಕೋಸ್ಕರ ಮಾಡಿದಂತಹ ಖರ್ಚು. ಇದು ನಿಮ್ಮ ಸಮಾಜವಾದ. ಕೇವಲ 8 ದಿವಸಗಳು ಬಡವರ ಬವಣೆಯನ್ನು ಕುರಿತು ಚರ್ಚೆ ಮಾಡುವುದಕ್ಕೆ ತಾತ್ಕಾಲಿಕ ಗೃಹ ನಿರ್ಮಾಣ 8 ಲಕ್ಷ ರೂಪಾಯಿಗಳಲ್ಲಿ. ಇದು ಸಮಾಜವಾದ. ಇವತ್ತು ಸಮಾಜವಾದವನ್ನು ಮಾಡುತ್ತಾ ಅದರ ಒಂದು ಫಲವನ್ನು ಬಡವರು ಉಣ್ಣಲಿಕ್ಕೆ ಅವರ ಮನೆಯಲ್ಲಿಯೇ ಸಮಾಜವಾದ ಪ್ರಾರಂಭ. ಶ್ರೀಮತಿ ಇಂದಿರಾಗಾಂಧಿಯವರೇ ತಮ್ಮ ಪುತ್ರನಿಂದಲೇ ಕಾರ್ ಕಾರ್ಖಾನೆ ಸ್ಥಾಪನೆ ಮಾಡಿಸತಕ್ಕ ಒಂದು ದೊಡ್ಡ ಉದ್ಯಮವನ್ನು ಮಾಡಿಸುತ್ತಿದ್ದಾರೆ. ಇದೂ ಸಮಾಜವಾದವೇ.

4-00 P. M.

ಶ್ರೀ ಕೋಣಂದೂರು ಲಿಂಗಪ್ಪ.—ಅದೇ ಮಾರುತಿ ಕಂಪೆನಿಯಿಂದ ನಡೆಯುತ್ತಿರುವ ಸಮಾಜವಾದ.

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.—ಪಾಯಿಂಟ್ ಆಫ್ ಆರ್ಡರ್. ಮಾನ್ಯ ಶ್ರೀ ದೇವೇಗೌಡರು ಈ ಸದನದಲ್ಲಿ ಇಲ್ಲದೇ ಇರುವವರ ಹೆಸರುಗಳನ್ನು ಎತ್ತಿಕೊಂಡು ಟೀಕೆ ಮಾಡುತ್ತಿದ್ದಾರೆ. Is it allowed under the rules of procedure?

ಶ್ರೀ ಹೆಚ್. ಡಿ. ದೇವೇಗೌಡ.—ಪ್ರಧಾನಮಂತ್ರಿಗಳು ಎಂಬುದಾಗಿ ಹೇಳುವುದಕ್ಕೆ ನನ್ನನ್ನು ಈ ಸಭೆಯ ಯಾರೂ ಅಡ್ಡಿ ಮಾಡುವುದಕ್ಕಾಗುವುದಿಲ್ಲ

Mr. Deputy Speaker.—That name has again and again been put and that is also repudiated. The Prime Minister has given a chance to an young boy who is vigorous and, dashing qualities. She has also said that any young boy who comes forward and is enterprising has such chances. That has been discussed over and over again. Of course, I do admit that we should not mention names of persons who are not here to defend themselves.

Sri H. D. Devegowda.—I have the right to mention the name of the Prime Minister.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಬರೀ ಅವರನ್ನು ಹೊಗಳುವುದಕ್ಕೆ ಮಾತ್ರ ಅವಕಾಶವೆಂದರೆ ಅದು ಆಗುವುದಿಲ್ಲ. ಅವರ ಸಮಾಜವಾದವನ್ನು ಮಾತ್ರ ಹೊಗಳುವುದಕ್ಕೆ ಸಾಧ್ಯವಿಲ್ಲ.

ಉಪಾಧ್ಯಕ್ಷರು.- ನಾವು ಇಲ್ಲಿ ಪ್ರೊಸೀಜರ್ ಪ್ರಕಾರ ಹೋಗಬೇಕು.

ಶ್ರೀ ಹೆಚ್. ಡಿ. ದೇವೇಗೌಡ. ಇವರು ಮಾಡುತ್ತಿರುವ ಸಮಾಜವಾದ ಹೇಗೆ ಜಾರಿಗೆ ಬರುತ್ತಿದೆನ್ನುವುದಕ್ಕೆ ರಾಷ್ಟ್ರದ ಕೆಲವು ಪ್ರಮುಖ ಪತ್ರಿಕೆಗಳಲ್ಲಿ ಅಗ್ರಲೇಖನವಾಗಿ ಬರೆದಿದ್ದಾರೆ. ಅವುಗಳ ವಿವರವನ್ನು ನಂತರ ಹೇಳುತ್ತೇನೆ. ಉತ್ತರ ಪ್ರದೇಶದಲ್ಲಿ ಸಮಾಜವಾದ ರಚನೆಗೋಸ್ಕರ ಸುಮಾರು 30 ಕೋಟಿ ರೂಪಾಯಿಗಳನ್ನು ಚುನಾವಣೆಯಲ್ಲಿ ವೆಚ್ಚ ಮಾಡಿದ್ದಾರೆ. ಇದು ಸಮಾಜವಾದ ಸರ್ಕಾರ. ಇವರ ಒಂದು ಸಮಾಜವಾದವನ್ನು ಜಾರಿಗೆ ತರುವುದು ಚುನಾವಣೆಯ ಮುಖೇನ ಆಗಿದೆ. ಇವತ್ತು ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮುಂದೆ ಈ ಡೊಂಬರಾಟ ನಿಲ್ಲಿಸಿ ಇದು ಸಾಕು. ಇದು ಬಡಜನರನ್ನು ವಂಚನೆ ಮಾಡತಕ್ಕ ಕೆಲಸ, ಮೋಸ ಮಾಡತಕ್ಕ ಕೆಲಸ. ಸಮಾಜವಾದದ ಹೆಸರಿನಲ್ಲಿ ಇನ್ನು ಮುಂದೆ ಈ ರೀತಿಯಾಗಿ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಇದನ್ನು ಅವರು ಎಷ್ಟು ಜಾಗ್ರತೆ ಅರಿತುಕೊಂಡರೆ ಅಷ್ಟು ಜಾಗ್ರತೆ ದೇಶಕ್ಕೆ ಒಳಿತು ಎಂದು ಮಾತ್ರ ನಾನು ಹೇಳುತ್ತೇನೆ. ಬಡವರ ಬಗ್ಗೆ ಅನುಕಂಪವನ್ನು ತೋರಿಸುತ್ತೇವೆಂದು ಹೇಳುವವರು ಸಮಾಜದಲ್ಲಿರತಕ್ಕ ದುರ್ಬಲವರ್ಗದವರ ಕಷ್ಟಗಳನ್ನು ಮೊದಲು ಅರಿತುಕೊಳ್ಳಬೇಕು. ಏಕೆಂದರೆ ಇದು ಯಾರೊಬ್ಬರಿಗೂ ಹೊಸಲಿಲ್ಲ. ಒಂದುವೇಳೆ ಪ್ರಧಾನಿಯವರು ಆ ರೀತಿಯಾಗಿ ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ನಾವೂ ಕೂಡ ಬಡತನದ ಕಹಿ ಸಿಹಿ ಎರಡನ್ನೂ

ಊಟಮಾಡಿ ಬಂದಿದ್ದೇವೆ. ಸಮಾಜವಾದ ಏನೆಂಬುದು ನಮಗೂ ಚೆನ್ನಾಗಿ ಮನವರಿಕೆಯಾಗಿದೆ. ಆದರೆ ಹಿಂದೆ ಇದ್ದಂಥ ಪ್ರಬಲವಾದ ಕೋಮುಗಳು ಈ 25 ವರ್ಷಗಳಲ್ಲಿ ಎಲ್ಲ ಲಾಭವನ್ನು ಬಡವರ ಹೊಟ್ಟೆ ಹೊಡೆದು ಪಡೆದಿದ್ದಾರೆ ನಾನು ತಿಳಿದಿರುವ ಹಾಗೆ ಗುಜರಾತಿನಲ್ಲಿ ಯಾವ ಲಿಂಗಾಯಿತರೂ ಇಲ್ಲ, ಒಕ್ಕಲಿಗರೂ ಇಲ್ಲ. ಉತ್ತರ ಪ್ರದೇಶದಲ್ಲಿಯೂ ಯಾವ ಒಕ್ಕಲಿಗರೂ ಲಿಂಗಾಯಿತರೂ ಇಲ್ಲ. ಅಲ್ಲಿ ಇಂದಿರಾ ಗಾಂಧಿಯವರಂತಹ ಬ್ರಾಹ್ಮಣರೇ ಮುಖ್ಯ ಮಂತ್ರಿಗಳಾಗಿದ್ದರು. ಅಲ್ಲಿ ಈಗಾಗಲೇ ಜಾತಿಯ ಅವುಟ ಇನ್ನು ಮುಂದೆ ಏನೂ ನಡೆಯಲಿಕ್ಕೆ ಸಾಧ್ಯವಿಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಇನ್ನುಮುಂದೆ ಈ ರಾಷ್ಟ್ರದಲ್ಲಿ ಯಾರೇ ಆಗಲೀ ಜಾತೀಯ ಹೆಸರನ್ನು ಪ್ರಯೋಗವಮಾಡುವುದನ್ನು ಕೈಬಿಡಬೇಕು. ಇದಕ್ಕೆ ಜನ ಇನ್ನುಮುಂದೆ ವಂಚಿತ ಆಗಲಾರರು. ಮಾನ್ಯ ಮುಖ್ಯಮಂತ್ರಿಗಳು ಹೋಗಿ ಮುಸಲ್ಮಾನರ ಸಂಘದವರನ್ನು ಭೇಟಿ ಮಾಡಿದರು. ರಾಷ್ಟ್ರದ ಮೂರು ಕೋಟಿ ಜನತೆಯ ಸಂಕಷ್ಟಗಳನ್ನು ಅರಿತು ನಿವಾರಣೆ ಮಾಡುವ ಕಾರ್ಯವನ್ನು ಮಾಡಬೇಕೇ ಪರಂತು ಕೇವಲ ಚುನಾವಣೆಯ ಗೆಲುವಿಕೆಗೆ ಮತ್ತು ಅಧಿಕಾರ ದಾಹಕ್ಕೋಸ್ಕರ ವಾಗಿ ಸಮಾಜದಲ್ಲಿ ಬೇರೆಬೇರೆ ವರ್ಗಗಳನ್ನು ನಿರ್ಮಾಣ ಮಾಡುವುದು ನಿಜ ವಾಗಿ ಸರಿಯಲ್ಲ. ಇದು ಬಹಳ ಕಾಲ ನಡೆಯುವುದಕ್ಕಾಗುವುದಿಲ್ಲವೆಂಬುದನ್ನು ಈಗಾಗಲೇ ಜನರು ತೋರಿಸಿಕೊಟ್ಟಿದ್ದಾರೆ. ಸಾಮಾಜಿಕ ನ್ಯಾಯವನ್ನು ಎಷ್ಟರ ಮಟ್ಟಿಗೆ ಇವರು ಆಚರಣೆಗೆ ತಂದಿದ್ದಾರೆಂಬುದನ್ನು ಹೇಳಬೇಕು. ಈ ಮೂರು ವರ್ಷಗಳಲ್ಲಿ ನಿಮ್ಮ ಪ್ರಗತಿ ಸಾಧನೆಯಲ್ಲಿ ಎಷ್ಟು ಜನ ಬಂಡವಾಳಗಾರರ ಪ್ರಾಬಲ್ಯ ವನ್ನು ಕುಗ್ಗಿಸಿದ್ದಾರೆ. ಬಿರ್ಲಾ ಅವರಂತಹ ಎಷ್ಟು ಜನರ ಆಸ್ತಿಯನ್ನು ತೆಗೆದು ಕೊಂಡು ಮಾನ್ಯ ಶ್ರೀ ಪ್ರಭಾಕರ್ ಅವರು ಪ್ರತಿನಿಧಿಸಿರತಕ್ಕ ಜನರಿಗೆ ಹಂಚಿ ದ್ದಾರೆಂಬ ಪ್ರಶ್ನೆಯನ್ನು ಮಾನ್ಯ ಶ್ರಿ ಕೃಷ್ಣ ಅವರು ಪ್ರಧಾನಮಂತ್ರಿಗಳನ್ನು ಕೇಳಬೇಕು. ಈಗೆ ದೊಡ್ಡದೊಡ್ಡ ಬಂಡವಾಳಗಾರರಿಗೆ ನಡುಕ ಬರುವ ರೀತಿ ಯಲ್ಲಿ ತೆರಿಗೆಗಳನ್ನು ವಿಧಿಸಿದ್ದಿರಿ. ಅವರೆಲ್ಲರೂ ತತ್ತರಿಸಿ ಹೋಗತಕ್ಕ ರೀತಿ ಯಲ್ಲಿ ಅವರ ಮೇಲೆ ತೆರಿಗೆಗಳನ್ನು ಹೊರಿಸಿ ಅವರಿಂದ ಬರತಕ್ಕ ರಿಸೋರ್ಸನ್ನು ಸಮಾಜದಲ್ಲಿರತಕ್ಕ ಎಷ್ಟು ಜನ ಬಡವರಿಗೆ ತಾವು ವಿನಿಯೋಗಮಾಡುವುದಕ್ಕೆ ಹೊರಟಿದ್ದೀರಿ ಎಂಬುದನ್ನು ನಾನು ಪ್ರಶ್ನೆಮಾಡುತ್ತೇನೆ. ಏಕೆಂದರೆ ಬಡವರ ಸ್ಥಿತಿ ಬಹಳವಾಗಿ ಕೆಟ್ಟುಹೋಗಿದೆ. ಇವರ ಒಂದು ಮೂರು ವರ್ಷಗಳ ಸಾಧನೆ ಯಲ್ಲಿ ಅವರ ಪರಿಸ್ಥಿತಿ ಮೇಲ್ಮಟ್ಟಕ್ಕೆ ಹೋಗದಿದ್ದರೂ ನೂರುಪಟ್ಟು ಅವರ ಪರಿ ಸ್ಥಿತಿ ಕೆಳಮಟ್ಟಕ್ಕೆ ಹೋಗಿದೆ. ಈ ಮಾತನ್ನು ನಾನು ಸ್ವಲ್ಪ ವ್ಯಂಗವಾಗಿ ಹೇಳಬೇಕಾಗಿದೆ. ಇವರ ಸಾಧನೆ ಕೃತಿಯಲ್ಲಿ ಆಗಲಿಲ್ಲ. ಬಡವರ ಪರಿಸ್ಥಿತಿ ಏನೆಂಬುದನ್ನು ನಿಜವಾಗಿ ರಾಷ್ಟ್ರದ ನಾಯಕರು ಅರ್ಥಮಾಡಿಕೊಂಡಿದ್ದಾರೆಯೇ ಎಂಬುದನು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಇನ್ನು ಮಾನ್ಯ ಶ್ರೀ ಡಿ. ದೇವರಾಜ್ ಅರಸ್ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಬಡವರ

(ಶ್ರೀ ಹೆಚ್. ಡಿ. ದೇವೇಗೌಡ)

ರೊಟ್ಟಿ, ಬಡವರ ಸರ್ಕಾರ, ಬಡವರ ಹಿತಚಿಂತನೆ ಎಂಬುದಾಗಿ ಮೇಲ್ಮಟ್ಟದ ಭಾಷಣ ಮಾಡುವುದು ಬೇರೆ.

ಅವರು ಹೇಳಿದ ಮತ್ತೊಂದು ವಿಷಯವನ್ನು ಹೇಳುತ್ತೇನೆ: ಅವರು ಏನು ಹೇಳಿದ್ದಾರೆಂದರೆ 'ನಾನು ಪ್ರತಿ ತಿಂಗಳೂ ಒಂದು ವಾರವಾದರೂ ಹಳ್ಳೀ ಜನರು ಸಾಮಾನ್ಯವಾಗಿ ಎಲ್ಲಿ ಹೆಚ್ಚಿಗೆ ವಾಸಮಾಡುತ್ತಾರೋ ಅವರ ಮಧ್ಯದಲ್ಲಿ ವಾಸಮಾಡಿ ಆವರ ಕಷ್ಟಸುಖಗಳೇನೆಂಬುದನ್ನು ತಿಳಿದುಕೊಂಡು ಅದನ್ನು ಬಿಡಿಸು ವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.' ಎಂಬುದಾಗಿ ನಮ್ಮ ಮುಖ್ಯ ಮಂತ್ರಿ ಗಳು ಹಿಂದೆ ಹೇಳಿದ್ದಾರೆ ನಾನು ಇದಾದ ನಂತರ ಆ ಶ್ರೀ ಕೃಷ್ಣರವರ ಸೈಕಲ್ ಸವಾರಿ ವಿಚಾರಕ್ಕೆ ಬರುತ್ತೇನೆ........

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರಿಗೆ ಆ ಸೈಕಲ್ಲಿನಮೇಲೆ ಏಕೆ ಇಷ್ಟು ಹಾಸ್ಯ ?

ಶ್ರೀ ಹೆಚ್. ಡಿ. ದೇವೇಗೌಡ : ಇರಲಿ ನಿಮ್ಮ ವಿಚಾರಕ್ಕೆ ನಾನು ಆಮೇಲೆ ಬರುತ್ತೇನೆ. ಹಿಂದೆ ಅಧಿಕಾರದಲ್ಲಿದ್ದ ಜನರು ಏನು ತಪ್ಪು ಮಾಡಿ ದ್ದಾರೆ ಅದನ್ನು ಬಹಿರಂಗಪಡಿಸಲು ಅವರನ್ನು ವಿಚಾರಣೆಗೆ ಒಳಪಡಿಸುವುದಾಗಿ ಹೇಳುತ್ತಿದ್ದ ಅಧಿಕಾರದ ಗದ್ದುಗೆಯೇರಿದ ಈ ಜನರು ಆ ದಿಶೆಯಲ್ಲಿ ಎಷ್ಟು ದೂರ ಹೋಗಿದ್ದಾರೆಂದು ಕೇಳುತ್ತೇನೆ ? ನಾನು ಆ ಕಾಂಗ್ರೆಸ್ ಈ ಕಾಂಗ್ರೆಸ್ ಎಂಬ ತಾರತಮ್ಯಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಕಳೆದ 25 ವರ್ಷಗಳಿಂದ ಕಾಂಗ್ರೆಸ್ ಆಡಳಿತದಲ್ಲಿದ್ದರೂ ರಾಜ್ಯದಲ್ಲಿರತಕ್ಕ ಅಥವಾ ಸಮಾಜದಲ್ಲಿರತಕ್ಕ ಬಡವನಿಗೇನು ಉಪಕಾರವಾಗಿದೆ ಎಂದು ಕೇಳುತ್ತೇನೆ ? ಅವನ ಉದ್ಧಾರ ವೇನಾಗಿದೆ ? ಇವರು ಹೇಳುವುದಕ್ಕೂ ಮತ್ತು ಕಾರ್ಯತಃ ನಡೆಸುವುದಕ್ಕೂ ಏನು ಅಂತರವಿದೆ ಎಂಬುದನ್ನು ಇವರ್‍ಯಾರಾದರೂ ಅರ್ಥಮಾಡಿಕೊಂಡಿದ್ದಾರೆಯೆ ? ಎಲ್ಲೋ ಗೋಮಾಳದ ಜಮೀನು ಬಿದ್ದಿತ್ತು. ಅದನ್ನು ಲಕ್ಷ ಜನರಿಗೆ ಸೈಟುಗಳ ಬಗ್ಗೆ ವಿಲೇವಾರಿ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇವರು ಎಲ್ಲಿ ಆ ನಿವೇಶನಗಳನ್ನು ಕೊಟ್ಟಿದ್ದಾರೋ ಅಲ್ಲಿ ಅಲ್ಲಿ ಹೋಗಿ ಕಾಲೂರಿ ನಿಲ್ಲು ವುದಕ್ಕೂ ಕೂಡ ಸಾಧ್ಯವಿಲ್ಲ. ಇನ್ನು ಅಲ್ಲಿ ಜನರು ವಾಸಮಾಡುವುದೆಲ್ಲಿ ಬಂತು? ಇದಕ್ಕಾಗಿ ಜನರಿಂದ ಬಾಂಗ್ಲಾ ಹೆಸರಿನಲ್ಲಿ ತೆರುತ್ತಿದ್ದ ತೆರಿಗೆಯನ್ನು ಇವರು ತೆಗೆದುಕೊಂಡರು. ಆದರೆ ಜನರಿಗಾದ ಉಪಕಾರವಾದರೂ ಏನು ? ಕಳೆದ ಬಡ್ಜೆಟ್ ಅಧಿವೇಶನದಲ್ಲಿ ರಾಜ್ಯಪಾಲರು ಇಲ್ಲಿ ಬಡವರಿಗಾಗಿ 20 ಸಾವಿರ ಮನೆಗಳನ್ನು ಕಟ್ಟಿಸುವುದಾಗಿ ತಮ್ಮ ಭಾಷಣದಲ್ಲಿ ಸೂಚಿಸಿದ್ದರು. ಆದರೆ ಆ ಸಂಖ್ಯೆ ಈ ವರ್ಷದ ಅವರ ಭಾಷಣದಲ್ಲಿ 15 ಸಾವಿರಕ್ಕಿಳಿದಿದೆ.

ಇದು ಈ ಸರ್ಕಾರ ಮೂರು ವರ್ಷಗಳಲ್ಲಿ ನಡೆಸಿರತಕ್ಕ ಸಾಧನೆ. ಇನ್ನು ಈ ಅವಧಿಯಲ್ಲಿ ಈ ಆಡಳಿತ ಕಾಂಗ್ರೆಸ್ ದೊರಕಿಸಿಕೊಟ್ಟಿರತಕ್ಕ ಸಾಮಾಜಿಕ ನ್ಯಾಯ, ಮತ್ತು ಅದರ ಸಾಧನೆಗಾಗಿ ಇವರು ಶ್ರಮಿಸಿದ್ದು ಇದೆಲ್ಲವನ್ನೂ ನಮ್ಮ ಪ್ರಧಾನಿಯವರು ತಮ್ಮ ಕಾಲಕೋಶದಲ್ಲಿ ಸೇರಿಸಿ ಆ ದೆಹಲಿಯ ಕೆಂಪುಕೋಟೆಯ ಮುಂದೆ ಭೂಮಿಯಲ್ಲಿಟ್ಟು ಹೂತಿದ್ದಾರೆಂದು ಕಾಣುತ್ತಿದೆ. ಇದಾದ ನಂತರ ನಮ್ಮ ಪ್ರಧಾನಿಯವರು ಇನ್ನೊಂದು ಮಾತನ್ನು ಹೇಳುತ್ತಿದ್ದಾರೆ—ಅದೇನೆಂದರೆ 'ಈ ದೇಶದಲ್ಲಿ ನಾನು ಜನರಿಗೆ ಕೊಟ್ಟಿದ್ದ ಎಲ್ಲಾ ಭರವಸೆಗಳನ್ನೂ ಈಗಾಗಲೇ ಈಡೇರಿಸಿದ್ದೇನೆ'' ಎಂದು. ಅವರು ಹೀಗೆ ಘೋಷಣೆ ಮಾಡಿರತಕ್ಕದ್ದು ,,ಸುಳ್ಳು'' ಎಂದರೆ ಅದು ಅನ್‌ಪಾರ್ಲಿಯಮೆಂಟರಿಯಾಗುತ್ತದೆ; ಅದಕ್ಕಾಗಿ ಅದನ್ನು ಸತ್ಯಕ್ಕೆ ಬಹಳ ದೂರವಾದ ಮಾತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಯಾವ ಪಕ್ಷದವರೇ ಆಗಲಿ ಅಂಥ ಒಂದು ಪವಿತ್ರವಾದ ಅಧಿಕಾರ ಸ್ಥಾನದಲ್ಲಿರುವಾಗ ಇಂಥ ಮಾತುಗಳನ್ನು ಹೇಳುವುದು ಅವರಿಗೆ ಭೂಷಣವಾದುದಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೆ ಅವರು ಹೋದ ಕಡೆಗಳಲ್ಲೆಲ್ಲಾ ತನ್ನ ಪಕ್ಷವೊಂದು ಮಾತ್ರ ರಾಜಕೀಯದಲ್ಲಿ ನೈತಿಕ ಮಟ್ಟವನ್ನು ಉಳಿಸಿಕೊಂಡು ಬಂದಿದೆ ಎಂದು ಹೇಳಿದ್ದಾರೆ. ಇದರ ಅರ್ಥ ಇನ್ನು ದೇಶದಲ್ಲಿರತಕ್ಕ ಯಾವ ರಾಜಕೀಯ ಪಕ್ಷಗಳೂ ಈ ರಾಜಕೀಯದಲ್ಲಿ ತಮ್ಮ ನೈತಿಕ ಮಟ್ಟವನ್ನು ಉಳಿಸಿಕೊಂಡು ಬಂದಿಲ್ಲವೆಂಬುದು ಅವರ ಅಭಿಪ್ರಾಯ. ಅದೇ ಪ್ರಧಾನಿಯವರು 1971ರಲ್ಲಿ ತಮಿಳು ನಾಡಿನಲ್ಲಿ ನಡೆದ ಚುನಾವಣೆಗಳಲ್ಲಿ ಕಾಮರಾಜರನ್ನು ಸೋಲಿಸುವುದಕ್ಕಾಗಿ ಡಿ. ಎಂ. ಕೆ. ಪಕ್ಷದೊಡನೆ ಒಪ್ಪಂದ ಮಾಡಿಕೊಂಡರು ; ಅದಕ್ಕಾಗಿ ತಮಿಳರಿಗೆ ಅನೇಕ ಉಡುಗೊರೆಗಳನ್ನು ಕೊಟ್ಟರು. ಆದರೆ ಈ ದಿವಸ ಮತ್ತೆ ಅದೇ ಕಾಮರಾಜರೊಂದಿಗೆ ಚುನಾವಣೆಗಳಿಗೆ ಅವರನ್ನು ಆಲಿಂಗನ ಮಾಡಿಕೊಂಡಿದ್ದಾರೆ. ಇದು ಅವರ ರಾಜಕೀಯ ನೈತಿಕ ಮತ್ತು ನೈಪುಣ್ಯತೆ. ಯಾವ ಡಿ. ಎಂ. ಕೆ. ಪಕ್ಷಕ್ಕೆ ಹಿಂದೆ ಒತ್ತಾಸೆಗಳನ್ನು ಕೊಟ್ಟಿದ್ದರೋ ಅದನ್ನು ಕಿತ್ತು ಹಾಕುವುದಕ್ಕೆ ಇಂದು ಕಾಮರಾಜರ ಸ್ನೇಹ. ಇದು ಎಂಥಾ ನೈತಿಕ ಮಟ್ಟ ?

ಶ್ರೀ ಬಿ. ವಿ. ಕಕ್ಕಿಲಾಯ.—ಹಾಗೆ ಆಲಿಂಗನ ಮಾಡಿಕೊಂಡರೂ ಅದನ್ನು ಕಿತ್ತು ಹಾಕುವುದಕ್ಕೆ ಅವರಿಂದ ಸಾಧ್ಯವಾಗಲಿಲ್ಲ.

ಶ್ರೀ ಹೆಚ್. ಡಿ ದೇವೇಗೌಡ —ಕೇರಳದಲ್ಲಿ ಮುಸ್ಲಿಂ ಲೀಗಿನೊಂದಿಗೆ ಸ್ನೇಹ, ಆದರೆ ಅದೇ ಉತ್ತರಪ್ರದೇಶದಲ್ಲಿರತಕ್ಕ ಮುಸ್ಲಿಂ ಲೀಗಿನ ಬಗ್ಗೆ ವಿರಸ. ಪ್ರಧಾನಿಯವರ ವರ್ತನೆ ಅವರ ಪಕ್ಷದ ವರ್ತನೆ ಇಷ್ಟು ವಿಚಿತ್ರವಾಗಿದ್ದರೂ ಅವರು ಬೇರೆ ರಾಜಕೀಯ ಪಾರ್ಟಿಗಳಿಗೆ ನೈತಿಕ ಬೆಂಬಲವಿಲ್ಲ ಎಂದು ಹೇಳುವುದು ಬಹಳ ವಿಚಿತ್ರವಾಗಿದೆ. ಒಂದು ಕಡೆ ಪ್ರಧಾನಿಯವರು ಸಿ. ಪಿ. ಐ.

(ಶ್ರೀ ಹೆಚ್ ಡಿ. ದೇವೇಗೌಡ)

ಜೊತೆ ಸ್ನೇಹ ಮಾಡಿಕೊಂಡಿದ್ದರೆ ಇನ್ನೊಂದು ಕಡೆ ಆ ಪಕ್ಷದೊಂದಿಗೆ ಸೆಣಸಾಟ. ಇನ್ನು ಆ ಮಹಾರಾಷ್ಟ್ರದಲ್ಲಿ ಒಂದು ಕೇವಲ ಪಾರ್ಲಿಯಮೆಂಟಿನ ಸೀಟಿಗಾಗಿ ಶಿವಸೇನೆಯೊಂದಿಗೆ ಸ್ನೇಹ. ಇದು ಅವರ ಪಾರ್ಟಿಯ ನೈತಿಕ ಮಟ್ಟ. ಅವರು ಆಗಾಗ್ಗೆ ಇನ್ನೂ ದೊಡ್ಡ ದೊಡ್ಡ ಶಬ್ದಗಳನ್ನು ಬಳಸಿ ಹೇಳಿಕೆಗಳನ್ನು ಕೊಡುವುದು ಅವರ ಸಾಮಾನ್ಯ ತಕ್ಷಣ. ದೇಶದಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿ ಕೊಡುತ್ತಿದ್ದೇವೆಂಬುದನ್ನು ಜನರು ತಿಳಿದುಕೊಳ್ಳಲೆಂದು ಪ್ರಧಾನಿಯವರು 'ಹಂಟಿಂಗ್ ದಿ ಹೋರ್ಡರ್ಸ್' ಎಂದು ಹೇಳಿದ್ದಾರೆ. ಇವು ಎಂಥಾ ಶಬ್ದಗಳು ? Prime Minister asks the Opposition not to weaken the Government.

ಅಷ್ಟೇ ಅಲ್ಲದೆ ಅವರು ಮೊನ್ನೆ ಒಂದು ಕಡೆ ಈ ವಿರೋಧ ಪಕ್ಷಗಳಿಗೆ ಬುಡವೇ ಇಲ್ಲ ಎಂಬುದಾಗಿ ಹೇಳಿಕೆ ಕೊಟ್ಟಿದ್ದಾರೆ. ಹಿಂದೆ ಆ ದಿವಂಗತ ಗೋಪಾಲ ಗೌಡರು ಹೇಳುತ್ತಿದ್ದರು ಈ ಸಮಾಜವಾದದ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ದೇಶದಲ್ಲಿರತಕ್ಕ ವಿರೋಧಪಕ್ಷಗಳು ಸೆಂಟರನ್ನು ವೀಕ್ ಮಾಡಿವೆ—ಎಂದು ಅವರು ಟೀಕೆ ಮಾಡುತ್ತಿದ್ದರು. ಆದರೆ ಹಾಗೆ ನಿಲ್ಲುವುದಕ್ಕೆ ಶಕ್ತಿಕೂಡ ಇಲ್ಲದ ಈ ವಿರೋಧಪಕ್ಷಗಳು, ಬುಡವೇ ಇಲ್ಲದಂಥ ಪಕ್ಷಗಳು ಸೆಂಟರನ್ನು ವೀಕ್ ಮಾಡುತ್ತವೆಂದರೆ ಅದು "ಕುಣಿಯಲಾರದ ಹೆಂಗಸು ನೆಲ ಡೊಂಕಾಗಿದೆ" ಎಂದ ಹಾಗೆ. ಪತ್ರಿಕೆಗಳಲ್ಲಿ ಕಾಳಸಂತೆಕೋರರಿಗೆ ಸಮಾಜ ಬಹಿಷ್ಕಾರ ಹಾಕಬೇಕು—ಎಂದು ಹೇಳಿಕೊಡುವುದು ; ಕಾರ್ಯದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಮಾಡಿರುವುದರಿಂದ, ಹೀಗೆ ಸರ್ಕಾರ ಎಷ್ಟು ದಿನಗಳ ಕಾಲ ಜನರನ್ನು ವಂಚಿಸುವುದಕ್ಕೆ ಸಾಧ್ಯ ಎಂದು ಕೇಳುತ್ತೇನೆ.

ಇನ್ನೊಂದು ವಿಷಯವನ್ನು ಹೇಳಿದ್ದಾರೆ. 'ದೇಶದಲ್ಲಿ ನಾನಾ ಚಳುವಳಿಗಳು ಮತ್ತು ಹಿಂಸಾಕೃತ್ಯಗಳು ಬಡವರಿಂದ ಆರಂಭವಾಗಿಲ್ಲ, ಹೆಚ್ಚು ಅನುಕೂಲ ಪರಿಸ್ಥಿತಿ ಇರುವ ಶ್ರೀಮಂತರಿಂದಲೇ ಈ ಚಳುವಳಿಗಳ ಆರಂಭ'' ಎಂದು ಹೇಳಿದ್ದಾರೆ. ಪಾಪ, ಶ್ರೀಮಂತರಿಗೆ ಹಣ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ ; ಏನಾದರೂ ಮಾಡಿ ಇರುವ ಸವಲತ್ತುಗಳನ್ನು ಎಲ್ಲವನ್ನೂ ಕೊಟ್ಟು ಬಿಡೋಣ ಎಂದು ಚಳುವಳಿ ಮಾಡಿದ್ದಾರೆ. ಶ್ರೀಮಂತರು ಬಹಳ ದೊಡ್ಡ ತ್ಯಾಗಿಗಳು, ಈ ದೇಶದಲ್ಲಿ ಅವರು ಚಳುವಳಿ ಮಾಡಿಸಿ ತಮ್ಮಲ್ಲಿರುವುದನ್ನೆಲ್ಲ ಕೊಡೋಣ ಎಂದು ಹಿಂಸಾಕೃತ್ಯಕ್ಕೆ ಶ್ರೀಮಂತರು ಈ ಹೊತ್ತು ಉತ್ತೇಜನ ಕೊಡುತ್ತಿದ್ದಾರೆ.

ಚಳುವಳಿಗಳಿಂದ ಬೆಲೆ ಏರಿಕೆಯನ್ನು ತಡೆಗಟ್ಟುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಚಳುವಳಿಗಳು ನಡೆಯದೆ ಇದ್ದರೆ ಬೆಲೆಗಳು ಸ್ಥಿಮಿತಕ್ಕ ಬರುತ್ತವೆ

ಎಂದೂ ಹೇಳಿದ್ದಾರೆ. ಜನಕ್ಕೆ ಹುಚ್ಚು ಹಿಡಿದು ಚಳುವಳಿಗಳನ್ನು ಮಾಡುತ್ತಿದ್ದಾರೆ, ಅವರಿಗೆ ಬೇರೆ ಕೆಲಸವಿಲ್ಲ, ಜನಗಳಿಗೆ ಬುದ್ಧಿ ಭ್ರಮಣೆಯಾಗಿದೆ. ಇದು ಪ್ರಧಾನ ಮಂತ್ರಿಗಳು ಜನರನ್ನು ಮೋಸಗೊಳಿಸುವುದಕ್ಕೆ ಮಾಡುವಂತಹ ವಾದ.

ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಚನ್ನಬಸಪ್ಪನವರು ಸಂಕೇಶ್ವರದಲ್ಲಿ ಒಂದು ಭಾಷಣ ಮಾಡಿದರು.

ಶ್ರೀ ಹೆಚ್. ಎಂ. ಚನ್ನಬಸಪ್ಪ.- ಮಾಡಬಾರದೇನು ?

ಶ್ರೀ ಹೆಚ್. ಡಿ. ದೇವೇಗೌಡ. ಪ್ರಜಾತಂತ್ರದಲ್ಲಿ ಎಲ್ಲರೂ ಭಾಷಣ ಮಾಡಬಹುದು. ಪ್ರಜಾತಂತ್ರವ ಉಳಿವಿಗೋಸ್ಕರ ನಾವೂ ನೀವೂ ಎಲ್ಲರೂ ಹೋರಾಟ ಮಾಡಬಹುದು. ಆದರೆ ಮಾನ್ಯ ಚನ್ನಬಸಪ್ಪನವರು ಸಂಕೇಶ್ವರ ಕ್ಷೇತ್ರದಲ್ಲಿ ಏನು ಹೇಳಿದರು ಅಂದರೆ ಈ ದೇಶದಲ್ಲಿ ಇಷ್ಟು ಜನಸಂಖ್ಯೆ ಬೆಳೆಯುತ್ತಿದ್ದರೆ ಬಡತನವನ್ನು ನಿವಾರಣೆ ಮಾಡುವುದಕ್ಕೆ ಹೇಗೆ ಸಾಧ್ಯ? ಶ್ರೀಮತಿ ಇಂದಿರಾ ಗಾಂಧಿಯವರೇನಾದರೂ ಮಕ್ಕಳನ್ನು ಹಡೆಯಿರಿ ಎಂದು ಹೇಳಿದ್ದರೋ ಎಂದು ಕೇಳಿದ್ದಾರೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಮಾನ್ಯ ದೇವೇಗೌಡರು ನನ್ನ ಭಾಷಣವನ್ನು ಸ್ವತಃ ಕೇಳಿದವರಲ್ಲ. ಶ್ರೀ ಮಾನ್ಯ ಹೆಗ್ಗಡೆಯವರು ಕೇಳಿದವರಲ್ಲ. ಯಾರೋ ಮೂರನೆಯವರು ಇವರಿಗೆ ಹೇಳಿದುದನು ಕೇಳಿ ಇಬ್ಬರೂ ಕುಣಿಯುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.-ಈ ಹೊತ್ತು ಜನಸಂಖ್ಯೆ ಸಾಮಾಜಿಕ ಅಸ್ತವ್ಯಸ್ತಕ್ಕೆ ಕಾರಣವಲ್ಲ ಎನ್ನುವುದನ್ನು ಕೂಡ ಅರಿಯಬೇಕು. ಇದಕ್ಕೆ ಒಂದು ಉದಾಹರಣೆ ಕೊಟ್ಟರೆ ಸಾಕಾಗುತ್ತದೆ. ಈ ಹೊತ್ತು ವರ್ಲ್ಡ್ ಬ್ಯಾಂಕಿನವರು ನಡೆಸಿರತಕ್ಕ ಸಮೀಕ್ಷೆಯಿಂದ ಇದು ಗೊತ್ತಾಗುತ್ತದೆ. 1960ರಿಂದ 1971ರ ವರೆಗೆ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ಭಾರತದಲ್ಲಿ 2.3 ಪರ್ಸೆಂಟ್, ಪಾಕಿಸ್ಥಾನದಲ್ಲಿ 2.9 ಪರ್ಸೆಂಟ್ ಮತ್ತು ಚೈನಾ ದೇಶದಲ್ಲಿ 1.8 ಪರ್ಸೆಂಟ್. ಅದೇ ಅವಧಿಯಲ್ಲಿ ತಲಾ ಆದಾಯವನ್ನು ತೆಗೆದುಕೊಂಡರೆ ಭಾರತ ದೇಶದಲ್ಲ 1.3 ಪರ್ಸೆಂಟ್, ಪಾಕಿಸ್ಥಾನದಲ್ಲಿ 3.7 ಪರ್ಸೆಂಟ್ ಮತ್ತು ಚೈನಾ ದೇಶದಲ್ಲಿ 7.1 ಪರ್ಸೆಂಟ್ ಈ ರೀತಿಯಾಗಿ ಏರಿದೆ. ನಮ್ಮ ನೀತಿ, ನಮ್ಮ ಧೋರಣೆಗಳು ಕೇವಲ ಜನತೆಯನ್ನು ಚುನಾವಣೆಯ ಸಂದರ್ಭದಲ್ಲಿ ಮೋಸಗೊಳಿಸತಕ್ಕ, ಕಿವಿಗೆ ಇಂಪಾಗಿರತಕ್ಕ ಮಾತುಗಳನ್ನು ಮಾತ್ರ ಆಡುವುದಾಗಿರಬಾರದು.

(ಶ್ರೀ ಹೆಚ್. ಡಿ ದೇವೇಗೌಡ)

It must be a production oriented programme not a distribution oriented programme.

ಇನ್ನಾದರೂ ಇವರು ಎಚ್ಚರಿಕೆಯನ್ನು ವಹಿಸಿ ಈ ಹೊತ್ತು ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡದೆ ಹೋದರೆ, ನಾನು ಹೇಳುತ್ತೇನೆ, ಜನತೆಯಲ್ಲಿ ವಿಶ್ವಾಸ ಹೋಗತಕ್ಕ ಕಾಲ ಬಂದಿದೆ, ಪ್ರಜಾಪ್ರಭುತ್ವದ ಅಳಿವು ಉಳಿವಿನ ಪ್ರಶ್ನೆ ಬಂದಿದೆ. ಈ ಹೊತ್ತು ಇರತಕ್ಕ ಆರ್ಥಿಕ ಸಂಕಷ್ಟಕ್ಕೆ ಬೆಲೆ ಏರಿಕೆಗೆ ಜನಸಂಖ್ಯೆಯೇ ಮೂಲ ಕಾರಣವೆಂದರೆ ಅದು ಹುರುಳಿಲ್ಲದಂಥ ಮಾತಾಗುತ್ತದೆ ಎಂದು ಹೇಳುತ್ತೇನೆ. There are several contributing factors. ಇದನ್ನು ಅರ್ಥ ಮಾಡಿಕೊಳ್ಳಬೇಕು. ಮಕ್ಕಳನ್ನು ಹುಟ್ಟಿಸಿದಿರಿ, ಜನಸಂಖ್ಯೆ ಜಾಸ್ತಿಯಾಯಿತು ಎಂದು ಹೇಳುವುದರಿಂದ ತಮ್ಮ ಹೊಣೆಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

Madam Speaker in the Chair

ನಾನು ನನ್ನ ಭಾಷಣವನ್ನು ಮುಗಿಸುವುದಕ್ಕಿಂತ ಮುಂಚೆ ಜನತಾ ಹೌಸಿಂಗ್ ಸ್ಕೀಂ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸರ್ಕಾರದವರು ಹಣ ಕೊಡುತ್ತಾರೆಂದು ಮನೆಗಳನ್ನು ಕಟ್ಟಲು ಸಾಲಸೋಲ ಮಾಡಿ ಅಸ್ತಿಭಾರವನ್ನು ಹಾಕಿದ್ದಾರೆ ಮತ್ತು ವಿವಿಧ ಹಂತಗಳಲ್ಲಿ ಮನೆ ಕಟ್ಟುವ ಕೆಲಸ ನಡೆಯುತ್ತಿದೆ. ಅದರೆ ಸರ್ಕಾರದವರು ಸಾಲ ಕೊಡುವುದಿಲ್ಲವೆಂದು ಹೇಳಿ ವಾಪಸು ತೆಗೆದುಕೊಂಡಿದ್ದಾರೆ. ಬಾಂಗ್ಲಾ ಲೆವಿಯನ್ನು ಮುಂದುವರಿಸಿದ್ದರಿಂದ ಸುಮಾರು ಒಂದು ಕೋಟಿ ರೂಪಾಯಿಗಳನ್ನು ನಾವು ತುಂಬಿ ಕೊಟ್ಟಿದ್ದೇವೆ. ಇವರು ತೋರಿಸಿದ ಅಬ್ಬರದ ಪ್ರಚಾರ ಕೃತಿಗೆ ಇಳಿಯಬೇಕು. ಮೂರು ಮತ್ತು ನಾಲ್ಕನೇ ದರ್ಜೆ ನೌಕರರಿಗೆ ಮನೆಗಳನ್ನು ಕಟ್ಟಲು ಏನು ಅಡ್ವಾನ್ಸ್ ಕೊಡುತ್ತಿದ್ದರು ಅದನ್ನು ಸರ್ಕಾರ ಬಡ್ಡಿ ಸಮೇತ ವಾಪಸು ಪಡೆಯುತ್ತದೆ, ಪುಕ್ಕಟೆಯಾಗಿ ಕೊಡುವುದಿಲ್ಲ. ಎರಡು ಸಾವಿರ ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಮೂರು ಮತ್ತು ನಾಲ್ಕನೇ ದರ್ಜೆ ಸರ್ಕಾರಿ ನೌಕರರಿಗೆ ಕೊಡುತ್ತಿರುವ ಅಡ್ವಾನ್ಸನ್ನು ಈ ಸಮಾಜವಾದ ಸರ್ಕಾರ ನಿಲ್ಲಿಸಿದೆ. ಆ ವಿಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಜನತಾ ಗೃಹ ನಿರ್ಮಾಣ ಯೋಜನೆ ಏನಿದೆ ಅದಕ್ಕೆ ಮೋಹನಲಾಲ ಸುಖಾಡಿಯಾ ಅವರಿಂದ ಶಂಕುಸ್ಥಾಪನೆಯನ್ನು ಮಾಡಿಸಿದರು. ಆದರೆ ಇದು ಯಾವ ರೀತಿ ನಡೆಯುತ್ತಿದೆ ಎಂದರೆ ಮಾನ್ಯ ಚನ್ನಬಸಪ್ಪನವರು ಪ್ರತಿ ತಾಲ್ಲೂಕಿನಲ್ಲಿಯೂ 50

ಮೈಲಿ ರಸ್ತೆಯನ್ನು ತೆಗೆದುಕೊಳ್ಳುತ್ತೇವೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದು ಅದರಲ್ಲಿ ಎರಡು ಮೈಲಿ ಕೂಡ ನನ್ನ ಕ್ಷೇತ್ರದಲ್ಲಿ ಆಗಿಲ್ಲ, ಅದೇ ರೀತಿಯಾಗಿದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಪ್ರೋಗ್ರಾಂ ಹಾಕಿದ್ದು ಸರಿಯಿಲ್ಲವೆಂದರೆ ಅದಕ್ಕೆ ನಾನು ಏನು ಹೇಳಲಿ. ಪ್ರೋಗ್ರಾಂ ಪ್ರಕಾರ ನಡೆಯುತ್ತಿತ್ತು. ಆದರೆ ಹಣದ ಕೊರತೆ ಬಂದುದರಿಂದ ನಿಂತಿದೆ. ತಾವೆಲ್ಲ ಜವಾಬ್ದಾರಿಯುತರಾದ ಶಾಸಕರಾಗಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಹಣ ಒದಗಿದ ಕೂಡಲೇ ಕೆಲಸವನ್ನು ಪೂರೈಸುತ್ತದೆ. ಅದರ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಹೋದರೆ ರಚನಾತ್ಮಕವಾದ ಕೆಲಸ ಕಾರ್ಯಗಳನ್ನು ಟೀಕೆ ಮಾಡುವುದಕ್ಕೆ ಹೋದರೆ ಅದು ಟೀಕೆ ಅನ್ನಿಸಿಕೊಳ್ಳುವುದಿಲ್ಲ, ಬರೀ ಒಂದು ವ್ಯಾಖ್ಯಾನ ಅನ್ನಿಸಿಕೊಳ್ಳುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ :—ಮಾನ್ಯ ಚನ್ನಬಸಪ್ಪನವರು ಕೊಡುವ ವ್ಯಾಖ್ಯಾನಕ್ಕೆಲ್ಲ ಸಮರ್ಥ ರೀತಿಯಿಂದ ಉತ್ತರ ಕೊಡುವ ಯೋಗ್ಯತೆ ಮತ್ತು ಶಕ್ತಿ ಎರಡನ್ನೂ ಇಟ್ಟುಕೊಂಡಿದ್ದೇನೆ. ನನಗೆ ಬುದ್ಧಿಭ್ರಮಣೆಯಾಗಿಲ್ಲ. ಅವರು ಹಾಕಿಕೊಂಡ ಕಾರ್ಯಕ್ರಮವನ್ನು ಟೀಕೆ ಮಾಡುತ್ತಿಲ್ಲ. ಏನು ಕಾರ್ಯಕ್ರಮವನ್ನು ಹಾಕಿ ದೇಶದಲ್ಲಿ ಅಪಾರ ಪ್ರಚಾರ ಮಾಡಿದರೋ ಅದನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ದುಡ್ಡು ಒದಗಿದ ಕೂಡಲೇ ಮಾಡುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ :—ಯಾವಾಗ ? ಸರ್ಕಾರದಲ್ಲಿ ಹಣವಿಲ್ಲದೆ ದಿವಾಳಿತನಕ್ಕೆ ಬಂದಿದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ :—72 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಮಾಡಿ ಎಲ್ಲರಿಗೂ ಹಣವನ್ನು ಹಂಚಿರುವುದು ಯಾರಿಗೆ ಗೊತ್ತಿಲ್ಲ ? ಎಲ್ಲರಿಗೂ ಗೊತ್ತಿದೆ.

4-30 P.M.

ಶ್ರೀ ಹೆಚ್. ಡಿ. ದೇವೇಗೌಡ :—ನಿಮಗೆ ಶಾಸನ ಸಭೆ ಪ್ರಾರಂಭವಾದ ಮೊದಲನೆಯ ದಿನದಿಂದ ನೀವು ಯಾವ ರೀತಿಯಾಗಿ ಕೆಲಸ ಮಾಡಿದ್ದೀರಿ, ಇದನ್ನು ಪ್ರದರ್ಶನ ಮಾಡಲು ಕಳೆದ ಎರಡು ವರ್ಷಗಳ ಆಡಳಿತದ ವೈಖರಿಯಲ್ಲಿ ಸಾರ್ವಜನಿಕರ ಟಸ್ಟಿಗಳಾಗಿ ನೀವು ಸರಕಾರದ ಹಣವನ್ನು ಯಾವ ರೀತಿ ಲೂಟಿ ಮಾಡಿದ್ದೀರಿ ಎನ್ನುವ ಎಲ್ಲ ಅಂಕೆ ಅಂಶಗಳನ್ನೂ ಇಲ್ಲಿಟ್ಟು ತಮಗೆ ಹೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಹೇಳಿ

ಶ್ರೀ ಹೆಚ್. ಡಿ. ದೇವೇಗೌಡ: ನಿನ್ನೆ ವಿಧಾನಪರಿಷತ್ತಿನಲ್ಲಿ ಏನು ಹೇಳಿದ್ದೀರಿ ಅದರ ಬಗ್ಗನೂ ಹೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ: ಸಾರ್ವಜನಿಕರ ಹಣವನ್ನು ಲೂಟಿ ಮಾಡಿದವರು ಯಾರು ಎನ್ನುವುದೆಲ್ಲಾ ನಾಳೆ ಇಲ್ಲಿ ಬರುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ: ಬರುತ್ತದೆ. ಅದನ್ನು ಮುಚ್ಚತಕ್ಕ ಮಂತ್ರಿಗಳೂ ಯಾರು ಎನ್ನುವುದು ಎಲ್ಲ ಬರುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ: ನೀವು ಭಾವೀ ಮಂತ್ರಿಗಳಾಗಬಹುದು

ಶ್ರೀ ಹೆಚ್. ಡಿ. ದೇವೇಗೌಡ: ಜನ ವೋಟು ಕೊಟ್ಟು ಕಳುಹಿಸಿ ಆಡಳಿತವನ್ನು ಕೊಟ್ಟರೆ ಅದನ್ನೂ ಒಪ್ಪಬಹುದು.

ಶ್ರೀ ಹೆಚ್. ಎಂ. ಚನ್ನಬಸಪ್ಪ: ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಯಾರು ಮೆಂಬರುಗಳು ಇದ್ದರು ಯಾರು ಮಂತ್ರಿಗಳಿದ್ದರು ಎನ್ನುವುದೆಲ್ಲಾ ವಿವರವಾಗಿ ತಿಳಿಯಲು ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ: ನಾನೇನು ನನ್ನ ಭಾಷಣದಲ್ಲಿ ಶ್ರೀಮಾನ್ ಚನ್ನಬಸಪ್ಪವರ ಹೆಸರನ್ನು ಹೇಳಲಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ ಹಿಂದೆ ಸರಕಾರ ಒಂದು ಕಾರ್ಯಕ್ರಮ ಹಾಕಿಕೊಂಡಿತ್ತು. ಎಲ್ಲ ತಾಲ್ಲೂಕುಗಳಲ್ಲೂ 50 ಮೈಲು ರಸ್ತೆಗಳನ್ನು ಸರಕಾರವೇ ತನ್ನ ವಶಕ್ಕೆ ತೆಗೆದುಕೊಂಡು ಮಾಡುತ್ತದೆ ಎಂದು. ಇದನ್ನು ಇಲ್ಲಿಯವರೆಗೂ ಕಾರ್ಯರೂಪಕ್ಕೆ ತರಲಿಲ್ಲ ಹುತ್ತು ಸರಕಾರ ಹೇಳಿದ ಮಾತು ಕೃತಿಗೆ ಇಳಿಯಲಿಲ್ಲ ಎಂದರೆ ಇದಕ್ಕೇಕೆ ತಾವು ಕೋಪ ಮಾಡಬೇಕು. ನಾನು ಹೇಳುವುದರಲ್ಲಿ ತಪ್ಪೇನಿದೆ? ನಾನು ಮಾನ್ಯ ಸಚಿವರಿಗೆ ಹೇಳುತ್ತಿರುವುದು ನನಗೇನೂ ಬುದ್ಧಿಭ್ರಮಣೆಯಾಗಿ ಹೇಳತಕ್ಕ ಮಾತಲ್ಲ. ಅಂತಹ ಪ್ರೇರಕ ಶಕ್ತಿಯೂ ಇಲ್ಲ. ಇವೆಲ್ಲಾ ಜನತೆಗೆ ಕೊಟ್ಟ ವಾಗ್ದಾನಗಳು ಕೃತಿಗೆ ಇಳಿಯಲಿಲ್ಲ. ಪರಿಸ್ಥಿತಿ ಹೀಗಿದೆ.

ಇನ್ನೊಂದು ದೊಡ್ಡದಾಗಿ ಇವರು ಹೇಳಿದ್ದು ಎಂದರೆ 50 ಸಹಸ್ರ ಗೃಹ ನಿರ್ಮಾಣ ಮಾಡಿ ಬಡವರಿಗೆ ಮನೆಗಳನ್ನು ಕೊಡಬೇಕೆಂದು ಕೊಟ್ಟ ಹಣವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಇದು ಸಮಾಜದಲ್ಲಿರುವ ದುರ್ಬಲ ವರ್ಗದವರಿಗೆ ಮಾಡಿದಂತಹ ಸಹಾಯ. ಯಾರ ಒತ್ತಾಯಕ್ಕೋಸ್ಕರ ಹೀಗೆ ಮಾಡಿದಿರಿ ಎಂದು ಇಲ್ಲಿ

ಕೇಳಬೇಕಾಗಿದೆ. ನಾವು ಹೆಚ್ಚು ತೆರಿಗೆ ಕೊಡಲು ಒಪ್ಪಿ ಹಣ ಕೊಟ್ಟಿದ್ದರೂ ಅದನ್ನು ಸರಿಯಾಗಿ ಉಪಯೋಗ ಮಾಡಲಿಲ್ಲ. ಇವೊತ್ತು ಪರಿಸ್ಥಿತಿ ಏನಾಗಿದೆ ಎಂದರೆ ಹಾಗೂ ಇದನ್ನು ಹೇಳಲು ಹೋದರೆ ನಿಮ್ಮ ಮುಖ ರಂಗೇರುತ್ತದೆ.

ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಂದು ದೇಶದಲ್ಲಿರುವ ಆರ್ಥಿಕ ಸ್ಥಿತಿ ಯಾವ ರೀತಿ ಇದೆ ಎಂದರೆ ರಾಜಕೀಯ ಡೊಂಬರಾಟ ಹಾಗೂ ನಿಮ್ಮ ಪ್ರಚಾರದ ಆಟ ಬಹಳ ಜೋರಾಗಿದೆ. ಮೂರು ಲಕ್ಷಕ್ಕಿಂತ ಹೆಚ್ಚಿಗೆ ಆಸ್ತಿ ನಗರದಲ್ಲಿ ಆಸ್ತಿ ಇರಕೂಡದು ಇದರ ಮಿತಿ ಇರಬೇಕೆಂದು ಎಂ. ಪಿ. ಸಿ. ಸಿ. ಯವರು ಸರ್ವಾನುಮತದಿಂದ ನಿರ್ಣಯ ಮಾಡಿದರು. ಇದೆಲ್ಲಿ ಹೋಯಿತು ? ಪಾಪ ಅಲ್ಲಿ ಬಿಲ್ಡರ್‌ಗಳು ತಾತಾಗಳು ಕಿತ್ತು ನಿಮಗೆ ಕೊಡಲಾಗಲಿಲ್ಲ. ನಿಮ್ಮ ಇಂದಿರಾ ಗಾಳಿ ಅವರನ್ನು ಓಡಿಸಿತು. ಇದರಿಂದ ಆರ್ಥಿಕ ಸಮಾನತೆ ಎಲ್ಲಿ ಬರಬೇಕು ? ಇದು ಬರೀ ರಾಜಕೀಯ ಡೊಂಬರಾಟ ಹಾಗೂ ನಿಮ್ಮ ಪ್ರಚಾರದ ಆಟವಲ್ಲದೇ ಬೇರೇನಲ್ಲ. ಇಂದಿರಾ ಗಾಂಧಿಯವರು ಸಮಾಜವಾದ ಎಂದು ಹೇಳುವುದನ್ನು ಬದಲಾವಣೆ ಮಾಡಿ ಅದನ್ನು , ಅಭಾವ ವಾದ . ಎಂದು ಹೇಳಿ ಅದು ಸರಿಯಾಗುತ್ತದೆ ಇಂತಹ ಒಂದು ನವ ಯುಗ ಬಂದಿದೆ.

ಕೊನೆಯದಾಗಿ ಒಂದು ಎಚ್ಚರಿಕೆಯನ್ನು ಗಂಭೀರವಾಗಿ ಸರಕಾರಕ್ಕೆ ಕೊಡಲು ಇಚ್ಛೆಪಡುತ್ತೇನೆ. ನಿಮ್ಮ ಅವಸಾನದ ಕಾಲ ಸಮೀಪವಾಗಿದೆ ಎಂದು ಎಲ್ಲೆಲ್ಲೂ ಘಂಟಾನಾದ ಹೊಡೆಯುತ್ತಿದೆ. ಇವೊತ್ತು ಹೊಡೆಯುತ್ತಿಲ್ಲ ಎಂದು ತಿಳಿಯಬೇಡಿ. ನಾಳೆ ನಿಮ್ಮ ಅಸ್ತಿತ್ವಕ್ಕೆ ಸಂಚಕಾರ ಬರಬಹುದು. ಆದುದರಿಂದ ನಾನು ರಾಜ್ಯಪಾಲರ ಭಾಷಣವನ್ನು ಹಾಗೂ ಇದರ ನಿರ್ಣಯವನ್ನು ವಿರೋಧಿಸುತ್ತೇನೆ 17 ವರ್ಷಗಳ ಕಾಲ ಮುಖ್ಯ ಮಂತ್ರಿಗಳಾಗಿದ್ದು ಇಂದು ರಾಜ್ಯಪಾಲರಾಗಿರುವ ಒಬ್ಬ ನುರಿತ ರಾಜ್ಯಕಾರಣಿಗೂ ಒಂದು ರೀತಿಯ ಇತಿ ಮಿತಿ ಇರಬೇಕು. ಅವರು ಹೊರಗೆ ಮಾತನಾಡುತ್ತಿಲ್ಲ. ಕೇಂದ್ರ ಸರಕಾರದ ಏಜಂಟರಾಗಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಸರಕಾರದವರು ಅವರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ಒಬ್ಬ ವ್ಯಕ್ತಿಯನ್ನು ತೆಗೆಯಲಿಕ್ಕೆ ಒಂದು ಆರ್ಡರನ್ನು ತೆಗೆದುದುದಕ್ಕಾಗಿ ಹೈಕೋರ್ಟಿನವರು ಚೀವಾರಿ ಹಾಕಿದರು. ರಾಜ್ಯಪಾಲರು ಮಾಡಿರುವ ಭಾಷಣದಲ್ಲಿ ಇಂತಹ ಕೆಲಸಗಳನ್ನು ಸರಕಾರ ಸಾಧಿಸಿದೆ ಎಂದು ಹೇಳುವುದನ್ನು ನಾನು ಒಪ್ಪಲು ತಯಾರಿಲ್ಲ ಎಂದು ಹೇಳಿ ತಾವು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ತಮ್ಮನ್ನೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಭಂಗಿ : (ಜಮಖಂಡಿ) ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾಯ್ಡುರವರು ರಾಜ್ಯಪಾಲರು ಮಾಡಿದ ಭಾಷಣಕ್ಕೆ ತಂದಿರುವ ನಿರ್ಣಯವನ್ನು

(ಶ್ರೀ ಪಿ. ಎಂ. ಭಂಗಿ)

ಬೆಂಬಲಿಸುತ್ತಾ ಕೆಲವು ಮಾತುಗಳನ್ನಾಡಲು ನಿಂತಿದ್ದೇನೆ. ನಮ್ಮ ರಾಜ್ಯಪಾಲರಾದ ಶ್ರೀ ಮೋಹನಲಾಲ್ ಸುಖಾಡಿಯುವರು ಮಾಡಿರುವ ಭಾಷಣವನ್ನು ತೆಗೆದುಕೊಂಡರೆ ಅವರು ಕೇಂದ್ರದಿಂದ ಅಧಿಕಾರವನ್ನು ತೆಗೆದುಕೊಂಡು ಬಂದು ಇಲ್ಲಿ ಚಲಾಯಿಸಬೇಕಾಗಿಲ್ಲ. ನಮ್ಮ ರಾಜ್ಯಪಾಲರು ಜನರ ಸಂಪರ್ಕವನ್ನು ಹೆಚ್ಚಾಗಿ ಬೆಳೆಸಿಕೊಂಡಿದ್ದಾರೆ. ಜನಸಾಮಾನ್ಯರ ಕಷ್ಟಗಳನ್ನು ಅರಿತುಕೊಂಡ ರಾಜ್ಯಪಾಲರೂ ಆಗಿದ್ದಾರೆ. ಈ ಸಮಯದಲ್ಲಿ ರಾಜ್ಯಪಾಲರು ಜನಸಾಮಾನ್ಯರಿಗೋಸ್ಕರ ಮಾಡಿರುವಂತಹ ಕೆಲಸಗಳು ಯಾವುವು ಮತ್ತು ಮುಂದೆ ಆಗತಕ್ಕ ಕೆಲಸಗಳೇನು ಎನ್ನುವುದರ ಬಗ್ಗೆ ಸಾಕಷ್ಟು ವಿಚಾರಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ಭಾಷಣದಲ್ಲಿ ಯಾವ ಅಂಶಗಳೂ ಸತ್ಯಕ್ಕೆ ದೂರವಾದಂತಹವುಗಳು ಇಲ್ಲ. ಇದರ ಬಗ್ಗೆ ನಮ್ಮ ಮಾನ್ಯ ವಿರೋಧಿಪಕ್ಷದ ನಾಯಕರು ಸುಮಾರು ಒಂದೆರಡು ತಾಸುಗಳಷ್ಟು ಇಲ್ಲಿ ಮಾಡಿದ ಭಾಷಣವನ್ನು ಕೇಳಿದಾಗ ಅವರು ಹೇಳಿರುವುದು ನಮ್ಮ ಸರಕಾರ ಏನೂ ಮಾಡಿಲ್ಲ ಹಾಗೂ ನಮ್ಮ ರಾಜ್ಯದ ಬಡ ಜನರಿಗೆ ಏನೂ ಕೆಲಸಗಳನ್ನೂ ಮಾಡಲಿಲ್ಲ ಎನ್ನುವ ಧಾಟಿಯಲ್ಲಿ ಮಾಡಿದ ಭಾಷಣವಾಗಿತ್ತು. ಈ ರೀತಿ ವಿರೋಧ ಪಕ್ಷದ ನಾಯಕರು ಭಾಷಣ ಮಾಡುವುದು ಸರಿಯಲ್ಲ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ನಮ್ಮ ರಾಜ್ಯ ಸರಕಾರದವರು ಈಚೆಗೆ ಭೂಸುದಾರಣೆ ಕಾಯಿದೆಯನ್ನು ಜಾರಿಗೆ ತರುವಂತೆ ಮಾಡಿ ಲಕ್ಷಾಂತರ ಮಂದಿ ಗೇಣಿದಾರರುಗಳಿಗೆ ಅವರ ಭೂಮಿಯ ಮೂಲಿಕೆ ಹಕ್ಕನ್ನು ಪಡೆಯುವಂತೆ ವ್ಯವಸ್ಥೆ ಮಾಡಿ ಲಕ್ಷಾಂತರ ಹೆಕ್ಟೇರು ಭೂಮಿಯನ್ನು ಸರ್‌ಪ್ಲಸ್ ಲ್ಯಾಂಡು ಬರುತ್ತದೆ. ಎಂದು ಹೇಳಿದ್ದಾರೆ. ಇದೇನೂ ಅಂತಹ ಸಾಮಾನ್ಯ ಸಂಗತಿಯೇನಲ್ಲ ಭೂಸುಧಾರಣೆ ಕಾಯಿದೆಯಿಂದ ಬಹಳಷ್ಟು ಹೆಚ್ಚಿನ ಖರ್ಚಾದರೂ ಜನರಿಗೆ ಹಂಚಲು ಸಾಕಷ್ಟು ಭೂಮಿ ಸಿಕ್ಕಿದೆ. ಉದರ ನಿಮಿತ್ತವಾಗಿ ಭೂಮಿಯನ್ನೇ ನಂಬಿಕೊಂಡಿರುವ ಜನರಿಗೆ ಸಹಾಯ ಮಾಡುವುದಕ್ಕೋಸ್ಕರ ಇಂತಹ ಒಂದು ಭೂ ಸುದಾರಣಾ ಕಾಯಿದೆ ಮಾಡಿ ಇದೀಗ ರಾಷ್ಟ್ರಪತಿಯವರ ಮುದ್ರೆಯನ್ನೂ ದೊರಕಿಸಿಕೊಂಡಿದ್ದಾರೆ ಮತ್ತು ಒಬ್ಬ ಮಾರ್ಚಿ ಒಂದನೇ ತಾರೀಖಿನಿಂದಲೇ ಇದನ್ನು ಜಾರಿಗೆ ತರುತ್ತೇವೆಂದೂ ಸರಕಾರದವರು ಹೇಳಿದ್ದಾರೆ. ಈ ಕಾಯಿದೆಯಿಂದ ಲಕ್ಷಾಂತರ ಬಡ ಜನರಿಗೆ ಮನೆ ಇಲ್ಲದಂತಹವರಿಗೆ ಹಾಗು ಭೂಮಿ ಇಲ್ಲದಂತಹವರಿಗೆ ತಮ್ಮ ಉದರ ನಿರ್ವಹಣ ಮಾಡಲು ಸಾಕಷ್ಟು ಅನುಕೂಲ ಮಾಡುವ ವ್ಯವಸ್ಥೆ ಮಾಡಿ ಕೊಟ್ಟಿದೆ. ಇದೇ ಪ್ರಕಾರ ಸುಮಾರು ಎರಡು ಲಕ್ಷದ ಐವತ್ತು ಸಾವಿರ ನಿವೇಶನಗಳನ್ನು ಫುಟ್‌ಪಾತಿನ ಮೇಲೆ ನಿಂತಿರುವ ಬಡ ಜನಕ್ಕೆ ಹಂಚುವ ವ್ಯವಸ್ತೆ ಮಾಡಿ ಅವರಿಗೆ ಅನುಕೂಲ ಮಾಡಿಕೊಟ್ಟಿದೆ.

ಅದೇ ಪ್ರಕಾರವಾಗಿ ಸರ್ಕಾರದವರು ಜನತಾ ಗೃಹನಿರ್ಮಾಣ ಕಾರ್ಯಕ್ರಮವನ್ನು ಕೈಗೊಂಡು ಮುಂದಿನ ಸಾಲಿನಲ್ಲಿ ಸಹಸ್ರಾರು ಮನೆಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡಿದ್ದಾರೆ. ಅದಕ್ಕಾಗಿ 5 ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಮಂಜೂರು ಮಾಡಿದ್ದಾರೆ. ಬಡಜನರ ಅನುಕೂಲಕ್ಕೋಸ್ಕರ ಬೇರೆಬೇರೆ ಕಾಯಿದೆಗಳನ್ನು ಮಾಡಿದ್ದಾರೆ. ಮಿನಿಮಮ್ ವೇಜಸ್ ಆಕ್ಟ್ ಮುಂತಾದ ಕಾಯಿದೆಗಳನ್ನು ಮಾಡುವುದರ ಮೂಲಕ ಬಡಜನರಿಗೆ ಸಾಕಷ್ಟು ಪ್ರಯೋಜನವನ್ನು ಈ ನಮ್ಮ ಸರ್ಕಾರ ಮಾಡಿದೆ. ಗುಜರಾತ್ ರಾಜ್ಯವಾಗಲೀ, ಬೇರೆ ರಾಜ್ಯಗಳಲ್ಲಿಯಾಗಲೀ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಏನೂ ವ್ಯವಸ್ಥೆ ಇಲ್ಲದೆ ಇದ್ದಾಗ ನಮ್ಮ ರಾಜ್ಯದಲ್ಲಿ ಶಾಸನ ಸುವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದೇ ಅಲ್ಲದೆ ಆ ಬಗ್ಗೆ ಸಾಕಷ್ಟು ಎಚ್ಚರಿಕೆಯನ್ನು ವಹಿಸಿ ನಮನ್ನು ಕಾಪಾಡುವ ವ್ಯವಸ್ಥೆ ಮಾಡಿದ್ದಾರೆಂಬುದನ್ನು ಹೇಳಲು ನನಗೆ ತುಂಬಾ ಸಂತೋಷವಾಗುತ್ತದೆ. ಕಳೆದ ಡಿಸಂಬರ್ ತಿಂಗಳಲ್ಲಿ 12 ಮತ್ತು 13ನೇ ತಾರೀಖಿನ ದಿವಸ ನಮ್ಮ ಜಮಖಂಡಿ, ಅಥಣಿ ಮತ್ತು ಮುಧೋಳದಲ್ಲಿ ಗೂಂಡಾ ಜನರು ದೌರ್ಜನ್ಯಗಳನ್ನು ನಡೆಸಿದರು. ಕೊಲ್ಲಾಪುರ ಮುಂತಾದ ಗಡಿ ಭಾಗಗಳಿಂದ ಕನ್ನಡಿಗರು ಅಲ್ಲಿಯ ಮರಾಠಿಗರ ದೌರ್ಜನ್ಯಕ್ಕೊಳಗಾಗಿ ನಮ್ಮಲ್ಲಿಗೆ ವಲಸೆ ಬಂದ ನಂತರ ಸ್ಥಳೀಯ ಜನರು ಇಲ್ಲಿ ವಿಧ್ವಂಸಕ ಕಾರ್ಯಗಳನ್ನು ನಡೆಸಿದರು. ಆ ಸಮಯದಲ್ಲಿ ಗಡಿ ನಿಪಾಣಿ ಸಂರಕ್ಷಣೆ ಮಾಡಲು ಪೋಲೀಸರನ್ನು ಕಳಿಸಲಾಗಿತ್ತು. ಗಲಾಟೆ ಪ್ರಾರಂಭವಾಗಿದ್ದು ಸರ್ಕಾರಕ್ಕೆ ತಿಳಿದಕೂಡಲೇ ತಕ್ಕ ಪೋಲೀಸ್ ಬಂದೋಬಸ್ತು ಮಾಡಿ ಗುಂಡಾ ಜನರ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಿದರು, ನೂರಾರು ಜನರನ್ನು ಬಂಧಿಸಿ ಜೈಲಿನಲ್ಲಿ ಇಟ್ಟರು. ಅನಂತರ ನಮ್ಮ ಭಾಗದಲ್ಲಿ ಗುಂಡಾಗಿರಿ ನಡೆದಿಲ್ಲ. ಶಾಸನ ಸುವ್ಯವಸ್ಥೆ ಉತ್ತಮ ರೀತಿಯಿಂದ ಸಾಗಿದೆ.

ಇನ್ನು ನಮ್ಮ ಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಾಗಿದ್ದರೂ ಸಹ ಶ್ರೀಮಂತರು ಮತ್ತು ದೊಡ್ಡ ದೊಡ್ಡ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಯ ಬಗ್ಗೆ ಡಿಕ್ಲರೇಷನ್ ಕೊಡದೆ ತಾವೇ ಶೇಖರಣೆ ಮಾಡಿಕೊಂಡು ಇಟ್ಟಿದ್ದರು ನಂತರ ನಮ್ಮ ಆಹಾರಮಂತ್ರಿಗಳು ಅದನ್ನೆಲ್ಲಾ ಜಪ್ತಿ ಮಾಡಿಸಿ ಸರ್ಕಾರಕ್ಕೆ ತೆಗೆದುಕೊಂಡು ಈಗ ಬಡ ಜನರಿಗೆ ವಿತರಣೆ ಮಾಡುವವರಿದ್ದಾರೆ ಈ ರೀತಿ ಜಪ್ತಿ ಮಾಡಿದ ಧಾನ್ಯವನ್ನು ಸೊಸೈಟಿಗಳ ಮೂಲಕ ಮತ್ತು ನ್ಯಾಯಬೆಲೆ ಅಂಗಡಿಗಳ ಮೂಲಕ ಜನತೆಗೆ ಹಂಚುವುದರ ಮೂಲಕ ಆಹಾರದ ಕೊರತೆಯನ್ನು ನೀಗಿಸುವ ಕಾರ್ಯವನ್ನು ಸರ್ಕಾರ ನಡೆಸಿದೆ. ಈ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕಾಣಿಸಿದಂಥ ಎಲ್ಲ ಸಂಗತಿಗಳು ನಿಜವಾಗಿದ್ದು, ನಮ್ಮ ರಾಜ್ಯದಲ್ಲಿ ಪ್ರಜಾಸತ್ತೆಗೆ ಯಾವ ರೀತಿಯಿಂದಲೂ ಧಕ್ಕೆ ಬಂದಿಲ್ಲ. ಎಲ್ಲವೂ ಸುಸೂತ್ರವಾಗಿ ಸಾಗಿಹೆ. ನಮ್ಮ ರಾಜ್ಯದಲ್ಲಿ

(ಶ್ರೀ ಪಿ. ಎಂ, ಭಂಗಿ)

ಸಮಾಜವಾದವನ್ನು ಜಾರಿಗೆ ತರಲು ಸರ್ಕಾರ ತನ್ನ ಶಕ್ತಿ ಮೀರಿ ಪ್ರಯತ್ನ ಮಾಡು ವುದಕ್ಕೆ ಹೊರಟಿದೆ. ಬೇರೆ ಬೇರೆ ಕಾಯಿದೆಗಳನ್ನು ಪಾಸ್ ಮಾಡಿ ಸಮಾಜವಾದ ವನ್ನು ಆಚರಣೆಯಲ್ಲಿ ತರಲು ಪ್ರಯತ್ನ ನಡೆಸಿದೆ. ಆದ್ದರಿಂದ ನಾನು ರಾಜ್ಯಪಾಲರ ಭಾಷಣದ ಬಗ್ಗೆ ತಂದಿರುವ ವಂದನಾ ನಿರ್ಣಯವನ್ನು ತುಂಬಾ ಸಂತೋಷದಿಂದ ಸ್ವಾಗತಿಸುತ್ತೇನೆ. ಜೈ ಹಿಂದ್.

*ಶ್ರೀ ಟಿ. ಆರ್. ಶಾಮಣ್ಣ :—(ಕೋಟೆ) ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಸರ್ಕಾರದ ವತಿಯಿಂದ ಮಾನ್ಯ ರಾಜ್ಯಪಾಲರು ತಮ್ಮ ಒಂದು ಭಾಷಣವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ರಾಜ್ಯಪಾಲರ ವಿವರಣೆಯನ್ನು ನೋಡಿದ ಮೇಲೆ, ಈ ಸರ್ಕಾರದ ಧೋರಣೆ ಒಳ್ಳೆಯ ಉತ್ತೇಜನಕಾರಿಯಾಗಿಲ್ಲವೆಂಬುದು ತಿಳಿಯುತ್ತದೆ. ಸರ್ಕಾರ ತನ್ನ ಆಡಳಿತದಲ್ಲಿ ನೂರಾರು ಸಮಸ್ಯೆಗಳು ಇದ್ದರೂ ಸಹ ಮತ್ತು ಬಹಳ ತೊಡಕಿನ ಸಮಸ್ಯೆಗಳು ಇದ್ದರೂ ಸಹ ಯಾವುದನ್ನೂ ಸರಿ ಪಡಿಸುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡಿಲ್ಲ; ಜನರ ಕಷ್ಟಗಳು ದಿನೇದಿನೇ ಹೆಚ್ಚುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಇಂದು ಜನರು ಬೇಸತ್ತಿರುವ ಬಗ್ಗೆ ರಾಜ್ಯಪಾಲರು ಯಾವ ವಿವರಣೆಯನ್ನೂ ಕೊಟ್ಟಿಲ್ಲ; ಅವರು ತಮ್ಮ ಭಾಷಣದ ಮೊದಲಿನಲ್ಲಿ "ಹಿಂದಿನ ವರ್ಷ ನಮ್ಮ ಸರ್ಕಾರದವರು ಜನತೆಯ ನಾನಾ ಪಂಗಡಗಳ ಆರ್ಥಿಕ ತಾರತಮ್ಯಗಳನ್ನು ತೊಲಗಿಸಿ ಪ್ರಾದೇಶಿಕ ಅಸಮತೆ ಗಳನ್ನು ತಗ್ಗಿಸಿ, ಒಟ್ಟು ಸಮುದಾಯದ ಅಭಿವೃದ್ಧಿ ಹಾಗೂ ಕಲ್ಯಾಣದ ಬಗ್ಗೆ ಬೇಕಾದ ಹಂದರವು ತ್ವರಿತವಾಗಿ ಬೆಳೆಯುವಂತೆ ತಮ್ಮ ಯತ್ನಗಳನ್ನು ಮುಂದು ವರಿಸಿದರು'' ಎಂದು ಹೇಳಿದ್ದಾರೆ. ಆದರೆ ಇಂದು ನಾವು ಸಾಹುಕಾರರು ಬಡವ ರಾಗುತ್ತಿರುವುದನ್ನು ನೋಡುತ್ತಿಲ್ಲ; ಮತ್ತು ಬಡವರು ಸಾಹುಕಾರರಾಗುವ ಚಿಹ್ನೆ ಯನ್ನು ಸಹ ನಾವು ಕಾಣುತ್ತಿಲ್ಲ; ಇಂದು ಬಡವರು ಮತ್ತು ಮಧ್ಯಮ ವರ್ಗ ದವರು ತಮ್ಮ ಜೀವನವನ್ನು ಮುಂದುವರಿಸುವುದೇ ಕಷ್ಟವಾಗಿಬಿಟ್ಟಿದೆ. ಇಂದಿನ ಬೆಲೆಗಳ ಏರಿಕೆಗೆ ಪ್ರಧಾನ ಮಂತ್ರಿಗಳು ಮೊದಲುಗೊಂಡು ಆಡಳಿತ ಪಕ್ಷದವ ರೆಲ್ಲರೂ ಹೇಳುತ್ತಿರುವುದೇನೆಂದರೆ, ವಿರೋಧ ಪಕ್ಷದವರು ಸಹಕಾರ ಕೊಡದೆ ದಾಂಧಲೆ ಮಾಡುತ್ತಿರುವುದರಿಂದ ಬೆಲೆಗಳು ಏರುತ್ತಿವೆ ಎಂದು. ಮತ್ತು ವಿರೋಧ ಪಕ್ಷದವರಿಂದ ಕನ್ಸ್ಟ್ರಕ್ಟಿವ್ ಸಪೋರ್ಟ್ ಇಲ್ಲದಿರುವುದರಿಂದ ಇದೆಲ್ಲಾ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಬೆಲೆಗಳ ಏರಿಕೆಗೆ ಮುಖ್ಯ ಕಾರಣವೆಂದರೆ ಇಂದಿನ ಸರ್ಕಾರದ ನೀತಿಬಾಹಿರವಾದ ಕ್ರಮ ಮತ್ತು ಅಧಿಕಾರದ ಒಂದು ಆಸೆ ಯಿಂದ ಬೆಲೆಗಳು ಹೆಚ್ಚುತ್ತಿವೆ ಎಂದು ನಾನು ಹೇಳಬಲ್ಲೆ. ಹೊಸದಾಗಿ 6 ಸಾವಿರ ಕೋಟಿ ರೂಪಾಯಿಗಳ ಚಲಾವಣೆ ಮಾಡಿದ್ದರಿಂದ ಹಣದುಬ್ಬರವಾಗುವುದಕ್ಕೆ ಕಾರಣವಾಯಿತು. ಇದಕ್ಕೆ ವಿರೋಧ ಪಕ್ಷದವರು ಕಾರಣವೇ ಎಂಬುದನ್ನು

ಅವರು ಹೇಳಬೇಕು. ಮೊನ್ನೆ ಪೆಟ್ರೋಲ್ ಅಭಾವ ಬಂದಾಗ ಪೆಟ್ರೋಲ್ ದರವನ್ನು ಹೆಚ್ಚು ಮಾಡಿದರು. ಆ ರೀತಿ ಹೆಚ್ಚಿಸಿದ ದರ 8 ಪೈಸೆಯಾದರೆ, ಎಕ್ಸೈಜ್ ಡ್ಯೂಟಿಯನ್ನು ಒಂದು ರೂಪಾಯಿಯವರೆಗೆ ಹೆಚ್ಚಿಸಿದರು. ಪೆಟ್ರೋಲ್ ಬೆಲೆ ಹೆಚ್ಚಾಗಿದ್ದರಿಂದ ಇತರೇ ಸಾಮಾನುಗಳ ಬೆಲೆಗಳೂ ಸಹ ಯದ್ವಾತದ್ವಾ ಹೆಚ್ಚಾದವು. ಮೊನ್ನೆ ಇವರು ಚುನಾವಣೆಯಲ್ಲಿ ಗೆಲ್ಲಬೇಕಾದರೆ ಜನರಿಗೆ 14 ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ ಸ್ವರ್ಗವನ್ನೇ ಭೂಲೋಕಕ್ಕೆ ಇಳಿಸುತ್ತೇವೆಂದು ಭರವಸೆ ಕೊಟ್ಟರು. ಆದರೆ ಇಂದು ರಾಷ್ಟ್ರೀಕೃತವಾದಂಥ ಬ್ಯಾಂಕ್‌ಗಳಲ್ಲಿ ಬಡ್ಡಿ ದರವನ್ನು ಹದಿಮೂರುವರೆ ಪರ್ಸೆಂಟ್‌ವರೆಗೆ ಹೆಚ್ಚಿಸಿದ್ದಾರೆ. ಇಷ್ಟೊಂದು ಬಡ್ಡಿ ಕೊಟ್ಟು ಸಾಲ ತೆಗೆದುಕೊಂಡರೆ ಯಾವ ವ್ಯಾಪಾರಗಾರನೇ ಆಗಲಿ, ಯಾವ ಕೈಗಾರಿಕೋದ್ಯಮಿಯೇ ಆಗಲೀ, ತಮ್ಮ ಕಸಬುಗಳನ್ನು ಲಾಭದಾಯಕವಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಬ್ಯಾಂಕ್‌ಗಳ ರಾಷ್ಟ್ರೀಕರಣವಾದ ಮೇಲೆ ಅಲ್ಲಿಯ ಉದ್ಯೋಗಿಗಳಿಗೆ ಮಾತ್ರ ಅನುಕೂಲವಾಯಿತು. ರಾಷ್ಟ್ರೀಕರಣ ಮಾಡಿದ ಮೇಲೆ ಟ್ಯಾಕ್ಸಿ ನಡೆಸುವವರಿಗೆ, ಸಣ್ಣ ಸಣ್ಣ ಕೈಗಾರಿಕೆಗಳವರಿಗೆ, ವ್ಯವಸಾಯಗಾರರಿಗೆ ಹಣ ಕೊಡುತ್ತೇವೆಂದು ಇದೇ ಸರ್ಕಾರದವರು ಘೋಷಣೆ ಮಾಡಿದರು. ಆದರೆ ಇಂದು ಯಾವ ಬ್ಯಾಂಕ್‌ನಲ್ಲಿಯೂ ಸಾಲ ಕೊಡುತ್ತಿಲ್ಲ; ಸಾಲ ಸಿಕ್ಕಿದರೂ ಸಹ ಲಂಚ ಕೊಡದೆ ಸಾಲ ಸಿಕ್ಕುವುದಿಲ್ಲ. ಆದರೆ ಬ್ರಾಂಚ್‌ಗಳು ಮಾತ್ರ ಜಾಸ್ತಿಯಾಗುತ್ತಿವೆ. ಜನಸಾಮಾನ್ಯರಿಗೆ ಮಾತ್ರ ಯಾವ ಸಹಾಯವೂ ಆಗುತ್ತಿಲ್ಲ; ಇವೊತ್ತಿನ ದಿವಸ ರೈಲ್ವೇ ಬಡ್ಜೆಟನ್ನು ಪಾರ್ಲಿಮೆಂಟಿನಲ್ಲಿ ಮಂಡನೆ ಮಾಡಿದ್ದಾರೆ. ಈ ಸಲದ ಬಡ್ಜೆಟ್ಟಿನಲ್ಲಿಯೂ ಸಹ ಪ್ರಯಾಣದ ದರಗಳನ್ನು ಜಾಸ್ತಿ ಮಾಡಿದ್ದಾರೆ. ಪ್ರತಿವರ್ಷವೂ ಈ ರೀತಿ ದರಗಳನ್ನು ಜಾಸ್ತಿ ಮಾಡುತ್ತಿದ್ದರೆ ಇತರ ಸಾಮಾನುಗಳ ಬೆಲೆಯೂ ಸಹ ಹೆಚ್ಚಾಗುತ್ತದೆ.

ಇವೊತ್ತು ರೈಲ್ವೆ ಬಡ್ಜೆಟ್ಟಿನಲ್ಲಿ ಸೂಚಿಸಿರುವ ಹಾಗೆ ರೈಲ್ವೆ ದರ ಹೆಚ್ಚಿನ ರೀತಿಯಲ್ಲಿ ಹೆಚ್ಚಿಸಿದ್ದಾರೆ. ಸಾಮಾನುಗಳ ಮೇಲೆ ಪ್ರಯಾಣಿಕರ ಮೇಲೆ ದೊಡ್ಡ ಹೊರೆಯನ್ನು ಹೊರಿಸಿದ್ದಾರೆ. ಇದು ಬೆಲೆ ಏರಿಕೆಗೆ ಕಾರಣವಾಗುವುದಿಲ್ಲವೇ ? ಪ್ರತಿವರ್ಷ ಸೆಂಟ್ರಲ್ ಬಡ್ಜೆಟ್ ಬಂತು ಎಂದರೆ ಎಕ್ಸೈಜ್ ಡ್ಯೂಟಿಯನ್ನು ಹಾಕುತ್ತಾರೆ. ಇದರಿಂದ ಬೆಲೆಗಳ ಏರಿಕೆಯಾಗುತ್ತದೆ. ಇದು ಯಾರಿಂದ ಹೆಚ್ಚಾಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಇದನ್ನು ಜನಸಾಮಾನ್ಯರು ಮಾಡಿದ್ದಲ್ಲ, ಅಥವಾ ವಿರೋಧ ಪಕ್ಷದವರು ಮಾಡಿದ್ದಲ್ಲ

ಸರ್ಕಾರದವರು ಜೂನ್ ಜುಲೈ ತಿಂಗಳಿನಲ್ಲಿ ಹಾಲಿನ ಬೆಲೆಯನ್ನು ಏರಿಸುವಾಗ ಇದು ತಾತ್ಕಾಲಿಕವಾದದ್ದು, ಸೆಪ್ಟೆಂಬರ್ ತಿಂಗಳಿನಲ್ಲಿ ಹಾಲಿನ ಪರಿಸ್ಥಿತಿ ಉತ್ತಮವಾಗುತ್ತದೆ. ಆಗ ಹಾಲಿನ ದರವನ್ನು ಇಳಿಸುತ್ತೇವೆ ಎಂದು

(ಶ್ರೀ ಟಿ. ಆರ್. ಶಾಮಣ್ಣ)

ಹೇಳಿದರು. ಈಗ ಮೊನ್ನೆ ಹಾಲಿನ ದರವನ್ನು ಒಂದು ಲೀಟರಿಗೆ 20 ಪೈಸೆ ಏರಿಸಿದ್ದಾರೆ. ಇದಕ್ಕೆ ಜನಸಾಮಾನ್ಯರು ಕಾರಣವೇ ಅಥವಾ ವಿರೋಧಪಕ್ಷದವರು ಕಾರಣವೇ ಎಂಬುದನ್ನು ನೋಡಬೇಕಾಗಿದೆ. ಬಸ್ ದರವನ್ನು ವರ್ಷೇವರ್ಷೇ ಏರಿಸಿಕೊಂಡು ಹೋಗತಕ್ಕಂಥಾ ಪರಿಸ್ಥಿತಿ ಇರುವಾಗ ನೌಕರರಿಗೆ ಜೀವನ ಮಟ್ಟ ಮತ್ತು ಖರ್ಚಿನ ಮಟ್ಟ ಯಾವರೀತಿ ಹತೋಟಿಗೆ ತರುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನೋಡಬೇಕಾಗಿದೆ.

ಹೋದವರ್ಷ ಸರ್ಕಾರದವರು ಗೋಧಿಯನ್ನು ಕೊಳ್ಳತಕ್ಕಂಥಾ ಮತ್ತು ಮಾರತಕ್ಕಂಥಾದ್ದನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂದು ಹೇಳಿದ ತಕ್ಷಣ ಗೋಧಿಯ ಬೆಲೆ ಏರಿತು. ಸರ್ಕಾರದವರು ಗೋಧಿವ್ಯಾಪಾರವನ್ನು ರಾಷ್ಟ್ರೀಕರಣ ಮಾಡಿ ಅದನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲಿಯವರೆಗೆ ಲಂಚಗುಳಿತನ ಇರುತ್ತದೆ ಅಲ್ಲಿಯವರೆಗೆ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಈಗ ಇರತಕ್ಕಂಥಾ ಆಡ್ಮಿನಿಸ್ಟ್ರೇಷನ್ ಬಹಳ ಕೆಟ್ಟರೀತಿಯಲ್ಲಿ ನಡೆಯುತ್ತಿದೆ. ಈ ಸರ್ಕಾರಕ್ಕೆ ನಾಗರೀಕರಿಗೆ ಯಾವ ಅನುಕೂಲವನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಗೋಧಿಯ ಸಗಟು ವ್ಯಾಪಾರವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ತಕ್ಷಣ ಗೋಧಿಯ ಬೆಲೆ ಯದ್ವಾ ತದ್ವಾ ಏರಿತು. ಇವೊತ್ತು ಒಳ್ಳೆಯ ಗೋಧಿಯ ಬೆಲೆ ಕೆ. ಜಿ. ಗೆ ಮೂರೂವರೆ ರೂಪಾಯಿ ಆಗಿದೆ. ಮತ್ತೊಂದು ಕಡೆ ಬಾಕಿ ಸಾಮಾನುಗಳ ಬೆಲೆ ವಿಪರೀತವಾಗಿ ಏರಿದೆ. ಇದನ್ನು ಒಂದು ಹತೋಟಿಗೆ ತರುವುದಕ್ಕೆ ಕಷ್ಟವಾಗುತ್ತದೆ. ಸುಗ್ಗಿ ಕಾಲದಲ್ಲಿ ಒಂದು ರೂಪಾಯಿ ಒಂದು ಕೆ. ಜಿ. ಅಕ್ಕಿ ಸಿಕ್ಕುತ್ತಿತ್ತು. ಇವೊತ್ತು ಎರಡು ರೂಪಾಯಿ ಕೊಟ್ಟರೂ ಒಳ್ಳೆಯ ಅಕ್ಕಿ ಸಿಕ್ಕತಾ ಇಲ್ಲ. ಒಳ್ಳೆಯ ಅಕ್ಕಿಗೆ ಒಂದು ಕೆ.ಜಿ ಗೆ 3 ರೂಪಾಯಿಗಳನ್ನು ಕೊಡಬೇಕು. ಒಂದು ಕೆ. ಜಿ ಅಕ್ಕಿಗೆ 3 ರೂಪಾಯಿ ಕೊಟ್ಟುಕೊಂಡು ಯಾವ ಸಂಸಾರ ತಾನೆ ಸಂಸಾರ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ? ಎಷ್ಟು ವರಮಾನ ಬಂದರೂ ಸರಿಯಾಗಿ ಸಂಸಾರವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ.

ಸೀಮೆ ಎಣ್ಣೆ ಬಗ್ಗೆ ಹೇಳುವುದಾದರೆ ಈ ಒಂದು ಸಮಸ್ಯೆ ಪ್ರಪಂಚದಲ್ಲೇ ಇರತಕ್ಕ ಸಮಸ್ಯೆ ಇದನ್ನು ಹೇಗೆ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ. ಇದರ ಬೆಲೆ ಏರಬೇಕಾದರೆ ಸರ್ಕಾರದವರು ಒಂದು ಲೀಟರಿಗೆ ಒಂದು ರೂಪಾಯಿ ಎಕ್ಸೈಜ್ ಡ್ಯೂಟಿಯನ್ನು ಹಾಕಿದರು. ಇದರಿಂದ ಅದರ ಬೆಲೆ ಜಾಸ್ತಿಯಾಯಿತು. ಇದು ಸರಿಯಾದ ಮಾರ್ಗವೇ ಎಂದು ನಾವು ಯೋಚನೆ ಮಾಡಬೇಕಾಗಿದೆ. ಕೋಲ್‌ಷಾರ್ಟೇಜ್ ಇರುವುದರಿಂದ ಅನೇಕ ಫ್ಯಾಕ್ಟರಿಗಳು

ಕೆಲಸ ಮಾಡುವುದಕ್ಕೆ ತೊಂದರೆಯಾಗಿದೆ. ರೈಲ್ವೆಗೆ ತೊಂದರೆಯಾಗಿದೆ. ಕೋಲ್ ಷಾರ್ಟೇಜ್ ಬರುವುದಕ್ಕೆ ಯಾರು ಕಾರಣಕರ್ತರು? ಕೋಲು ಉತ್ಪನ್ನ ಸರಿಯ್ಯಾಗಿಲ್ಲದೇ ಇರುವುದರಿಂದ ಸಾಗಾಣಿಕೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಕೋಲನ್ನು ಉತ್ಪನ್ನ ಮಾಡುವುದೂ ಸರ್ಕಾರದ ಅಧೀನದಲ್ಲಿದೆ. ಕೋಲನ್ನು ಸಾಗಾಣಿಕೆ ಮಾಡುವುದೂ ಸರ್ಕಾರದ ಅಧೀನದಲ್ಲಿದೆ. ಹೀಗಿರುವಾಗ ಕೋಲು ಹೇಗೆ ಬರುತ್ತದೆ? ಇದಕ್ಕೆ ಜನಸಾಮಾನ್ಯರು ಕಾರಣವೇ ಅಥವಾ ಸರ್ಕಾರದವರು ಕಾರಣವೇ ಎಂಬುದನ್ನು ನೋಡಬೇಕಾಗಿದೆ

ಅನೇಕ ಸಂದರ್ಭಗಳಲ್ಲಿ ಬೆಲೆಗಳ ಏರಿಕೆಗೆ ವರ್ತಕರು ಕಾರಣ ಎಂದು ಹೇಳುತ್ತಾರೆ. ಕಳ್ಳ ವ್ಯಾಪಾರ ಮಾಡತಕ್ಕಂಥವರಿಗೆ, ಕಳ್ಳ ಸಾಗಾಣಿಕೆ ಮಾಡತಕ್ಕವರಿಗೆ ಸರ್ಕಾರದವರು ಬೆಂಬಲ ಕೊಡತಕ್ಕ ಕಾಲದಲ್ಲಿ ವರ್ತಕರನ್ನು ಹಿಡಿಯ ಬೇಡಿ ಎಂದು ಹೇಳುತ್ತಾರೆ. ಹಾಗಾದರೆ ಅಂಥವರನ್ನು ಎಷ್ಟು ಜನ ಗಳನ್ನು ಸರ್ಕಾರದವರು ಹಿಡಿದಿದ್ದಾರೆ, ಎಷ್ಟು ಜನಗಳಿಗೆ ಶಿಕ್ಷೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಲಿ. ಯಾರು ವ್ಯಾಪಾರ ಮಾಡಿ ವಿಪರೀತವಾಗಿ ಲಾಭ ಸಂಪಾದನೆ ಮಾಡುತ್ತಾರೆಯೊ ಅಂಥವರಿಗೆ ಅಫೀಸರುಗಳು ಉತ್ತೇಜನ ಕೊಡುತ್ತಾರೆ. ಮತ್ತು ಆ ವರ್ತಕರಿಂದ ಎಲೆಕ್ಷನ್ನಿಗೆ ಮತ್ತು ಪಾರ್ಟಿಗೆ ದುಡ್ಡು ವಸೂಲು ಮಾಡುತ್ತೀರಿ ಹೀಗಿರತಕ್ಕ ಕಾಲದಲ್ಲಿ ವರ್ತಕರ ಮೇಲೆ ಕಳ್ಳ ವ್ಯಾಪಾರ ಮಾಡುವವರ ಮೇಲೆ ಏನು ಕ್ರಮ ತೆಗೆದುಕೊಂಡು ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎಂಬ ಬಗ್ಗೆ ಉತ್ತರವನ್ನು ಕೊಡಬೇಕಾಗಿದೆ.

ಸ್ಟೀಲ್ ಪ್ಲಾಂಟ್ ಬಗ್ಗೆ ಹೇಳುವುದಾದರೆ ಸ್ಟೀಲ್‌ಪ್ಲಾಂಟ್ ಸರ್ಕಾರದ ಅಧೀನದಲ್ಲಿ ಇದ್ದುದರಿಂದ ಇದರಲ್ಲಿ ವರ್ಷೇ ವರ್ಷೇ ಕೋಟ್ಯಾಂತರ ರೂಪಾಯಿ ಗಳು ನಷ್ಟವಾಗುವುದಕ್ಕೆ ಸರ್ಕಾರದ ಒಂದು ಧೋರಣೆ ಮತ್ತು ಸರಿಯಾಗಿ ಆಡಳಿತವನ್ನು ನಡೆಸದೇ ಇರುವುದೇ ಕಾರಣ. ಇದಕ್ಕೆ ಜನಸಾಮಾನ್ಯರು ಕಾರಣವೇ? ವಿರೋಧ ಪಕ್ಷದವರು ಕಾರಣವೇ? ಎಂಬುದನ್ನು ನೋಡ ಬೇಕಾಗಿದೆ ನ್ಯಾಷನಲ್ ಸ್ಟೀಲ್ ಪ್ಲಾಂಟ್‌ನಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿರುವುದರಿಂದ ಇದರ ಬೆಲೆ ಏರುತ್ತಿದೆ. ಆಡಳಿತ ಪಕ್ಷ ದೇಶದ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಸ್ಟೀಲ್ ಬೆಲೆ ಒಂದು ಟನ್ನಿಗೆ 800 ರೂ. ಗಳು ಇತ್ತು. ಇವೊತ್ತು ಅದು 3200 ರೂ. ಗಳಿಗೆ ಏರಿದೆ ಈ ರೀತಿ ಇದರ ಬೆಲೆ ಏರುವುದಕ್ಕೆ ಯಾರು ಕಾರಣ? ವಿರೋಧಪಕ್ಷದವರು ಕಾರಣವೇ? ಇದಕ್ಕೆ ಆಡಳಿತ ಪಕ್ಷದ ಆಡಳಿತದಲ್ಲಿರ ತಕ್ಕಂಥಾವರ ಒಂದು ಧೋರಣೆ ಅವರ ಒಂದು ನಿಶ್ಯಕ್ತಿ ಕಾರಣ ಎಂದು ಹೇಳ ಬೇಕಾಗಿದೆ. ಸ್ಟೀಲ್ ಬೆಲೆ 800 ರೂ. ಗಳಿಂದ 3200 ರೂ. ಗಳಿಗೆ ಏರಿದರೆ ಫ್ಯಾಕ್ಟರಿಗಳನ್ನು ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಪ್ರತಿವರ್ಷ ಬಟ್ಟೆ

(ಶ್ರೀ ಟಿ. ಆರ್. ಶಾಮಣ್ಣ)

ಗಳ ಮೇಲೆ ಎಕ್ಸೈಜ್ ಡ್ಯೂಟಿಯನ್ನು ಹಾಕುತ್ತಿದ್ದಾರೆ ಆದ್ದರಿಂದ ಬಟ್ಟೆಗಳ ಬೆಲೆ ಏರುತ್ತಿದೆ. ಜನಗಳ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇವೊತ್ತು ಪಟ್ಟಣಗಳಲ್ಲಿ ಜನಸಾಮಾನ್ಯರು ಜೀವನ ಮಾಡುವುದ ಕಷ್ಟವಾಗಿದೆ. ಜನಸಾಮಾನ್ಯರಿಗೆ ಯಾವ ವಿಧವಾದ ಸೌಕರ್ಯ ವನ್ನೂ ಇವರ ಆಡಳಿತದಿಂದ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ ರಾಜ್ಯಪಾಲರ ಭಾಷಣದಲ್ಲಿ ಸಾಮಾನುಗಳ ಬೆಲೆ ಯದ್ವಾ ತದ್ವಾ ಏರಿರುವುದಕ್ಕೆ ಯಾವ ಕ್ರಮ ವನ್ನೂ ತೆಗೆದುಕೊಂಡಿದ್ದಾರೆ ಎಂಬ ಅಂಶವನ್ನು ಸ್ವಲ್ಪವೂ ಕೂಡ ವಿವರಿಸದೇ ಇರುವುದು ಶೋಚನೀಯ ವಿಚಾರ.

ಒಂದು ಕಡೆ ಕಾರ್ಮಿಕರ ಸ್ಟ್ರೈಕ್, ಒಂದು ಕಡೆ ಡಾಕ್ಟರುಗಳ ಸ್ಟ್ರೈಕ್, ಮತ್ತೊಂದು ಕಡೆ ಉಪಾಧ್ಯಾಯರುಗಳ ಸ್ಟ್ರೈಕ್ ನಡೆಯುತಿ ದೆ. ಡಾಕ್ಟರುಗಳ ಮತ್ತು ಉಪಾಧ್ಯಾಯರುಗಳ ಸ್ಟ್ರೈಕ್ ನಡೆದದ್ದು ಇಡೀ ಚರಿತ್ರೆಯಲ್ಲೇ ಕಂಡು ಬಂದಿಲ್ಲ. ಕಾರ್ಮಿಕರ ಸ್ಟ್ರೈಕ್ ಜೋರಿ ನಡೆಯುತ್ತಿದೆ. ಇದಕ್ಕೆಲ್ಲಾ ಯಾರು ಕಾರಣ ? ಜನಗಳಲ್ಲಿ ಅತೃಪ್ತಿ ಇರುವುದು ಮುಖ್ಯ ಕಾರಣ. ಸರ್ಕಾರದವರು ಸಾಮಾನುಗಳ ಬೆಲೆಗಳನ್ನು ಹತೋಟಿಯಲ್ಲಿಡುವುದನ್ನು ಕೈ ಬಿಟ್ಟದ್ದರಿಂದ ಬೆಲೆಗಳು ವಿಪರೀತವಾಗಿ ಏರುತ್ತಿವೆ ಆದ್ದರಿಂದ ಜನಸಾಮಾನ್ಯರ ಜೀವನ ಕಷ್ಟವಾಗಿದೆ. ಸೀಮೆ ಎಣ್ಣೆಗೆ ಕ್ಯೂ ನಿಲ್ಲಬೇಕು ಸಾಮಾನುಗಳನ್ನು ಕೊಳ್ಳಲು ಕ್ಯೂ ನಿಲ್ಲಬೇಕು, ಹೀಗೆ ಪ್ರತಿಯೊಂದಕ್ಕೂ ಕ್ಯೂ ನಿಲ್ಲಬೇಕು ಜನಗಳು ಎಷ್ಟು ದುಡ್ಡನ್ನು ಖರ್ಚು ಮಾಡಿದರೂ ಅವರು ಕೊಳ್ಳುವ ಸ್ಥಿತಿಯಲ್ಲಿ ಇಲ್ಲ, ಕಾರ್ಮಿಕರು ಪ್ರತಿಭಟನೆ ಮಾಡಿ ದರೆ ಆಗ ಅವರಿಗೆ ಸ್ವಲ್ಪ ಡಿ. ಎ. ಕೊಡುತ್ತಾರೆ. ಕೇವಲ 2-3 ಲಕ್ಷ ಇರತಕ್ಕ ನೌಕರರು ಸ್ಟ್ರೈಕ್ ಮಾಡಿದರೆ ಬೆದರಿಕೆ ಹಾಕಿದರೆ ಹೆದರಿಕೊಳ್ಳುತ್ತಾರೆ. ಯಾವ ಕೆಲಸವೂ ಕೂಡ ನ್ಯಾಯವಾಗಿ ಆಗುತ್ತಿಲ್ಲ ಸ್ಟ್ರೈಕ್ ಮಾಡಬೇಕು ತಮ್ಮ ಬೇಡಿಕೆ ಗಳನ್ನು ಪೂರೈಸಿಕೊಳ್ಳಬೇಕು. ಫ್ಯಾಕ್ಟರಿಗಳವರು ಸ್ಟ್ರೈಕ್ ಮಾಡುತ್ತಿದ್ದಾರೆ. ಉಪಾಧ್ಯಾಯರು ಸ್ಟ್ರೈಕ್ ಮಾಡುತ್ತಿದ್ದಾರೆ ಏರೋಪ್ಲೇನ್ ಪೈಲೆಟ್ಸ್ ಸ್ಟ್ರೈಕ್ ಮಾಡುತ್ತಿದ್ದಾರೆ ಯಾರು ತೃಪ್ತಿಯಿಂದಿದ್ದಾರೆ ಎಂದರೆ ಪಾರ್ಟಿಯಲ್ಲಿರ ತಕ್ಕವರು ಸರ್ಕಾರಕ್ಕೆ ಬೆಂಬಲ ಕೊಡತಕ್ಕವರು, ಪೂಜಾರಿಗಳು, ಮಂತ್ರಿಗಳು ಮುಂತಾದವರಿಗೆ ಸುಲಭವಾಗಿ ಸೌಕರ್ಯ ಸಿಕ್ಕುತ ದೆಯೇ ಹೊರತು 90-95 ಭಾಗ ಜನಸಾಮಾನ್ಯರು ವಿಪರೀತ ಕಷ್ಟಪಡುತ್ತಿದ್ದಾರೆ ಆದ್ದರಿಂದ ಸರ್ಕಾರದ ಆಡ ಳಿತ ಸರಿಯಾಗಿಲ್ಲ. ಇದನ್ನು ನೋಡಿದರೆ ಅವರು ತಲೆತಗ್ಗಿಸಬೇಕಾಗಿದೆ. ಯಾವ ವಿಚಾರದಲ್ಲಿಯೂ ನಿಮಗೆ ಬೆನ್ನು ತಟ್ಟುವ ಕೆಲಸ ಆಗಿಲ್ಲ. ರಾಜ್ಯಪಾಲರ ಭಾಷಣ ಒಂದು ಪೊಳ್ಳು ಭಾಷಣವೇ ಹೊರತು ಜನಸಾಮಾನ್ಯರಿಗೆ ಹಿತವನ್ನು ಉಂಟು ಮಾಡುವಂತಹ ಭಾಷಣವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

5-00 P. M.

ಇನ್ನು ದೇಶದಲ್ಲಿರತಕ್ಕಂತಹ ನಿರುದ್ಯೋಗವನ್ನು ಹೋಗಲಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಅನೇಕ ಸ್ಕೀಮುಗಳನ್ನು ಇದರ ಬಗ್ಗೆ ಹಾಕಿಕೊಂಡಿದ್ದಾರೆ. ಇವತ್ತು ವಿದ್ಯಾವಂತರಿಗೆ ಹಾಗೂ ಅವಿದ್ಯಾವಂತರಿಗೂ ಉದ್ಯೋಗಗಳನ್ನು ಒದಗಿಸುವುದರಲ್ಲಿ ವಿಫಲರಾಗಿದ್ದೀರಿ ಉದ್ಯೋಗವಿಲ್ಲದ ಯುವಕರು ಬೀದಿ ಬೀದಿಗಳಲ್ಲಿ ಅಲೆದಾಡುತ್ತಿದ್ದಾರೆ ಇದನ್ನು ನೋಡಿದರೆ ನಿಮಗೆ ನಿರುದ್ಯೋಗ ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಿಲ್ಲವೆಂದು ಕಾಣುತ್ತದೆ. ಇದು ನಿಮಗೆ ಮರ್ಯಾದೆಯನ್ನು ತರುತ್ತದೆಯೇ ಎಂದು ಯೋಚನೆ ಮಾಡಬೇಕು. ಅದರ ಜೊತೆಗೆ ನಮ್ಮ ಉತ್ಪನ್ನದ ಬಗ್ಗೆ ಹೇಳುವುದಾದರೆ, ನಮ್ಮ ದೇಶದಲ್ಲಿ ಉತ್ಪನ್ನ ಕಡಿಮೆಯಾಗಿ, ಜನಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಜನಸಂಖ್ಯೆಯನ್ನು ತಡೆಗಟ್ಟುವುದಕ್ಕೆ ನಿಮ್ಮ ಕೈಯಿಂದ ಸಾಧ್ಯವಾಗಿಲ್ಲ.

ಶ್ರೀ ಎಸ್. ಎಂ ಕೃಷ್ಣ :—ಜನಸಂಖ್ಯೆಯನ್ನು ನಾವು ಯಾವ ರೀತಿಯಲ್ಲಿ ತಡೆಗಟ್ಟಬಹುದು ಎಂಬುದರ ಬಗ್ಗೆ ಏನಾದರೂ ಸಲಹೆಗಳನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಕೆ. ಹೆಚ್. ಹನುಮೇಗೌಡ : ತಮಗೆ ಏಕೆ ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ ? ಒಬ್ಬರಿಗೆ ಒಂದು ಕಾನೂನು, ಇನ್ನೊಬ್ಬರಿಗೆ ಇನ್ನೊಂದು ಕಾನೂನು ಏಕೆ ಮಾಡುತ್ತಿದ್ದೀರಿ ? ಅದನ್ನು ಬದಲಾವಣೆ ಮಾಡಿ ಎಲ್ಲರಿಗೂ ಒಂದೇ ಕಾನೂನು ಮಾಡಿ ಇಷ್ಟಕ್ಕಿಂತ ಹೆಚ್ಚು ಮಕ್ಕಳು ಇರಬಾರದು. ಎಂದು ನಿಮಗೆ ಮಾಡುವುದಕ್ಕಾಗುವುದಿಲ್ಲವೇ ? ಇದನ್ನು ಮಾಡಲು ನಿಮಗೆ ಪಾರ್ಲಿಮೆಂಟ್‌ನಲ್ಲಿ ಮೂರನೆ ಎರಡು ಅಂಶದಷ್ಟು ಮೆಜಾರಿಟಿ ಇಲ್ಲವೇ ? ಅದನ್ನು ಮಾಡಿ.

ಶ್ರೀ ಟಿ. ಆರ್. ಶಾಮಣ್ಣ :—ನೀವು ಕೋಟ್ಯಾಂತರ ರೂಪಾಯಿ ಕುಟುಂಬ ಯೋಜನೆಗೋಸ್ಕರ ಖರ್ಚು ಮಾಡುತ್ತಿದ್ದೀರಿ. ಆದರ ಪ್ರತಿಫಲವಾದರೂ ಏನಾಗಿದೆ ಅದು ಸರಿಯಾಗಿ ವಿನಿಯೋಗವಾಗವಾಗಿ ಅದರ ಫಲ ದೊರೆತಿದೆಯೇ? ಎರಡನೆಯದಾಗಿ ಹಣ ಇರತಕ್ಕವರ ಜನಸಂಖ್ಯೆ ಮಾತ್ರ ಕಡಮೆಯಾಗುತ್ತಿದೆ, ಬಡವರ ಜನಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತಿದೆ. ಆದ್ದರಿಂದ ಈ ಜನಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ತಮ್ಮ ಕೈಯಲ್ಲಿ ಶಕ್ತಿ ಇಲ್ಲವೆಂದು ಹೇಳುತ್ತಿದ್ದೇನೆ. ಉತ್ಪನ ಹೆಚ್ಚದೆ ಬರೇ ಜನಸಂಖ್ಯೆ ಹೆಚ್ಚುತ್ತಾ ಹೋದರೆ ಜನರು ಸುಖದಲ್ಲಿ ಜೀವನವನ್ನಾದರೂ ಹೇಗೆ ತಾನೆ ಮಾಡುತ್ತಾರೆ? ಇವತ್ತು ಕೇಂದ್ರದಲ್ಲಿ ಹಾಗೂ ರಾಜ್ಯದ ತಮ್ಮ ಪಕ್ಷದವರ ಸರ್ಕಾರವೇ ಇರುವುದರಿಂದ ಇದನ್ನ ಏಕೆ ಮಾಡಲಿಕ್ಕಾಗುವುದಿಲ್ಲ. ಇವತ್ತು ಜನರಿಗೆ ಬೆಣ್ಣೆ ಸಿಗದೆ ಶುದ್ಧವಾದ ಎಣ್ಣೆ ಸಹ ಸಿಗುತ್ತಾ ಇಲ್ಲ, ಇವತ್ತು

(ಶ್ರೀ ಟಿ. ಆರ್. ಶಾಮಣ್ಣ)

ನನ್ನ ಸ್ವಂತ ವಿಚಾರ ತೆಗೆದುಕೊಂಡರೆ ನನಗೆ ಏಳು ಜನರು ಮಕ್ಕಳಿದ್ದಾರೆ ಅವರನ್ನು ಸಾಕತಕ್ಕ ಶಕ್ತಿ ನನಗೆ ದೇವರು ಕೊಟ್ಟಿದ್ದಾರೆ. ಆದರೆ ನಿಮಗೆ ದೇಶದ ಮಕ್ಕಳನ್ನು ಸಾಕತಕ್ಕ ಯೋಗ್ಯತೆ ಇಲ್ಲವಲ್ಲಾ ಎಂದು ವ್ಯಥೆ ಪಡುತ್ತಿದ್ದೇನೆ. ನಿಮಗೆ ಎಲ್ಲಿಯ ವರೆಗೆ ಈ ಲಂಚಗುಳಿತನವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯುವರೆಗೆ ನಿಮ್ಮ ಆಡಳಿತ ಸುಭದ್ರವಾಗಿರುವುದಿಲ್ಲ. ಒಂದು ಕಡೆ ನಿಮ ಪಾರ್ಟಿ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ಹಣ ತೆಗೆದುಕೊಳ್ಳುತ್ತಿದ್ದೀರಿ, ಇನ್ನೊಂದು ಕಡೆ ನಿಮಗೆ ಚುನಾವಣೆಗೆ ಹಣ ಬೇಕೆಂದು ಕೋಟ್ಯಾಂತರ ರೂಪಾಯಿ ದೊಡ್ಡದೊಡ್ಡ ಶ್ರೀಮಂತರಿಂದ ವಸೂಲು ಮಾಡುತ್ತಿದ್ದೀರಿ. ನಿಮ್ಮನ್ನು ಯಾರು ಸಹ ಸರಿಯಾಗಿ ನೋಡಿಕೊಳ್ಳದಿದ್ದರೆ ಅವರ ಯಾವ ಕೆಲಸವೂ ಆಗುವುದಿಲ್ಲ. ಇವತ್ತು ಆಡಳಿತ ನಡೆಸತಕ್ಕವರ ಕೈ ಶುದ್ಧವಾಗಿದ್ದರೆ ಅಧಿಕಾರಿಗಳಿಗೆ ಸಹಸ್ವಲ್ಪ ಹೆದರಿಕೆ ಬರುತ್ತದೆ ಅದು ಬಿಟ್ಟು ನೀವು ಅನೇಕ ರೀತಿಯಲ್ಲಿ ಲಂಚ ಬೆಳೆಯುವುದಕ್ಕೆ ಅವಕಾಶ ಕೊಟ್ಟರೆ ಯಾವ ಆಡಳಿತವಾದರೂ ಸರಿಯಾಗಿ ನಡೆಯುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಆದ್ದರಿಂದ ಎಲ್ಲಿಯುವರೆಗೆ ಲಂಚದ ಹಾವಳಿ ತಪ್ಪುವುದಿಲ್ಲವೋ ಅಲ್ಲಿಯುವರೆಗೆ ನಿಮ್ಮ ಆಡಳಿತವನ್ನು ಸಮರ್ಪಕವಾಗಿ ನಡೆಸುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ ಇದರಲ್ಲಿ ತಾವು ಪೂರ್ಣವಾಗಿ ವಿಫಲರಾಗಿದ್ದೀರಿ. ಲಂಚ ತೆಗೆದುಕೊಳ್ಳುವ ಜನರು ಅನೇಕರು ನಿಮ್ಮಲ್ಲೇ ಇರುವುದರಿಂದ ಇದನ್ನು ತಡೆಗಟ್ಟುವುದಕ್ಕೆ ನಿಮಗೆ ಯಾವ ಮೋರಲ್ ಬೈಂಡಿಂಗ್ ಇದೆ ಎಂದು ಕೇಳುತ್ತೇನೆ.

ಇನ್ನು ಸಾಮಾನುಗಳ ಬೆಲೆಗಳು ಹೆಚ್ಚು ಏರುವುದಕ್ಕೆ ಕಾರಣ ನಿಮ್ಮ ಅಂತರ್ ಜಿಲ್ಲಾ ಸಾಗಾಣಿಕೆ ನಿರ್ಬಂಧ ನಮ್ಮ ರಾಜ್ಯದಿಂದ ಹೊರಗಡೆ ರಾಜ್ಯಗಳಿಗೆ ಹೋಗುವಂತಹ ಆಹಾರ ಧಾನ್ಯಗಳನ್ನು ತಡೆಗಟ್ಟುವುದಕ್ಕೆ ನೀವು ವಿಫಲರಾಗಿದ್ದೀರಿ. ಅದರ ಬದಲು ನೀವು ಜಿಲ್ಲೆಯಿಂದ ಜಿಲ್ಲೆಗೆ ಹೋಗುವುದನ್ನು ನಿಲ್ಲಿಸಿದ್ದೀರಿ. ಇವತ್ತು ವ್ಯಾಪಾರಸ್ಥರು ಹೊರಗಡೆ ಜಿಲ್ಲೆಯಿಂದ ಆಹಾರಧಾನ್ಯಗಳನ್ನು ಇಲ್ಲಿಗೆ ತೆಗೆದುಕೊಂಡು ಬರಬೇಕಾದರೆ ಸಾವಿರಾರು ರೂಪಾಯಿ ಲಂಚ ಕೊಡಬೇಕಾಗುತ್ತದೆ. ಹಾಗೆ ಲಂಚ ಕೊಟ್ಟ ಹಣವನ್ನು ತುಂಬಿಸಿಕೊಳ್ಳಲು ಆಹಾರ ಪದಾರ್ಥಗಳ ಬೆಲೆಯನ್ನು ವ್ಯಾಪಾರಸ್ಥರು ಹೆಚ್ಚಿಸುತ್ತಾರೆ. ಆದ್ದರಿಂದ ಈ ಅಂತರ್ ಜಿಲ್ಲಾ ಸಾಗಣಿಕೆ ನಿರ್ಬಂಧ ಏನಿದೆ ಅದನ್ನು ತೆಗೆದು ಹಾಕಿದರೆ ಸಾಕಷ್ಟು ಆಹಾರಧಾನ್ಯಗಳು ಜಿಲ್ಲೆಯಿಂದ ಜಿಲ್ಲೆಗೆ ಸಾಗಿ ಬೆಲೆಗಳು ಕಡಿಮೆಯಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ತಮ್ಮ ನೀತಿ ಪ್ರಕಾರ ತಾಲ್ಲೂಕು ಬೋರ್ಡು ಚುನಾವಣೆಗಳನ್ನು ಬರಗಾಲ ಪರಿಸ್ಥಿತಿ ಇರುವುದರಿಂದ ನಿಲ್ಲಿಸಿದ್ದೀರಿ. ಆದರೆ ಗುಜರಾತಿನ ಪರಿಸ್ಥಿತಿ ನಿಮಗೂ ಬರುತ್ತದೆ ಎಂಬ ಭೀತಿ ಇನ್ನೊಂದು ಕಡೆ ಇದೆ. ಚುನಾವಣೆ ಮಾಡುವುದರಿಂದ ನಮ್ಮ ತೇಜಸ್ಸು ಕಡಿಮೆಯಾಗುತ್ತದೆ ಎಂದು ಚುನಾವಣೆಯನ್ನು ಮಾಡುತ್ತಾ ಇಲ್ಲ. ಇದು ಸರಿಯಾದ ನೀತಿಯಲ್ಲ.

ಹಿಂದೆ ಮನೆಗಳನ್ನು ನಾನು ಕಂಟ್ರಾಕ್ಟ್ ಮೇಲೆ ಕಟ್ಟಿಸುತ್ತಿದ್ದೆ. ಆಗ ಒಂದು ಚದರ ಮನೆಗೆ 1200 ರೂಪಾಯಿ ಪ್ರಕಾರ ಕಟ್ಟಿಸುವುದಕ್ಕಾಗುತ್ತಿತ್ತು. ಆದರೆ ಇವೊತ್ತಿನ ದಿವಸ ಅದೇ ಮನೆಯನ್ನು ಚದರಕ್ಕೆ 5000 ರೂಪಾಯಿಯಂತೆ ಸಹ ಸರಿಯಾಗಿ ಕಟ್ಟಿಸುವುದಕ್ಕಾಗುವುದಿಲ್ಲ. ತಮ್ಮ ಆಡಳಿತ ಬಂದ ಮೇಲೆ ಈ ರೀತಿಯ ಒಂದು ಬೆಲೆ ಏರಿಕೆಯಾಗಿದೆ. ಇದು ದುರದೃಷ್ಟಕರವೆಂದು ಹೇಳಬೇಕಾಗುತ ದೆ

ಇದಕ್ಕೆ ಯಾರು ಹೊಣೆಗಾರರು ಎಂಬುದನ್ನು ಯೋಚನೆ ಮಾಡಬೇಕು. ರಾಜ್ಯಪಾಲರ ಭಾಷಣದಲ್ಲಿ ಹೌಸಿಂಗ್ ಬೋರ್ಡಿನ ಮೂಲಕ ಅನೇಕರಿಗೆ ಮನೆ ಕಟ್ಟುವುದಕ್ಕೆ ಸಹಾಯ ಮಾಡಬೇಕೆಂದಿದೆ. ಸರ್ಕಾರದ ಒಂದು ಧೋರಣೆಯಿಂದ ಈ ಹೌಸಿಂಗ್ ಬೋರ್ಡಿನಲ್ಲಿ ಸಾಲ ಸಿಗುವುದಿಲ್ಲ. ಅದರ ಮುಖಾಂತರ ಮನೆ ಕಟ್ಟಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಜನಗಳಿಗೆ ಬಹಳ ಕಷ್ಟವಾಗಿದೆ. ಇವರ ಕಾಲದಲ್ಲಿ ಯಾವುದಕ್ಕೂ ಅಭಾವವಿದ್ದರೂ ಕಳ್ಳಭಟ್ಟಿಗೆ ಅಭಾವವಿಲ್ಲ. ಜೂಜಾಡುವುದಕ್ಕೆ ಅಭಾವವಿಲ್ಲ. ಲಂಚ ತೆಗೆದುಕೊಳ್ಳುವುದಕ್ಕೆ ಅಭಾವವಿಲ್ಲ. ಆದರೆ ಮಿಕ್ಕೆಲ್ಲದ್ದಕ್ಕೂ ಅಭಾವವಿದೆ. ಇಂತಹ ಒಂದು ಆಡಳಿತ ನಡೆಸುವುದರಿಂದ ಜನಗಳಿಗೆ ಯಾವರೀತಿ ಸುಖಸೌಕರ್ಯವಿದೆ ? ಕಳ್ಳಭಟ್ಟಿ ಸಾರಾಯಿನಿಂದ ಜನರು ಸಾಯುತ್ತಿದ್ದಾರೆ. ಹೆಂಡ ಮತ್ತು ಸಾರಾಯಿಗಳಿಂದ ಜನಗಳಿಗೆ ವಿಷ ಕುಡಿಸಿ ಮಾರಾಟಮಾಡುವುದಕ್ಕೆ ಅವಕಾಶಮಾಡುತ್ತಿದ್ದೀರಿ. ಇವರ ನೈತಿಕಮಟ್ಟ ಸರಿಯೇ ? ಜನಗಳ ಆರೋಗ್ಯಭಾಗ್ಯ ಕೆಟ್ಟುಹೋಗುತ್ತಿದೆ. ಬಡವರ ರಕ್ತ ಹೀರುವುದು ಒಂದು ಕಡೆ ಆಗುತ್ತಿದೆ. ಆದ್ದರಿಂದ ಜನರು ಎಲ್ಲ ರೀತಿನಲ್ಲಿಯೂ ಕಷ್ಟಪಡುತ್ತಿದ್ದಾರೆ. ನಮ್ಮ ಸರ್ಕಾರದ ಆಡಳಿತ ಅಷ್ಟು ಚೆನ್ನಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಜವಾಬು ಕೊಡುವಾಗ ಮಾನ್ಯ ಶ್ರೀ ನಾಯ್ಡು ಅವರು ಜನಗಳಿಗೆ ಹಿತವಾಗಿರತಕ್ಕ ಕೆಲಸಗಳನ್ನು ಸರ್ಕಾರ ಏನೇನು ಮಾಡಿದೆಯೆಂದು ಹೇಳುವುದಕ್ಕೆ ಖಾಡಿತವಾಗಿ ವಿಫಲರಾಗಿದ್ದಾರೆ. ಇವರು ಆಹಾರದಲ್ಲಿ ಕಲಬೆರಿಕೆ ಆಗುತ್ತಿರುವುದನ್ನು ತಪ್ಪಿಸುವುದಕ್ಕೆ ಶಕ್ತಿಯುತರಾಗಿದ್ದಾರೆಯೇ, ಬೆಣ್ಣೆ, ಕಾಫಿಪುಡಿ ಮುಂತಾದುವುಗಳಲ್ಲಿ ಆಡಲ್ಟರೇಷನ್ ಏಕೆ, ಕಲ್ಲುಗಳನ್ನು ಸೇರಿಸಿ ಆಹಾರಪದಾರ್ಥಗಳನ್ನು ಮಾರುವುದೇಕೆ, ಅದನ್ನು ತಡೆಗಟ್ಟುವುದಕ್ಕೆ ಇವರು ಸಮರ್ಥರಲ್ಲವೇ ?

(ಶ್ರೀ ಟಿ. ಆರ್. ಶಾಮಣ್ಣ)

ಇಂತಹ ಪದಾರ್ಥಗಳು ಜನಗಳಿಗೆ ಈಗ ದೊರೆಯುತ್ತಿವೆ. ಇದು ಸರಿಯಲ್ಲ. ಇಂಥಾದ್ದನ್ನೆಲ್ಲಾ ನಿಮ್ಮ ಸ್ವಚ್ಛ ಆಡಳಿತ ಮುಖಾಂತರ ಸರಿಪಡಿಸಬೇಕು ಇವರು ಒಂದು ಆಡಳಿತದ ಧೋರಣೆಯಿಂದ ಸರ್ಕಾರದ ಖರ್ಚು ಯದ್ವಾತದ್ವಾ ಆಗುತ್ತಿದೆ. ಖಜಾನೆ ಬರಿದಾಗುವ ಪರಿಸ್ಥಿತಿ ಮುಟ್ಟುತ್ತಿದೆ. ನೌಕರರಿಗೆ ಸಂಬಳ ಕೊಡಲು ದುಡ್ಡು ಸಾಕಾಗುತ್ತಿಲ್ಲ ಎಂಬ ಕೂಗು ಸಹ ಬಿತ್ತು. ಅನೇಕ ಬಿಲ್‌ಗಳು ಇನ್ನೂ ಪಾಸ್ ಆಗಿಯೇ ಇಲ್ಲ. ಇನ್ನು ನಮ್ಮ ಬಡ್ಜೆಟ್ಟನ್ನು ತೆಗೆದುಕೊಂಡು ನೋಡಿದರೆ, ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿರುವುದೇ ಒಂದು, ಖರ್ಚುಮಾಡುತ್ತಾ ಇರುವುದೇ ಒಂದು, ಎಲ್ಲ ವಿಧವಾದ ನಿರ್ಮಾಣ ಕಾರ್ಯಗಳು ನಿಂತುಹೋಗಿವೆ. ನೌಕರರಿಗೆ ಕೊಡಬೇಕಾದ ಸಂಬಳ ಸಾರಿಗೆಗಳಿಗೆ ಇರತಕ್ಕ ಹಣ ಸಾಕಾಗುತ್ತಾ ಇಲ್ಲ. ಆದರೆ ಜನಗಳ ಹಿತರಕ್ಷಣೆಗೋಸ್ಕರ ಹಣದ ಖರ್ಚು ಸರಿಯಾಗಿ ಆಗುತ್ತಾ ಇಲ್ಲ. ಇನ್ನು ಉಪಾಧ್ಯಾಯರ ಬೇಡಿಕೆಗಳ ಬಗ್ಗೆ ಈಗಾಗಲೇ ಒಂದು ಅಂದೋಳನವನ್ನು ಅವರು ಮಾಡಿದ್ದಾರೆ. ಸರ್ಕಾರದವರು ಅವರ ಬೇಡಿಕೆಗಳ ಬಗ್ಗೆ ಇದುವರೆಗೆ ಯಾವ ಒಂದು ಧೃಡವಾದ ನಿಲುವನ್ನಾಗಲೀ, ತೀರ್ಮಾನವನ್ನಾಗಲೀ ತೆಗೆದು ಕೊಂಡಿದ್ದರೆ, ಇಂತಹ ಅಂದೋಳನಗಳು ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲ. ಇವರ ಒಂದು ಧೋರಣೆಯಿಂದ ಕೆಲವು ಸಂದರ್ಭಗಳಲ್ಲಿ ಸೋಲತಕ್ಕ ಮನೋಭಾವ ಉಂಟಾಗಿ ಆಡಳಿತದಲ್ಲಿ ಒಂದು ಹಿಡಿತ ಇಲ್ಲದಿರುವುದಾಗಿದೆ ಆಡಳಿತವನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಯಾವತ್ತೂ ಪ್ರಯತ್ನ ಪಟ್ಟಿಲ್ಲ. ಅದರ ಜೊತೆಗೆ ಅವರ ಪಕ್ಷದಲ್ಲಿ ಬೇಕಾದಷ್ಟು ಮೆಜಾರಿಟಿ ಇದೆಯೆಂದು ಹೇಳಿದರೂ ಒಳ್ಳೆಯ ನೀತಿಯಿಂದ ನಡೆದುಕೊಂಡು ಹೋಗುವುದಕ್ಕೆ ಬೆಂಬಲ ಇಲ್ಲದೇ ಇರುವುದು ಇಷ್ಟೊಂದು ದುರಾಡಳಿತಕ್ಕೆ ಕಾರಣವೆಂದು ನಾನು ಕಡ್ಡಾಯವಾಗಿ ಹೇಳಬೇಕಾಗಿದೆ. ಈ ದೇಶದ ಹಿತದೃಷ್ಟಿಯಿಂದಾದರೂ ಇವರ ಆಡಳಿತ ನಿಜವಾಗಿ ಸ್ವಚ್ಛವಾಗಿರಬೇಕಾಗಿದೆ. ಯಾವಾಗಲೂ ನಿಮ್ಮ ಮನೆ ಸ್ವಚ್ಛವಾಗಿರಬೇಕು. ಎಲ್ಲಿಯವರೆಗೆ ನಿಮ್ಮ ಮನೆಯಲ್ಲಿ ಕೊಳೆಯಾಗಿ ವಾಸನೆ ಇರುತ್ತದೋ ಅಲ್ಲಿಯವರೆಗೆ ನೀವು ಸರಿಯಾದ ಆಡಳಿತವನ್ನು ಈ ದೇಶಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನು ಸರ್ಕಾರದ ಆಸ್ಪತ್ರೆಗಳಿಗೆ ಹೋದರೆ ಅಲ್ಲಿ ಸಾಕಷ್ಟು ಔಷಧಿಗಳಿಲ್ಲ. ಇದರಿಂದ ಬಡವರಿಗೆ ಯಾವ ರೀತಿಯಲ್ಲಿ ಚಿಕಿತ್ಸೆ ಸಿಗಬೇಕು ? ಜನರಿಗೆ ಸಾಕಷ್ಟು ಸೌಲಭ್ಯಗಳನ್ನು ಈಗ ಅನೇಕ ಆಸ್ಪತ್ರೆಗಳಲ್ಲಿ ಒದಗಿಸುತ್ತಾ ಇಲ್ಲ. ಈ ಒಂದು ಕಾರ್ಯದಲ್ಲಿ ಇವರು ವಿಫಲರಾಗಿದ್ದಾರೆ. ಇದಲ್ಲದೆ ಇತ್ತೀಚೆಗೆ ಅನೇಕ ಮಹಿಳಾ ಸಮಾಜಗಳಿಗೆ ಕೊಡುತ್ತಿದ್ದಂಥ ಗ್ರಾಂಟುಗಳನ್ನು ಈಗ ನಿಲ್ಲಿಸಿದ್ದಾರೆ. ಸರ್ಕಾರದಲ್ಲಿ ತಮ್ಮ ಪಕ್ಷವೇ ಈಗಿನ ಒಂದು ಆಡಳಿತದಲ್ಲಿ ಇರಬೇಕೆಂಬ ಉದ್ದೇಶವಿದ್ದ ಪಕ್ಷದಲ್ಲಿ ನಿಜವಾಗಿಯೂ ಆಡಳಿತವನ್ನು ಸ್ವಚ್ಛವಾಗಿ ಸರಿಯಾದ ರೀತಿಯಲ್ಲಿ ನಡೆಸುವ ಹಾಗೆ

ಪ್ರಯತ್ನಪಡಬೇಕು. ಜನ ಈಗಾಗಲೇ ಇವರ ಒಂದು ಆಡಳಿತಕ್ಕೆ ಬೇಸತ್ತಿದ್ದಾರೆ. ಗುಜರಾತ್ ಮುಂತಾದ ಕಡೆಗಳಲ್ಲಿ ನಡೆಯುತ್ತಿರುವ ಹಾಗೆ ಇಲ್ಲಿನ ಜನ ರೊಚ್ಚಿಗೆದ್ದರೆ ಆಗ ಇವರು ಬಹಳ ಕಷ್ಟಪಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಬೇಕಾಗಿದೆ. ನಿಮ್ಮ ಪಕ್ಷವನ್ನು ಬೆಳೆಸುವುದರಲ್ಲಿ ವಿರೋಧ ಪಕ್ಷವನ್ನು ಸಾಯಿಸುವುದಕ್ಕೆ ಪ್ರಯತ್ನಪಡುತ್ತಿದ್ದೀರಿ. ಇದರಿಂದ ಡೆಮೋಕ್ರಸಿಗೇ ಪೆಟ್ಟು ತರುತ್ತದೆ. ಸರ್ಕಾರವನ್ನು ಆಳಿಸುವುದಕ್ಕೂ ಮತ್ತು ಉಳಿಸುವುದಕ್ಕೂ ನೀವೇ ಮುಂದೆ ಕಾರಣರಾಗುತ್ತೀರಿ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ನಿಜವಾಗಿ ಈಗ ಇವರ ಆಡಳಿತ ಕುಲಗೆಟ್ಟು ಹೋಗಿದೆ. ವಿರೋಧಪಕ್ಷವನ್ನು ನಿರ್ಮೂಲಮಾಡುವುದಕ್ಕೆ ಹೊರಟು ಮತ್ತೊಂದು ಕಡೆ ಅನೀತಿಯಿಂದ ಆಡಳಿತವನ್ನು ನಡೆಸುತ್ತಾ ಇದ್ದೀರಿ. ಜನಗಳ ಮುಂದೆ ಒಂದು ಕಡೆ ಭೂತ, ಮತ್ತೊಂದು ಕಡೆ ಬೆಂಕಿ ತೋರಿಸುತ್ತಿದ್ದೀರಿ ಅಂತೂ ಒಟ್ಟಿನಲ್ಲಿ ಜನಗಳಿಗೆ ಅನ್ಯಾಯಮಾಡುತ್ತಿದ್ದಾರೆ ಇವರ ಕೈಲಿ ಜನಗಳ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಸ್ವಚ್ಛ ಆಡಳಿತ ಕೊಡುವುದಕ್ಕೆ ಈ ಎರಡು ವರ್ಷಗಳಲ್ಲಿ ಪೂರ್ತಿಯಾಗಿ ನಿಷ್ಫಲರಾಗಿದ್ದಾರೆ. ಕುಲಗೆಟ್ಟ ಆಡಳಿತವನ್ನು ಕೊಟ್ಟಿದ್ದಾರೆ. ಸ್ವಚ್ಛವಾದ ಆಡಳಿತವನ್ನು ಕೊಟ್ಟಿಲ್ಲ. ಜನಗಳು ಸುಖವಾಗಿರತಕ್ಕ ಆಡಳಿತವನ್ನು ಕೊಟ್ಟಿಲ್ಲ. ಈಗಿರುವ ಸಂದರ್ಭದಲ್ಲಿ ಜನಸಾಮಾನ್ಯರು ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ ಅದರಲ್ಲಿಯೂ ಮಧ್ಯಮವರ್ಗದವರು ಪಡುತ್ತಿರುವ ಕಷ್ಟ ಅಷ್ಟಿಷ್ಟಲ್ಲ. ಆದ್ದರಿಂದ ಈಗಲಾದರೂ ಇವರು ಬೇಗ ಕಣ್ಣು ತೆರೆದು ಜನಗಳ ಹಿತರಕ್ಷಣೆಗಾಗಿ ಚೆನ್ನಾಗಿ ಒಳ್ಳೆಯ ಕೆಲಸಗಳನ್ನು ಅವರ ಅನುಕೂಲಕ್ಕಾಗಿ ಮಾಡದೇ ಇದ್ದ ಪಕ್ಷದಲ್ಲಿ ಖಂಡಿತವಾಗಿ ಇವರು ಈ ರಾಜ್ಯದ ಜನರಿಗೆ ದ್ರೋಹ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಯಾವುದೋ ಒಂದು ಸಬೂಬು ಹೇಳುವುದು, ಬ್ಯಾಂಕ್ ನ್ಯಾಷನಲೈಜೇಷನ್ ಮಾಡುತ್ತೇವೆ. ಬಂಗಾಳದ ನಿರಾಶ್ರಿತರಿಗೆ ಸಹಾಯ ಮಾಡುತ್ತೇವೆಂದು ಹೇಳಿ ಓಟುಗಳನ್ನು ಗಳಿಸುವ ಉದ್ದೇಶದಿಂದ ಯಾವುದೋ ಸಂದರ್ಭ ಹುಡುಕಿ ಆ ಸಂದರ್ಭವನ್ನು ಇವರ ಒಂದು ಅನುಕೂಲಕ್ಕೋಸ್ಕರ ಉಪಯೋಗಿಸುತ್ತಿದ್ದಾರೆ. ಬಹಳ ದಿನಗಳು ಈ ರೀತಿ ನಡೆಯುವುದಿಲ್ಲ. ಜನಗಳ ಹಿತದೃಷ್ಟಿ ನಿಮ್ಮ ಮನಸ್ಸಿನಲ್ಲಿದ್ದ ಪಕ್ಷದಲ್ಲಿ ಈ ದಿನದಿಂದಲೇ ಸ್ವಚ್ಛವಾದ ಆಡಳಿತವನ್ನು ಹಾಗೂ ಶುಭ್ರವಾದ ಆಡಳಿತವನ್ನು ಜನಗಳಿಗೆ ಉಪಯೋಗವಾಗುವಂತೆ ಕೊಡಿ. ಈಗ ಅದರಲ್ಲಿ ಇವರು ನಿಷ್ಫಲರಾಗಿದ್ದಾರೆಂದು ನಾನು ಧೈರ್ಯವಾಗಿ ಹೇಳುತ್ತೇನೆ ಯಾವುದೋ ರೀತಿಯಲ್ಲಿ ನಿಮ್ಮ ಸ್ಲೋಗನ್ಸ್ ಕೂಗಿಕೊಂಡು ಆಡಳಿತವನ್ನು ನಡೆಸುತ್ತೇವೆಂದು ಹೇಳುವ ಕಾಲ ಹೋಯಿತು. ಆದ್ದರಿಂದ ಈ ದಿನ ಸ್ವಚ್ಛ ಆಡಳಿತ ಬೇಕು. ಅದನ್ನು ಮಾಡದೇ ಕೇವಲ ರಾಜ್ಯಪಾಲರ ಕೈಲಿ ಅವರ ಒಂದು ಭಾಷಣವನ್ನು ಓದಿಸುವುದರಿಂದ ದೇಶಕ್ಕೇ ಆಗಲಿ, ಜನಗಳಿಗೇ ಆಗಲೀ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಒಂದು ಕಡೆ ಕನ್ನಡ ಆಡಳಿತ ಬಾಷೆ ಮಾಡಬೇಕೆಂದು ಹೇಳುತ್ತಾರೆ.

(ಶ್ರೀ ಟಿ. ಆರ್. ಶಾಮಣ್ಣ)

ಆದರೆ ಅದಕ್ಕೆ ಇವರು ಏನು ಮಾಡುತ್ತಿದ್ದಾರೆಂಬ ಬಗ್ಗೆ ಯಾವ ಒಂದು ಕ್ರಮವೂ ಸರಿಯಾಗಿ ನಡೆದಿಲ್ಲ. ಕನ್ನಡ ಆಡಳಿತ ಭಾಷೆ ಮಾಡಬೇಕಾದರೆ ಬಹು ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಕನ್ನಡ ಟೈಪ್‌ರೈಟರುಗಳು ಬೇಕು. ಎಷ್ಟು ದುಡ್ಡಾದರೂ ಕೊಡುತ್ತೇವೆಂದರೆ, ಈಗ ಕನ್ನಡ ಟೈಪ್‌ರೈಟರ್ಸ್ ಸಿಗುತ್ತಿಲ್ಲ. ಈ ಸರ್ಕಾರದಲ್ಲಿ ಎಷ್ಟು ಜನ ಅಧಿಕಾರಿಗಳು ಕನ್ನಡದಲ್ಲಿಯೇ ಆಫೀಸಿನ ವ್ಯವಹಾರವನ್ನು ಈಗ ಮಾಡುತ್ತಿದ್ದಾರೆಂಬುದಕ್ಕೆ ನನಗೇ ಈ ಸರ್ಕಾರ ಅಂಕಿ ಅಂಶಗಳನ್ನು ಕೊಡಲಿ ಸಾಕು. ಕನ್ನಡ ಆಡಳಿತ ಭಾಷೆಯಾಗಬೇಕೆಂಬುದು ಬರೀ ಪೇಪರಿನಲ್ಲಿದೆಯೇ ಹೊರತು ಕನ್ನಡದ ಬೆಳವಣಿಗೆಗಾಗಿ ಹಾಗೂ ಕನ್ನಡ ಆಡಳಿತ ಭಾಷೆ ಮಾಡುವುದಕ್ಕೋಸ್ಕರ ನಿಜವಾಗಿ ಇವರು ಮನಸ್ಸಿಟ್ಟು ಕೆಲಸಮಾಡುತ್ತಾ ಇಲ್ಲವೆಂದು ನಾನು ಹೇಳಬೇಕಾಗಿದೆ. ಕನ್ನಡ ಟೈಪರ್‌ರೈಟರ್ಸ್ ಅಭಾವದಿಂದ ಅನೇಕರಿಗೆ ಬಹಳ ಕಷ್ಟವಾಗುತ್ತಿದೆ. ಇವರ ಕೈಲಿ ಅದನ್ನು ತರಿಸುವುದಕ್ಕೆ ಆಗುವುದಿಲ್ಲವೆಂದರೆ, ಯಾವುದಾದರೂ ಕೊಲ್ಯಾಬೊರೇಷನ್ನಿನಿಂದ ಕನ್ನಡ ಟೈಪರ್‌ರೈಟರ್ಸನ್ನು ತಯಾರುಮಾಡುವ ಹಾಗೆ ಇಲ್ಲಿಯೇ ಷುರುಮಾಡಬೇಕೆಂಬುದಾಗಿ ನಾನು ಸಲಹೆ ಮಾಡುತ್ತೇನೆ. ಈ ಒಂದು ಹೊಸಯುಗದಲ್ಲಿ ಎಲ್ಲ ಆಫೀಸುಗಳಿಗೂ ಕನ್ನಡ ಟೈಪರ್‌ರೈಟರ್ಸ್ ಬೇಕೇ ಬೇಕು. ಅವು ಬಹುಮುಖ್ಯವಾಗಿ ನಮ್ಮ ಸರ್ಕಾರದ ಪ್ರತಿಯೊಂದು ಇಲಾಖೆಗೂ ಬೇಕಾಗಿವೆ. ಒಂದು ವರ್ಷದಲ್ಲಿ ಸುಮಾರು 300 ಕನ್ನಡ ಟೈಪರ್‌ರೈಟರ್‌ಗಳನ್ನು ಒದಗಿಸತಕ್ಕ ಫ್ಯಾಕ್ಟರಿಗಳು ಇನ್ನು ಏಕೋ ಮುಂದೆ ಬಂದಿಲ್ಲ. ಆದ್ದರಿಂದ ಸರ್ಕಾರದವರು ಈಗಲಾದರೂ ಕನ್ನಡ ಟೈಪರ್‌ರೈಟರ್‌ಗಳನ್ನು ಹೆಚ್ಚು ಹೆಚ್ಚಿಗೆ ತಯಾರುಮಾಡತಕ್ಕ ಫ್ಯಾಕ್ಟರಿಗಳನ್ನು ಪ್ರಾರಂಭಿಸಲು ಕೂಡಲೇ ಗಮನಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಒಟ್ಟಿನಲ್ಲಿ, ರಾಜ್ಯಪಾಲರ ಭಾಷಣ ಬಹಳವಾಗಿ ನಿರಾಶೆಯಾಗಿರುವುದರಿಂದ ಈ ದೇಶದ ಜನರಿಗೆ ಅದರಿಂದೇನೂ ಪ್ರಯೋಜನವಾಗದೇ ಇರುವುದರಿಂದ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ಬಗ್ಗೆ ಪೂರ್ಣವಾಗಿ ನನ್ನ ವಿರೋಧವನ್ನು ವ್ಯಕ್ತಪಡಿಸಿ, ನನಗೆ ಈ ಸಂದರ್ಭದಲ್ಲಿ ಈ ನಾಲ್ಕಾರು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ (ಹಿರೆಕೆರೂರು) :—ಸನ್ಮಾನ್ಯ ಅಧ್ಯಕ್ಷಣಿಯವರೇ: ಕಳೆದ ಇದೇ ತಿಂಗಳ 25ನೇ ತಾರೀಖಿನಲ್ಲಿ ಮಾನ್ಯ ರಾಜ್ಯಪಾಲರು ಶಾಸನ ಸಭೆಗಳ ಜಂಟೀ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣದ ಬಗ್ಗೆ ಅವರಿಗೆ ವಂದನೆಗಳನ್ನರ್ಪಿಸತಕ್ಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ನೀಡುತ್ತ ಎರಡು ಮಾತುಗಳನ್ನಾಡುವುದಕ್ಕೆ ನಿಂತಿದ್ದೇನೆ.

ನಮ್ಮ ಸರ್ಕಾರ ಆಡಳಿತಕ್ಕೆ ಬರುವುದಕ್ಕೆ ಮುನ್ನ ಹಿಂದಿನ ಸರ್ಕಾರ ಮಾಡಿದ್ದ ಅನೇಕ ಕೋಟಿ ರೂಪಾಯಿಗಳ ಓವರ್ ಡ್ರಾಫ್ಟನ್ನು ತೀರಿಸಿ, ರಾಜ್ಯದಲ್ಲಿ ಅನೇಕ ಕಡೆ ಅನೇಕ ಉತ್ತಮ ಕೆಲಸಗಳನ್ನು ಮಾಡಿದೆ. ಕಳೆದ ವರ್ಷ ರಾಜ್ಯದಲ್ಲಿ ಅನೇಕ ಕಡೆ ಭೀಕರ ಕ್ಷಾಮ ತಲೆದೋರಿದ್ದ ಕಾರಣ ನಮ್ಮ ಸರ್ಕಾರ ಅದರ ನಿವಾರಣೆಗಾಗಿ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡ ಬೇಕಾಯಿತು. ಹಾಗೆ ಹಲವಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ರಾಜ್ಯದ ನಾನಾ ಭಾಗದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿದೆ. ಮುಂದೆ ರಾಜ್ಯದಲ್ಲಿ ಇಂಥ ಸುಧಾರಣೆಗಳನ್ನು ತರುವುದಕ್ಕೆ ರಾಜ್ಯಪಾಲರ ಭಾಷಣ ಒಂದು ದಾರಿದೀಪದಂತಿದೆ ಹೀಗೆ ಅವರ ಭಾಷಣ ಅನೇಕ ವಿಚಾರಗಳಲ್ಲಿ ಒಂದು ಆಶಾದಾಯಕವಾದ ಭಾಷಣ ವಾಗಿದೆ. ರಾಜ್ಯದಲ್ಲಿ ತಲೆದೋರಿದ್ದ ಅನಾವೃಷ್ಟಿಯ ಬಗ್ಗೆ ಸರ್ಕಾರ ಅನೇಕ ಯೋಜನೆಗಳನ್ನು ಕೈಗೊಂಡು ಜನರಿಗೆ ಯೋಗ್ಯವೇಳೆಗೆ ಅನೇಕ ಸೌಲತ್ತು ಸೌಲಭ್ಯಗಳನ್ನು ಒದಗಿಸಿದೆ. ಇಂಥ ಉತ್ತಮ ಕೆಲಸಗಳನ್ನು ಮಾಡಿರುವುದಕ್ಕೆ ನಮ್ಮ ಸರ್ಕಾರವನ್ನು ನಾವು ಶ್ಲಾಘನೆ ಮಾಡಬೇಕಾಗಿದೆ. ಈ ದಿಶೆಯಲ್ಲಿ ಸರ್ಕಾರವನ್ನು ಎಷ್ಟು ಹೊಗಳಿದರೂ ತೀರದು.

ಇನ್ನು ರಾಜ್ಯದಲ್ಲಿ ಶಾಸನ ಸುವ್ಯವಸ್ಥೆಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಎಲ್ಲೂ ಅಂಥ ದುರ್ಘಟನೆಗಳು ನಡೆದಿಲ್ಲ. ರಾಜ್ಯದಲ್ಲಿ ಮುಂದಕ್ಕೂ ಇದೇ ರೀತಿಯ ಉತ್ತಮ ಶಾಸನ ವ್ಯವಸ್ಥೆ ಇರುವುದಾಗಿ ಅವರು ಜನತೆಗೆ ಭರವಸೆಯನ್ನು ಕೊಟ್ಟಿದ್ದಾರೆ.

ಹಾಗೇ ರಾಜ್ಯದಲ್ಲಿ ಕನ್ನಡವನ್ನು ಅಧಿಕೃತ ಆಡಳಿತ ಭಾಷೆಯನ್ನಾಗಿ ಮಾಡಲು ಅನೇಕ ಸುವ್ಯವಸ್ಥೆಗಳನ್ನು ಏರ್ಪಡಿಸಿದ್ದಾರೆ. ರಾಜ್ಯದಲ್ಲಿ ಶೀಘ್ರವಾಗಿ ಭೂಸುಧಾರಣೆಯ ಮತ್ತು ಇನಾಂ ರದ್ದಿಯಾತಿ ಶಾಸನಗಳನ್ನು ಜಾರಿಗೆ ತಂದು ಭೂಹೀನರಿಗೆ ಭೂಮಿ ಹಂಚತಕ್ಕ ಒಂದು ಸುವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಹಾಗೇ ಜನರಿಗೆ ಆಹಾರಧಾನ್ಯಗಳನ್ನು ಶೇಖರಿಸಿ ಅದನ್ನು ವಿತರಣೆಮಾಡಲು ಲೆವಿ ಮೂಲಕ ಧಾನ್ಯ ಸಂಗ್ರಹಣೆ ಕಾರ್ಯ ಯಶಸ್ವಿಯಾಗಿ ನಡೆದಿದೆ. ಲೆವಿ ಮೂಲಕ ದಾನ್ಯ ಸಂಗ್ರಹಣೆ ಕಾರ್ಯ ಯಶಸ್ವಿಯಾಗಿ ನಡೆದಿದೆ. ಇದರಿಂದ ರಾಜ್ಯದಲ್ಲಿ ಆಹಾರದ ಬಿಕ್ಕಟ್ಟು ತಲೆದೋರಲಾರದೆಂದು ನಾವು ಭಾವಿಸಬಹುದು, ಸರ್ಕಾರ ಈ ದಿಶೆಯಲ್ಲಿ ಸರ್ವಪ್ರಯತ್ನಗಳನ್ನೂ ನಡೆಸಿದೆ. ಆದರೆ ಅಲ್ಲಲ್ಲೇ ಅಧಿಕಾರಿಗಳ ಹಾವಳಿಯಿಂದ ಈ ಕಾಳಿನ ವಿತರಣೆ ಸರಿಯಾಗಿ ರೈತರಿಗೂ ಮತ್ತು ಕಾರ್ಮಿಕರಿಗೂ, ನೌಕರವರ್ಗಕ್ಕೂ ಆಗಿರುವುದಿಲ್ಲ. ಸರ್ಕಾರ ಇತ್ತಕಡೆ ಗಮನ ಕೊಟ್ಟು ಆ ಅಧಿಕಾರಿಗಳ ಬಗ್ಗೆ ತೀವ್ರ ಕ್ರಮ ಕೈಗೊಳ್ಳದಿದ್ದರೆ ಜನರಿಗೆ ಅತ್ಯ ಗತ್ಯವಾಗಿ ಬೇಕಾದ ಈ ಸಿಮೆಂಟು, ಸೀಮೆಎಣ್ಣೆ, ಕಂಟ್ರೋಲ್ ಬಟ್ಟೆ ಆಹಾರ

(ಶ್ರೀ ಬಿ. ಜಿ. ಬಣಕಾರ್)

ಧಾನ್ಯಗಳ ಬೆಲೆಗಳು ಏರುವುದಕ್ಕೆ ಅವಕಾಶವಾಗಿ ಜನರಿಂದ ಸರ್ಕಾರಕ್ಕೆ ಅಲ್ಲಸಲ್ಲದ ಟೀಕೆಗಳು ಬರುವುದಕ್ಕೆ ಅವಕಾಶವಾಗುತ್ತದೆ. ಅದಕ್ಕಾಗಿ ಸರ್ಕಾರ ತೀವ್ರ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಈ ಅಧಿಕಾರಿಗಳನ್ನು ಸರ್ಕಾರ ಒಂದು ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ ದೇಶದಲ್ಲಿ ಅನೇಕ ಅಲ್ಲೋಲಕಲ್ಲೋಲಗಳು ಅಲ್ಲಲ್ಲೇ ನಡೆಯಬಹುದು. ಉದಾಹರಣೆಗೆ ಹೇಳುವುದಾದರೆ ಈ ದಿವಸ ಸರ್ಕಾರ ಕಂಟ್ರೋಲ್ ಕ್ಲಾತನ್ನು ಪ್ರತಿಜಿಲ್ಲೆಗೂ ಕೋಟ ನಿಗದಿ ಮಾಡಿ ಹಂಚುತ್ತಿದ್ದರೂ ಅದು ತಾಲ್ಲೂಕ್‌ಮಟ್ಟದಲ್ಲಿ ಜನರಿಗ ನಮ್ಮಲ್ಲಿ ಸಿಗುತ್ತಿಲ್ಲ. ನಮ್ಮಲ್ಲಿ ಬಡಬಗ್ಗರಿಗೆ ಸಿಮೆಂಟ್, ಸೀಮೆ ಎಣ್ಣೆ ಇವು ಈ ದಿವಸ ಸಿಗುತ್ತಿಲ್ಲ. ಅದಕ್ಕೆ ಕಾರಣ ಅಧಿಕಾರಿಗಳ ಅಲಕ್ಷ ಭಾವನೆ. ಸರ್ಕಾರ ಇಂಥ ಅಕ್ರಮ ಅಧಿಕಾರಿಗಳ ಬಗ್ಗೆ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು. ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ರೀತಿಯಲ್ಲಿ ಸರ್ಕಾರ ದೊಡ್ಡ ನಗರಗಳಾದ—ಹುಬ್ಬಳ್ಳಿ, ಧಾರವಾಡ, ಮೈಸೂರು, ಬೆಳಗಾಂ, ಗುಲ್ಬರ್ಗ, ಮಂಗಳೂರು ಇಲ್ಲೆಲ್ಲಾ ಆಹಾರಧಾನ್ಯಗಳ ಹಂಚಿಕೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಬೇಕು. ಅದರ ಬಗ್ಗೆ ಸರ್ಕಾರ ಈಗಾಗಲೇ ಅನೇಕ ಕ್ರಮಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರದವರನ್ನು ನಾವು ಅಭಿನಂದಿಸಬೇಕಾಗಿದೆ. ಇನ್ನು ಕೃಷ್ಣಾ ಜಲವಿವಾದದ ಬಗ್ಗೆ ಈಗ ಕೊಟ್ಟಿರ ತಕ್ಕ ತೀರ್ಪಿನ ಕೂಲಂಕುಷ ಪರಿಶೀಲನೆ ನಡೆಸಿ ರಾಜ್ಯದ ಹಿತಾರ್ಥಗಳ ರಕ್ಷಣೆಗೆ ತಕ್ಕವಿರುವ ಎಲ್ಲ ಕಾರ್ಯಕ್ರಮಗಳನ್ನೂ ಸರ್ಕಾರ ತೆಗೆದುಕೊಳ್ಳುತ್ತದೆಂದು ಹೇಳಿದ್ದಾರೆ. ಇದು ಒಂದು ಬಹಳ ಒಳ್ಳೆಯ ವಿಷಯ. ಇನ್ನು ನಮ್ಮ ಸರ್ಕಾರದವರು ರಾಜ್ಯದಲ್ಲಿ ಅನೇಕ ಬೃಹತ್ಪ್ರಮಾಣದ ಹಾಗೂ ಸಣ್ಣ ಮತ್ತು ಮಧ್ಯಮ ಪ್ರಮಾಣದ ಅನೇಕ ನೀರಾವರಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಇವೆಲ್ಲಾ ಪೂರ್ತಿಯಾದ ನಂತರ ರಾಜ್ಯದಲ್ಲಿ ಆಹಾರ ಪೂರೈಕೆ ಸುಧಾರಿಸಿ ಎಲ್ಲರಿಗೂ ಅನುಕೂಲವಾಗುತ್ತದೆಂದು ತಿಳಿಸಲಿಕ್ಕೆ ಇಚ್ಛಿಸುತ್ತೇನೆ. ನಮ್ಮ ಸರ್ಕಾರ ಆಡಳಿತಕ್ಕೆ ಬರುವುದಕ್ಕೆ ಮುನ್ನ ರೈತರಿಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟಿತ್ತು. ಆ ಆಶ್ವಾಸನೆಗಳಿಗೆ ತಕ್ಕಂತೆ ಅನೇಕ ಅನುಕೂಲತೆಗಳನ್ನು ಮತ್ತು ನೀರಾವರಿ ಬಾವಿಗಳನ್ನು ಒದಗಿಸುವುದರ ಮೂಲಕ ಬಹಳ ಸ್ತುತ್ಯಾರ್ಹವಾದಂಥ ಕೆಲಸಗಳನ್ನು ಮಾಡಿದ್ದಾರೆ. ಹಾಗೇ ನಮಗೆ ರಾಜ್ಯದಲ್ಲಿ ವೈದ್ಯಕೀಯ ಸೌಲತ್ತಿನ ಅಗತ್ಯ ಕೂಡಾ ಬಹಳ ಹೆಚ್ಚಾಗಿದೆ. 'ಹೆಲ್ತ್ ಈಸ್ ವೆಲ್ತ್' ಎಂದು ಹೇಳುತ್ತಾರೆ. ಈ ದಿಶೆಯಲ್ಲಿ ಕೂಡಾ ಸರ್ಕಾರ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಈ ವೈದ್ಯಕೀಯ ಬಾಬಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಜನರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತಿಲ್ಲ. ಕೆಲವು ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಸರ್ಕಾರದಿಂದ ಈ ವೈದ್ಯ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಶೇಕಡ 50 ರಷ್ಟು ಕೊಡತಕ್ಕ ಹಣವನ್ನು ಅಧಿಕಾರಿಗಳ ಅನಾಸ್ಥೆಯಿಂದ ಈ ಬಾಬಿಗೆ ಉಪಯೋಗ ಮಾಡುತ್ತಿಲ್ಲ.

ಹೀಗಾಗಿ ಜನತೆಗೆ ಸಾಕಷ್ಟು ಪ್ರಮಾಣದಲ್ಲಿ ಔಷದೋಪಚಾರಗಳು ದೊರೆಯುತ್ತಿಲ್ಲ. ಈ ಬಗ್ಗೆ ಸರ್ಕಾರದವರು ಕೂಡಲೇ ತೀಕ್ಷಣ ಕ್ರಮ ಕೈಗೊಂಡು ಇದನ್ನು ಉತ್ತಮ ಪಡಿಸಬೇಕೆಂದು ಹೇಳುತ್ತೇನೆ. ಇನ್ನು ಈ ಔಷಧಿಗಳನ್ನು ಕೊಳ್ಳತಕ್ಕ ಬಗ್ಗೆ ಡೀನರಿಗೆ ಮತ್ತು ಡೈರೆಕ್ಟರಾಫ್ ಪಬ್ಲಿಕ್ ಹೆಲ್ತ್ ಇವರಿಗೆ ಏನು ಒಂದು ಅಧಿಕಾರವನ್ನು ಕೊಡಲಾಗಿತ್ತು ಅದನ್ನು ಅವರು ಅವ್ಯವಹಾರದಲ್ಲಿ ನಡೆಸತೊಡಗಿದ್ದಾರೆ. ಆದುದರಿಂದ ಆ ಬಗ್ಗೆ ಸರ್ಕಾರದವರು ನಿಗಾ ಇಡುವುದು ಒಳ್ಳೆಯದು. ಇನ್ನು ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಹರಿಜನ ಗಿರಿಜನರಿಗೆ ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಅವರ ಅಭಿವೃದ್ಧಿಗಾಗಿ ಅನೇಕ ಸೌಲಭ್ಯಗಳನ್ನು ಒದಗಿಸಿದ್ದಾರೆ. ಇದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಿದ್ದರೂ ಕೆಲವು ಅಧಿಕಾರಿಗಳು ಆ ಹಣವನ್ನು ಆ ಬಾಬಿಗೆ ಉಪಯೋಗ ಮಾಡದೆ ಆ ಹಣವನ್ನು ಲ್ಯಾಪ್ಸ್ ಮಾಡಿದ್ದಾರೆ, ಇನ್ನು ಕೆಲವು ಕಡೆ ಅದನ್ನು ಸರ್ಕಾರಕ್ಕೆ ಸರೆಂಡರ್ ಮಾಡಿದ್ದಾರೆ ಇನ್ನು ಕೆಲವು ಕಡೆ ಕೊಟ್ಟ ಹಣವನ್ನು ಸದುಪಯೋಗ ಮಾಡದೇ ಅದನ್ನು ದುರ್ವಿನಿಯೋಗ ಮಾಡಿದ್ದಾರೆ. ಈ ಬಾಬಿನಲ್ಲಿ ಅಧಿಕಾರಿಗಳ ದೌರ್ಬಲ್ಯ ಹಾಗೂ ಅದಕ್ಷತೆಗಳೂ ಎದ್ದು ಕಾಣುತ್ತಿವೆ. ಸರ್ಕಾರದವರು ಇನ್ನು ಮುಂದಾದರೂ ಈ ವಿಚಾರದಲ್ಲಿ ಕಣ್ಣಿಟ್ಟು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸತಕ್ಕ ಹಣವೇನಿದೆ ಅದು ಸಂಪೂರ್ಣವಾಗಿ ಸದ್ವಿನಿಯೋಗವಾಗುವಂತೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

5-30 P. M.

ಜನತಾ ವಸತಿ ವಿಚಾರದಲ್ಲಿ ಕೇಂದ್ರ ಸರ್ಕಾರದ ಧೋರಣೆಯಂತೆ ಮನೆಯಿಲ್ಲದವರಿಗೆ ಜಾಗವನ್ನು ಪುಕ್ಕಟೆಯಾಗಿ ಕೊಡಬೇಕೆಂಬ ನೀತಿಗನುಗುಣವಾಗಿ ಲಕ್ಷಾಂತರ ಸೈಟುಗಳನ್ನು ಕೊಡಬೇಕೆಂದು ಸರಕಾರ ತೀರ್ಮಾನ ಮಾಡಿದೆ. ಈ ದಿಸೆಯಲ್ಲಿ ಯಾದಿಕೂಡ ಮಾಡಿದೆ. ಅನೇಕ ಗ್ರಾಮಗಳಲ್ಲಿ ಎಲ್ಲೆಲ್ಲಿ ಸರ್ಕಾರದ ಜಮೀನಿದೆ ಅಲ್ಲಿ ಈಗಾಗಲೇ ಸೈಟುಗಳನ್ನು ಕೊಟ್ಟು ಜನರಿಗೆ ಉಪಕಾರ ಮಾಡಿದ್ದಾರೆ ಎಲ್ಲಿ ಸರ್ಕಾರದ ಜಾಗವಿಲ್ಲ ಅಲ್ಲಿ ಸಾರ್ವಜನಿಕರ ಆಸ್ತಿಯನ್ನು ವಶಪಡಿಸಿಕೊಂಡು ನಿವೇಶನಗಳನ್ನು ಮಾಡಿ ಜನರಿಗೆ ಕೊಡಬೇಕೋ ಅಂಥಲ್ಲಿ ಕೆಲವು ಅಧಿಕಾರಿಗಳು ಸೂಕ್ತವಾದ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ಒಂದು ಕಾನೂನು ಕೂಡ ಮಾಡಿ ಅದರ ಪ್ರಕಾರ ಬಿ.ಡಿ.ಒ., ತಹಸೀಲ್ದಾರ್ ಮತ್ತು ಇಂಜಿನಿಯರ್ ಇವರನ್ನೊಳಗೊಂಡಂಥ ಒಂದು ಕಮಿಟಿಯನ್ನು ಮಾಡಿದ್ದರೂ ಅದು ಸರಿಯಾಗಿ ಕೆಲಸ ಮಾಡದೆ ಇರುವುದರಿಂದ ಅವುಗಳು ತೀವ್ರವಾಗಿ ಕೆಲಸ ಮಾಡಿ ಜನತಾ ಹೌಸಿಂಗ್ ಸ್ಕೀಂ ಪ್ರಕಾರ ಜನರಿಗೆ ಸೈಟುಗಳನ್ನು ಕೊಡಬೇಕು ಇಲ್ಲದಿದ್ದರೆ ಇದೊಂದು ಯೋಜನೆ ಬರೀ ಕಾಗದದಲ್ಲಿ ಇದ್ದೀತು ಎನ್ನುವ ಮಾತನ್ನು ಮರೆಯಬಾರದು.

(ಶ್ರೀ ಬಿ. ಜಿ. ಬಣಕಾರ)

ಹೌಸಿಂಗ್ ಸ್ಕೀಮಿನಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಬಿ. ಡಿ. ಒ.ಗಳ ಕಡೆಗೆ ಜಿಲ್ಲಾಧಿಕಾರಿಗಳ ಮುಖಾಂತರ ಕೆಲವೊಂದು ಹಣವನ್ನು ಕೊಟ್ಟಿದ್ದರೂ ಸ್ಪುತ ಮಾರ್ಚ್ 31ನೇ ತಾರೀಖು ಸಮೀಪಿಸುತ್ತಿದ್ದಗೂ ಸಹಿತ ಬಿ.ಡಿ.ಒ.ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಹಣವನ್ನು ಖರ್ಚುಮಾಡಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡು ವುದಕ್ಕೆ ಸರ್ಕಾರದವರು ಕೂಡಲೇ ಆದೇಶ ಕೊಡಬೇಕೆಂದು ಹೇಳುತ್ತೇನೆ.

ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಹೆಚ್ಚು ಹೆಚ್ಚು ಉದ್ಯೋಗಗಳನ್ನು ನಿರ್ಮಾಣ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಈ ದಿಸೆಯಲ್ಲಿ ಕೂಡ ನಿರುದ್ಯೋಗ ಸಮಸ್ಯೆ ಸ್ವಲ್ಪಮಟ್ಟಿಗಾದರೂ ಪರಿಹಾರ ವಾದೀತು ಎಂದು ನಾನು ಹೇಳುತ್ತೇನೆ. ಅನೇಕ ಮಂದಿ ವಿದ್ಯಾವಂತರು ಎಸ್.ಎಸ್.ಎಲ್.ಸಿ ಅಥವಾ ಪದವೀಧರರಾಗಿರುವವರಿಗೆ 50 ಎಕರೆ ಜಮೀನಿದ್ದರೂ ಸಹಿತ ಜಮೀನಿನಲ್ಲಿ ಕೆಲಸ ಮಾಡಲಿಕ್ಕೆ ಹೋಗುತ್ತಿಲ್ಲ. ನೌಕರಿಯನ್ನು ಹುಡುಕಿ ಕೊಂಡು ಸ್ವಂತ ಹೊಲವನ್ನು ಮಂದಿಗೆ ಕೊಟ್ಟರೂ ಚಿಂತೆಯಿಲ್ಲ ಎನ್ನುವಂಥ ಮನೋಭಾವ ಯುವಕರಲ್ಲಿ ಬೆಳೆಯುತ್ತಿದೆ. ವಿದ್ಯಾಭ್ಯಾಸವನ್ನು ಕೊಡುವಾಗ ಒಕ್ಕಲುತನದ ಬಗ್ಗೆ ಆಸ್ಥೆ ಯುವಕರಲ್ಲಿ ಬರುವ ಹಾಗೆ ಶಿಕ್ಷಣ ಕ್ರಮದಲ್ಲಿ ಬದಲಾವಣೆ ಮಾಡಬೇಕು ಎನ್ನುವ ಮಾತನ್ನು ಒತ್ತಿ ಹೇಳುತ್ತೇನೆ.

ಕಾರ್ಮಿಕರ ವಿಚಾರದಲ್ಲಿ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿ ಯಾವುದೇ ತರಹ ದುರ್ಘಟನೆಗಳು ನಡೆದಿಲ್ಲವಾದರೂ ಕಾರ್ಮಿಕರ ಬಗ್ಗೆ ಅನುಕೂಲ ಗಳನ್ನು ಮಾಡಿಕೊಡುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ದಿಸೆಯಲ್ಲಿ ಸರ್ಕಾರದ ಕ್ರಮ ಬಹಳ ಸ್ತುತ್ಯ. ಮತ್ತು ಸರ್ಕಾರಕ್ಕೆ ಎಲ್ಲರೂ ಬೆಂಬಲವನ್ನು ಕೊಟ್ಟು ಸರ್ಕಾರದ ನೀತಿ ಮತ್ತು ಧೋರಣೆ ಏನಿದೆ ಅದು ಅನುಷ್ಠಾನಕ್ಕೆ ಬರುವುದಕ್ಕೆ ಪ್ರಯತ್ನ ಮಾಡಬೇಕು.

ರಾಜ್ಯದಲ್ಲಿರುವ ಮೂರು ಕೋಟಿ ಜನರಿಗೆ ಅನ್ನ, ಬಟ್ಟೆ, ವಸತಿ ಮತ್ತು ನೀರು ಇವುಗಳನ್ನು ಒದಗಿಸಿಕೊಡಬೇಕೆಂಬ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿದೆ. ಈ ದಿಸೆಯಲ್ಲಿ ಸರ್ಕಾರಕ್ಕೆ ವಿರೋಧಪಕ್ಷದ ಸಹಕಾರ, ಜನತೆಯ ಸಹಕಾರವಲ್ಲದೆ ಅಧಿಕಾರಿಗಳ ಸಹಕಾರವೂ ಕೂಡ ಅತ್ಯವಶ್ಯಕವಾಗಿದೆ. ಸರ್ಕಾರಿ ನೌಕರರ ಕೆಲಸವನ್ನು ಈ ದಿಸೆಯಲ್ಲಿ ಉತ್ತಮ ರೀತಿಯಲ್ಲಿ ಪಡೆದುಕೊಳ್ಳಬೇಕು. ಇಲ್ಲದೆ ಇದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬಂದೀತು ಎನ್ನುವುದನ್ನು ಮರೆಯಬಾರದು.

ಬೆಲೆಗಳ ಏರಿಕೆಯನ್ನು ತಡೆಗಟ್ಟಬೇಕಾದ್ದು ಅತ್ಯವಶ್ಯ. ಅತ್ಯಾವಶ್ಯಕವಾದ ಆಹಾರ ಧಾನ್ಯಗಳ ಬಗ್ಗೆ ಸೀಲಿಂಗ್ ರೇಟನ್ನು ಸರ್ಕಾರ ನಿರ್ಧರಿಸಲೇಬೇಕು. ಉದಾಹರಣೆಗೆ ಅಕ್ಕಿಯನ್ನು ಯಾರೇ ಎಲ್ಲಿಯೇ ಮಾರಾಟ ಮಾಡಲಿ ಎರಡು ರೂಪಾಯಿಗಿಂತ ಜಾಸ್ತಿ ಧಾರಣೆಗೆ ಯಾರು ಮಾರಲೇ ಬಾರದು. ಅದಕ್ಕಿಂತ ಹೆಚ್ಚಿನ ಧಾರಣೆಗೆ ಮಾರಿದರೆ ಅಂಥವರನ್ನು ಪ್ರಾಸಿಕ್ಯೂಟ್ ಮಾಡುವಂಥ ಕೆಲಸ ವನ್ನು ಮಾಡಬೇಕು ಮತ್ತು ಅವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದು ಕೊಳ್ಳಬೇಕು. ಆಗ ಮಾತ್ರ ರಾಜ್ಯದಲ್ಲಿ ಬೆಲೆಗಳು ಇಳಿದಾವು. ಗ್ರಾಮಾಂತರ ಪ್ರದೇಶಗಳಲ್ಲಿ ಬತ್ತದ ಬೆಲೆ ಒಂದು ಕ್ವಿಂಟಾಲಿಗೆ 125 ರೂಪಾಯಿ ಎಂದು ಇಟ್ಟುಕೊಂಡರೂ ಸಹಿತ ಬೆಂಗಳೂರಿಗೆ ಅದನ್ನು ತಂದು ಒಂದು ಕೆ.ಜಿ. ಅಕ್ಕಿಗೆ ಎರಡು ರೂಪಾಯಿನಂತೆ ಮಾರಾಟ ಮಾಡಬಹುದು. ವ್ಯಾಪಾರಸ್ಥರು ಗ್ರಾಮಾಂತರ ಪ್ರದೇಶಗಳಲ್ಲಿ 105---110 ರೂಪಾಯಿಗಳಿಗೆ ಬತ್ತವನ್ನು ಖರೀದಿ ಮಾಡುತ್ತ ಇದ್ದಾರೆ. ಅವರು ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಮಾರಾಟ ಮಾಡುವುದಕ್ಕೆ ಖಂಡಿತ ಸಾಧ್ಯವಿದೆ. ಆದರೂ ಸಹಿತ ಮೂರೂ ನಾಲ್ಕು ರೂಪಾಯಿಗೆ ಒಂದು ಕೆ ಜಿ. ಅಕ್ಕಿಯನ್ನು ಮಾರಾಟ ಮಾಡುತ್ತಾರೆ. ಅದನ್ನೇ ಬೊಂಬಾಯಿಗೆ ತೆಗೆದುಕೊಂಡು ಹೋಗಿ ಆರೇಳು ರೂಪಾಯಿಗಳಿಗೆ ಕೂಡ ಮಾರಾಟ ಮಾಡುವಂಥ ಅನಿಷ್ಟ ಪದ್ಧತಿ ಕಂಡು ಬರುತ್ತಿದೆ. ನಮ್ಮ ರಾಜ್ಯದಲ್ಲಿ ಆಹಾರ ಧಾನ್ಯಗಳ ಬೆಲೆ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಒಂದು ಸೀಲಿಂಗ್ ರೇಟ್ ಗೊತ್ತುಪಡಿಸಿ ಅದಕ್ಕಿಂತ ಹೆಚ್ಚು ಬೆಲೆಗೆ ಮಾರುವವರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಂತರ ಜಿಲ್ಲಾ ಸಾಗಾಣಿಕೆಯ ಮೇಲೆ ಹಾಕಿರುವ ನಿರ್ಬಂಧದ ಬಗ್ಗೆ ಹೇಳ ಬೇಕೆಂದರೆ ಆ ರೀತಿಯ ನಿರ್ಬಂಧ ಇರುವುದು ಒಳ್ಳೆಯದು. ಮಂಡ್ಯ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ಅಕ್ಕಿಯನ್ನು ಒಯ್ಯುವುದಕ್ಕೆ ಅವಕಾಶ ಕೊಟ್ಟರೆ ಮೊದಲು ಮಂಡ್ಯದಿಂದ ಚಿತ್ರದುರ್ಗಕ್ಕೆ ಒಯ್ಯುತ್ತಾರೆ, ಆ ನಂತರ ಬೆಳಗಾಂ ಕಡೆಗೆ ಹೋಗುತ್ತದೆ, ಅಲ್ಲಿಂದ ಧಾರವಾಡ ಮಾರ್ಗವಾಗಿ ಗೋವಕ್ಕೆ ಹೋಗಿ ಎಲ್ಲಿಗೆ ಬೇಕಾದರೂ ಹೋಗಬಹುದು. ಅದುದರಿಂದ ಆಹಾರಧಾನ್ಯಗಳ ಪರಿಸ್ಥಿತಿ ರಾಜ್ಯ ದಲ್ಲಿ ಸುಗಮಗೊಳ್ಳುವವರೆಗೂ ಅಂತರ ಜಿಲ್ಲಾ ಸಾಗಾಣಿಕೆಯ ಮೇಲೆ ನಿರ್ಬಂಧ ಇರುವುದು ಒಳ್ಳೆಯದು ಎಂದು ಹೇಳುತ್ತೇನೆ.

ರಾಜ್ಯಪಾಲರ ಭಾಷಣದ ಬಗ್ಗೆ ಮಂಡಿಸಿರುವ ಸೂಚನೆಯನ್ನು ಸಮರ್ಥಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕಾಗಿ ಸೂಚಿಸಿರುವ ವಂದನಾ ನಿರ್ಣಯವನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತ ಎರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಪಕ್ಷದ ನಾಯಕರಾದ ದೇವೇಗೌಡರು ಒಂದು ಮಾತನ್ನು ಹೇಳಿದರು. ಅವರು ಗುಜರಾತಿನ ಉದಾಹರಣೆಯನ್ನು ಕೊಟ್ಟು ಪ್ರಜಾಪ್ರಭುತ್ವದ ಅಡಿಗಲ್ಲು ಅಲುಗಾಡುವುದಕ್ಕೆ ಪ್ರಾರಂಭವಾಗಿದೆ ಎಂದು ಹೇಳಿದರು. ನಾವು ಚುನಾಯಿತ ರಾಗಿ ಬಂದಿದ್ದೇವೆ, ಒಂದು ಪಕ್ಷದಲ್ಲಿ ಭಾರಿ ಬಹುಮತವನ್ನು ಗಳಿಸಿ ಸರ್ಕಾರ ವನ್ನು ರಚಿಸಿದ್ದೇವೆ ಎಂದ ಮಾತ್ರಕ್ಕೆ ಅಧಿಕಾರದಲ್ಲಿ ಸುರಕ್ಷಿತವಾಗಿರುತ್ತೇವೆನ್ನುವ ಕಲ್ಪನೆಯನ್ನು ಯಾರೂ ದಯವಿಟ್ಟು ಈ ಕಾಲದಲ್ಲಿ ಇಟ್ಟುಕೊಳ್ಳುವುದಕ್ಕಾಗುವು ದಿಲ್ಲ. ಏಕೆಂದರೆ ಜನರ ಕೋಪಕ್ಕೆ ಯಾರು ಯಾವ ಸಂದರ್ಭದಲ್ಲಾದರೂ ತುತ್ತಾಗಬಹುದು. ನಾವು ಶಾಸನ ಸಭೆಯಲ್ಲಿದ್ದೇವೆ, ಮಂತ್ರಿಮಂಡಲ ರಚಿಸಿ ದ್ದೇವೆ, ನಮ್ಮ ಹಿಂದೆ ಸೈನ್ಯವಿದೆ, ರಕ್ಷಣಾ ಇಲಾಖೆ ಇದೆ ಎಂದರೆ ಆ ರಕ್ಷಾ ಕವಚದಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲ. ಅಂಥ ಪರಿಸ್ಥಿತಿಯಾಗಿದೆ. ಅದರಲ್ಲಿಯೂ ಗುಜರಾತ್ ರಾಜ್ಯದಲ್ಲಿಯೇ ಒಂದು ಸ್ಫೋಟವಾಗಿರಬೇಕಾದರೆ ಅದಕ್ಕೆ ಬಹಳ ಮಹತ್ವವನ್ನು ಕೊಡಬೇಕಾಗುತ್ತದೆ. ಗುಜರಾತ್ ಗಾಂಧೀಜಿಯವರು ಹುಟ್ಟಿದಂಥ ಒಂದು ರಾಜ್ಯ. ಅವರು ಚಳುವಳಿಯನ್ನು ಪ್ರಾರಂಭ ಮಾಡಿದಂಥ ರಾಜ್ಯ ಮತ್ತು ನಮ್ಮ ರಾಷ್ಟ್ರಕ್ಕೆ ಅಹಿಂಸಾತ್ಮಕವಾದ ಹೋರಾಟದ ಕಲ್ಪನೆಯನ್ನು, ಮಾರ್ಗದರ್ಶನ ವನ್ನು ನೀಡಿರತಕ್ಕ ಪ್ರದೇಶ ಅದು. ಅಲ್ಲಿದ ಇದು ಮತ್ತೆ ಪ್ರಾರಂಭವಾದ ಮೇಲೆ ನಾವು ಕರ್ನಾಟಕದ ಜನ ಸ್ವಲ್ಪ ಎಚ್ಚರಗೊಳ್ಳಬೇಕು. ಕಾಲ ಸನ್ನಿಹಿತ ವಾಗಿದೆ. ಕಳೆದ ವರ್ಷ ಬೆಲೆ ಏರಿಕೆ ಚಳುವಳಿ ಹಳೇ ಮೈಸೂರು ಭಾಗದಲ್ಲೇ ನಡೆಯಿತು. ಅವಾಗ ಸಾಕಷ್ಟು ಅಂಜಿಕೆ ಪ್ರಾರಂಭವಾಯಿತು. ಆ ಕಾಲದಲ್ಲಿ ರಾಜಕಾರಣದ ಸ್ವಾರ್ಥವನ್ನು ಪಡೆಯಬೇಕೆಂದು ವಿರೋಧಪಕ್ಷಗಳು ಇದ್ದಿದ್ದ ಪಕ್ಷದಲ್ಲಿ ಅಂದೇ ಇವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸುವುದಕ್ಕೆ ಸಾಧ್ಯವಿತ್ತು. ಆದರೆ ಒಂದು ಮಾತನ್ನು ವಿಷಾದದಿಂದ ಹೇಳಬೇಕಾಗಿದೆ, ವಿರೋಧ ಪಕ್ಷದವರು ಆ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲಿಲ್ಲ. ಅಂದು ಮಾಡಿದಂಥ ಲೋಪ ನಮ್ಮದು ಎಂದು ನಾನು ತಿಳಿದುಕೊಳ್ಳುತ್ತೇನೆ. ಅವಾಗ ಚಳುವಳಿ ಪ್ರಾರಂಭವಾದದ್ದು ಯಾವುದೋ ಕಾರಣಕ್ಕಾಗಿ ಆದರೆ ಆ ನಂತರ ಚಳುವಳಿ ಹಬ್ಬಿದ ಸ್ವರೂಪವನ್ನು ನಾವು ಒಪ್ಪಲಿಲ್ಲ ಎನ್ನುವ ಕಾರಣಕ್ಕಾಗಿ ನಾವು ಸುಮ್ಮನೆ ಇರಬೇಕಾಯಿತು. ಇಲ್ಲದೆ ಹೋದರೆ ಈ ಸರ್ಕಾರವನ್ನು ಅಂದೇ ಉರುಳಿಸ ಬಹುದಾಗಿತ್ತು. ಅಂದಿನ ಚಳುವಳಿ ಏನಾದರೂ ಹೊಸ ಕರ್ನಾಟಕದ ಭಾಗಕ್ಕೆ ಸ್ವಲ್ಪ ವ್ಯಾಪಿಸಿಕೊಂಡಿದ್ದರೆ ಅಂದೇ ಗುಜರಾತ್ ಸರ್ಕಾರಕ್ಕೆ ಬಂದಿರುವ ಪರಿಸ್ಥಿತಿ ನಮ್ಮ ಸರ್ಕಾರಕ್ಕೂ ಬಂದೊದಗುತ್ತಿತ್ತು. ಅಂಥ ಸನ್ನಿವೇಶದಿಂದ ಬುದ್ಧಿ ಮಾತ್ರ ಕಲಿತಿಲ್ಲ, ಎಚ್ಚರಗೊಳ್ಳಲಿಲ್ಲ. ಮತ್ತೆ ಕರ್ನಾಟಕದಲ್ಲಿ ಅಂಥ ಒಂದು ಪರಿಸ್ಥಿತಿ ತಲೆ

ಎತ್ತಿದರೆ ಇವರು ಉಳಿಯುವುದಕ್ಕೆ ಸಾಧ್ಯವಿಲ್ಲ. ಸಂದರ್ಭ ಹಿಂದೆ ಹೋದರೆ ನಾವೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಅಂಥ ಸಂದರ್ಭ ಕರ್ನಾಟಕ ರಾಜ್ಯದಲ್ಲಿ ಬಹಳ ವೇಗ ಬೇಗ ಬರುವುದಕ್ಕೆ ಸನ್ನಿಹಿತವಾಗಿದೆ. ಪ್ರಜಾಪ್ರಭುತ್ವದ ಅಡಿಗಲ್ಲು ಅಲುಗಾಡುವುದಕ್ಕೆ ಪ್ರಾರಂಭವಾಗಿದೆ. ಆದ್ದರಿಂದ ಸ್ವಲ್ಪ ವಿಚಾರ ಮಾಡಿ ಅದಕ್ಕೆ ಪರಿಹಾರವನ್ನು ಕಂಡು ಹಿಡಿಯದೇ ಹೋದರೆ ಯಾರೂ ಸುರಕ್ಷಿತವಾಗಿ ಇರುವುದಕ್ಕೆ ಸಾಧ್ಯವಿಲ್ಲ. ಜನರು ಬೇಸತ್ತಿದ್ದಾರೆ. ಅಹಾರ ಸಿಕ್ಕುವುದಿಲ್ಲ, ಉದ್ಯೋಗ ಸಿಕ್ಕುವುದಿಲ್ಲ. ಆದುದರಿಂದ ಜನತೆಗೆ ಇರುವ ಕೊರತೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈ ತರಹ ಕೆಲಸಗಳನ್ನು ಮಾಡುವುದು, ಇದೇ ರೀತಿಯ ರಾಜ್ಯಭಾರ ಮಾಡಿ ಆಡಳಿತ ನಡೆಸಬೇಕು ಹೀಗೆ ರಾಜ್ಯಪಾಲರ ಭಾಷಣ ಮಾಡಿಸಬೇಕು ಎನ್ನುವುದರಲ್ಲಿ ತೃಪ್ತಿ ಪಟ್ಟುಕೊಳ್ಳುವ ಹಾಗಿದ್ದರೆ ಇದರಿಂದ ಜನ ಬದುಕುವುದಕ್ಕಾಗುವುದಿಲ್ಲ. ಇದರಿಂದಲೇ ಎಲ್ಲಾ ಆಗಿದೆ ಎಂದು ನೀವು ತೃಪ್ತಿ ಪಟ್ಟುಕೊಳ್ಳಬೇಡಿ. ಆಡಳಿತ ಏನಾಗಿದೆ ಎಂದು ನೋಡಿದರೆ ಇಂದು ಯಾವ ಜಗತ್ತಿನಲ್ಲೂ ಇಂತಹ ಸರಕಾರ ಇರುವುದಕ್ಕೆ ಸಾಧ್ಯವೇ ಇಲ್ಲ ಭ್ರಷ್ಟಾಚಾರ ಎನ್ನುವುದು ಎಲ್ಲಿಗೆ ಹೋಗಿದೆ ಎಂದರೆ ವ್ಯಕ್ತಿ ವ್ಯಕ್ತಿಯಲ್ಲಿ ಅನೇಕ ತರಹದ ಭ್ರಷ್ಟಾಚಾರಗಳು ತೀವ್ರವಾಗಿ ಬೆಳೆದು ನಿಂತಿವೆ. ಪ್ರಜಾಪ್ರಭುತ್ವದಲ್ಲಿ ಇಂತಹ ಮಾಮೂಲಿ ಆಡಳಿತವನ್ನು ನೀವು ನಡೆಸುತ್ತಿದ್ದೀರಿ. ಇದಕ್ಕಾಗಿ ನಾನು ಇಲ್ಲಿರುವ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣರವರನ್ನು ಕೇಳುತ್ತೇನೆ. ಇಂದು ನೀವು ಮಾಡತಕ್ಕ ಕೆಲಸಗಳು ನಡೆಸತಕ್ಕ ಆಡಳಿತ ಹಾಗೂ ಇದರಲ್ಲಿರುವಂತಹ ಬುದ್ಧಿವಂತ ಮುಖ್ಯರು ಯಾವ ಪ್ರಪಂಚದಲ್ಲಿಯೂ ಇಲ್ಲ. ಇಂತಹ ನಿಮ್ಮ ಆಡಳಿತವನ್ನು ನೋಡಿ ನೋಡಿ ಬಹಳ ಹೇಸಿಗೆ ಪಟ್ಟುಕೊಂಡಿದ್ದಾರೆ. ಹಿಂದೆ ಶ್ರೀಮಾನ್ ಧರ್ಮವೀರರವರು ಆಡಳಿತ ನಡೆಸುತ್ತಿದ್ದಾಗ ಅವರು ಯಾವ ರೀತಿ ಆಡಳಿತ ನಡೆಸುತ್ತಿದ್ದರೋ ಅದಕ್ಕಿಂತ ಹೆಚ್ಚಾಗಿ ನೀವು ನಡೆಸುತ್ತಿರುವ ಆಡಳಿತದಲ್ಲಿ ಏನೂ ವ್ಯತ್ಯಾಸವಿಲ್ಲ. ಆಗ ಅಸೆಂಬ್ಲಿ ಇಲ್ಲದಿದ್ದರೂ ಅಧಿಕಾರಿಗಳೇ ಆಯವ್ಯಯ ಪಟ್ಟಿ ತಯಾರಿಸಿ ಎಲ್ಲವನ್ನೂ ರಾಜ್ಯಪಾಲರಿಗೆ ಒಪ್ಪಿಸಿ ಕೆಲಸಗಳು ನಡೆಯುತ್ತಿತ್ತು. ಅದೇ ರೀತಿ ಮಾಮೂಲಿ ಆಡಳಿತ ಈಗಲೂ ನಡೆಯುತ್ತಿದೆ. ಇಂತಹ ಮಾಮೂಲಿ ಆಡಳಿತದಲ್ಲೇ ನೀವುಗಳು ತೃಪ್ತಿಪಟ್ಟುಕೊಳ್ಳಬೇಕೇ? ಇದೇ ತರಹದ ಆಡಳಿತ ನಡೆಸಲು ಮುಖ್ಯಮಂತ್ರಿಗಳು ಹಾಗೂ ಕೆಲವರು ಮಂತ್ರಿಗಳೆಂದು ಮಾಡಿ ಆಡಳಿತವನ್ನು ಏಕೆ ನಡೆಸಬೇಕು ? ರಾಜ್ಯಪಾಲರಿಲ್ಲದೆ ಆಡಳಿತವನ್ನು ಬರೀ ಅಧಿಕಾರಿಗಳಿಗೇ ಬಿಟ್ಟರೇ ಅವರೇ ನಿಮಗಿಂತ ಚೆನ್ನಾಗಿ ಎಲ್ಲಾ ಆಡಳಿತವನ್ನೂ ನಡೆಸಿಕೊಂಡು ಹೋಗುತ್ತಾರೆ. ಆದರೆ ನೀವು ಚುನಾವಣೆಯಲ್ಲಿ ಗೆದ್ದು ಬಂದು ಆಡಳಿತಕ್ಕೆ ಬಂದ ಮೇಲೆ ಉತ್ತಮ ವ್ಯವಸ್ಥೆಯುಳ್ಳ ಆಡಳಿತವನ್ನು ನೀಡಬೇಕಾಗಿತ್ತು. ಅಂತಹ ಉತ್ತಮವಾದ ಆಡಳಿತ ನೀಡಬೇಕೆಂಬ ಕಲ್ಪನೆ ಕೂಡ ಇವೊತ್ತಿನವರೆಗೆ

(ಶ್ರೀ ಕಾಗೋಡು ತಿಮ್ಮಪ್ಪ)

ಕಾಣುತ್ತಿಲ್ಲ. ಈ ದೃಷ್ಟಿಯಿಂದ ಕೂಡ ಇಲ್ಲಿ ತುಲನೆ ಮಾಡಿ ನೋಡಿದರೆ ಬರೀ ಪಾಮೂಲಿ ಆಡಳಿತ ನಡೆದುಕೊಂಡು ಹೋಗುತ್ತಿದೆ. ಇನ್ನೂ ಸಮಾಜವಾದ ತರುತ್ತೇವೆಂದು ಹೇಳಿ ಇದುವರೆಗೆ ನೀವು ಯಾವುದನ್ನೂ ತರಲಾಗಲಿಲ್ಲ. ತರುವುದಾಗಿದ್ದರೆ ನ್ಯಾಯುವಾಗಿ ವ್ಯವಸ್ಥೆ ಮಾಡಿ ರಾಜ್ಯದಲ್ಲಿ ತನ್ನಿ ಈ ದೇಶದಲ್ಲಿ ಪ್ರಜಾಪ್ರಭುತ್ವವಿರುವಂತಹ ಸಂಸ್ಥೆಗಳು ಸಮತವಾದವನ್ನು ಪ್ರಾಮಾಣಿಕತೆ ಯಿಂದ ಜಾರಿಗೆ ತರಲು ಪ್ರಯತ್ನ ಮಾಡಬೇಕು ಹಾಗಿಲ್ಲದಿದ್ದರೆ ದೇಶದಲ್ಲಿ ಸಮಾಜವಾದ ಬೆಳೆಯಲು ಸಾಧ್ಯವಿಲ್ಲ. ಮೊನ್ನೆ ಸಂಕೇಶ್ವರದಲ್ಲಿ ಚುನಾವಣೆ ಯಾಯಿತು. ಏನಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ ಮುಖ್ಯ ಮಂತ್ರಿಗಳು ತಿಳಿದುಕೊಂಡರು ಇದರಿಂದ ಜನತೆಗೆ ಅನುಕೂಲವಾಗುತ್ತೆ ಎಂದು ಇದೇ ಮುಖ್ಯಮಂತ್ರಿಗಳು ಜನತೆಗೆ ಅವರ ಪಕ್ಷದ ಜನರಿಗೇ ಅವಮಾನವಾಗು ವಂತಹ ಒಂದು ಭಾಷಣವನ್ನು ಸೊಂಡೂರಿನಲ್ಲಿ ಮಾಡಿದರು. ಸೊಂಡೂರು ನಮ್ಮ ಮಾನ್ಯ ಹಣಕಾಸು ಮಂತ್ರಿಗಳ ಕ್ಷೇತ್ರ. ಹಿಂದೆಒಂದು ಸಂದರ್ಭದಲ್ಲಿ ನಮ್ಮ ಮಾನ್ಯ ಘೋರ್ಪಡೆಯವರು ಶ್ರೀ ನಿಜಲಿಂಗಪ್ಪನವರು ಸಾಂಡೂರಿಗೆ ಬಂದಿದ್ದಾಗ ಅವರ ಮೇಲೆ ಹೂವಿನ ಮಳೆಯನ್ನು ವಿಮಾನದಿಂದ ತಂದು ಸುರಿಸಿದರು. ಈಗ ಶ್ರೀಮರ್ನ್ ಘೋರ್ಪಡೆಯವರು ಶ್ರೀ ದೇವರಾಜ ಅರಸ್‌ ರನ್ನು ಕರೆಸಿಕೊಂಡು ಬಹಳವಾಗಿ ಹೊಗಳಿದರು. ಆಗಿದ್ದ ಕಾಂಗ್ರೆಸ್ಸಿಗೂ ಈಗ ಇರುವ ಕಾಂಗ್ರೆಸ್ಸಿಗೂ ಇರುವ ವ್ಯತ್ಯಾಸವಾದರೂ ಏನು ? ಎಷ್ಟರ ಮಟ್ಟಿಗೆ ಆ ಕ್ಷೇತ್ರ ಅಭಿವೃದ್ಧಿಯಾಗಿದೆ. ಸುಮ್ಮನೆ ಹೊಗಳಿಸಿಕೊಂಡರೇ ವಿನಾಃ ನಿಮ್ಮ ಆಡಳಿತದಿಂದ ಜನತೆಗೆ ಏನೂ ಉಪಯೋಗವಾಗಲಿಲ್ಲ. ಮುಖ್ಯ ಮಂತ್ರಿಗಳು ಒಂದು ಮಾತು ಹೇಳಿದರು. ನಿಮ್ಮಲ್ಲಿ ವಾಯುಸುತರು ಇದ್ದಾರೆ. ಆ ಮಾತನ್ನು ಅವರ ಪಕ್ಷದವರೇ ಹೇಳಿದ್ದಾರೆ, ಇಂದಿರಾ ಗಾಳಿಯಿಂದ ನೀವೆಲ್ಲ ಬಂದಿರುವುದರಿಂದಾಗಿ ನೀವೆಲ್ಲ ವಾಯುಸುತರು ಎನ್ನುವ ಅರ್ಥದಲ್ಲಿ ಅವರು ಹೇಳಿದರು. ಮುಖ್ಯಮಂತ್ರಿಗಳು ನಮ್ಮಲ್ಲಿರುವ ರಾಜಕಾರಣಿಗಳ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಿಮ್ಮ ಪಕ್ಷದಲ್ಲಿರುವವರೇ ಬಹಳ ಸಂಕಟದಿಂದ ಅದನ್ನು ವಿರೋಧ ಮಾಡಿದವರೂ ಇದ್ದಾರೆ ಮತ್ತು ನಿರ್ದಿಷ್ಟವಾದ ಆಪಾದನೆ ಗಳನ್ನು ಮಾಡಿ ಮುಖ್ಯಮಂತ್ರಿಗಳಿಗೆ ಪತ್ರ ಕೂಡ ಬಂದಿದೆ.

ಶ್ರೀ ಎಸ್. ಎಂ. ಕೃಷ್ಣ —ಮುಖ್ಯಮಂತ್ರಿಗಳು ಏನು ಹೇಳಿದರು ಎನ್ನು ವುದು ಇನ್ನೂ ಸ್ಪಷ್ಟವಾಗಿಲ್ಲದೇ ಇರತಕ್ಕ ಕಾಲದಲ್ಲಿ ನೀವು ಈ ರೀತಿಯಾ ವಿಶ್ಲೇಷಣೆ ಮಾಡಲು ಹೋದರೆ ಅದು ಕಟ್ಟು ಕತೆಯಾಗುತ್ತದೆ ವಿನಾಃ ಬೇರೇನಲ್ಲ. ಸಮಯ ಬಂದಾಗ ಮುಖ್ಯ ಮಂತ್ರಿಗಳೇ ಅದನ್ನು ಸ್ಪಷ್ಟ ಮಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಅವರು ವಿಶ್ಲೇಷಣೆ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಪತ್ರಿಕೆಗಳಲ್ಲಿ ಇದರ ವಿವರಗಳೆಲ್ಲಾ ಬಂದಿವೆ. ಚುನಾವಣೆಯಾಗಿ ಗೆದ್ದು ಬಂದವರೆಲ್ಲರೂ ಅಧಿಕಾರಕ್ಕೆ ಬರಬೇಕೆಂದು ಹಾತೊರೆಯುತ್ತಾರೆ ಎನ್ನುವ ಅರ್ಥದಲ್ಲಿ ಅವರು ಹೇಳಿದಂತೆ ವರದಿಯಾಗಿದೆ ಅವರು ಅಸತ್ಯವನ್ನೇನು ಹೇಳಲಿಲ್ಲ. ನೀವೇಕೆ ಇದರ ಬಗ್ಗೆ ಇಷ್ಟು ಅನಾದರಣೆ ಮಾಡಲು ಹೋಗುತ್ತೀರಿ? ಇರುವ ಸ್ಥಿತಿಯನ್ನು ಮರೆ ಮಾಡುವುದಕ್ಕೆ ಹೋಗಬೇಡಿ. ಇದು ಪ್ರಜಾ ರಾಜ್ಯ ಇದರಲ್ಲಿ ಸತ್ಯವೂ ಇದೆ. ಏಕೆಂದರೆ ಜನರು ಸಂಕಟಪಡುತ್ತಿದ್ದಾರೆ, ಜನಗಳಲ್ಲಿರುವ ಕಷ್ಟ ಕಾರ್ಪಣ್ಯಗಳೇನು ಎನ್ನುವುದನ್ನು ಚುನಾವಣೆಯ ಸಂದರ್ಭದಲ್ಲಿ ಜನತೆಗೆ ಹೇಳುತ್ತಿದ್ದರು. ಇಂದು ಏನಾಗಿದೆ ಎಂದರೆ ಜನತೆಗೆ ನೀವು ಅಂಜಬೇಕಾದ ಸ್ಥಿತಿ ಬಂದು ಒದಗಿದೆ. ಪ್ರಜಾ ಪ್ರಭುತ್ವದಲ್ಲಿ ಸಾಮಾನ್ಯ ಜನರ ರಕ್ಷಣೆ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕು. ಆದರೆ ಇಂದು ಜನರನ್ನು ಏನು ಮಾಡಿದ್ದೀರಿ ಎಂದರೆ ಅವನನ್ನು ಮಂಗನನ್ನಾಗಿ ಮಾಡಿ ಕೂರಿಸಿದ್ದೀರಿ ಜನತೆ ಹಿಂದೆ ಸರಕಾರಕ್ಕೆ ಹೆದರುತ್ತಿದ್ದರು. ಈಗ ಜನತೆ ಬುದ್ಧಿವಂತರಾಗಿದ್ದಾರೆ ಸರಕಾರ ಈಗ ಅವರಿಗೆ ಹೆದರಬೇಕಾದ ಸ್ಥಿತಿ ಬಂದಿದೆ. ಜನರ ಸ್ಥಿತಿಗತಿಗಳನ್ನು ಸುಧಾರಿಸುವುದರಲ್ಲಿ ಸರಕಾರ ಮರೆತಿದೆ. ಹಿಂದೆ ಇದ್ದ ಇಂದಿರಾಗಾಳಿ ಎಂದು ಹೇಳುವುದರಿಂದ ಏನೂ ನಡೆಯುವುದಿಲ್ಲ ಎಂದು ಸ್ಪಷ್ಟವಾಗಿ ಇಲ್ಲಿ ತೋರಿಸುತ್ತಿದೆ. ಬೇರೆ ಕಡೆಗಳಲ್ಲಿಯೂ ಚುನಾವಣೆ ಗಳು ಯಾವ ರೀತಿ ಆಗುತ್ತಿದೆ ಎನ್ನುವುದು ಪತ್ರಿಕೆಗಳಲ್ಲಿ ಬರುತ್ತಿದೆ. ಇಂದು ಪಾಂಡಿಚೇರಿಯಲ್ಲಿ ಏನಾಗಿದೆ ನೋಡಬಹುದು. ಉತ್ತರ ಪ್ರದೇಶದಲ್ಲಿ ಏನಾಗಿದೆ ನೋಡುತ್ತಿದ್ದೇವೆ. ಪತ್ರಿಕೆಗಳಲ್ಲಿ ಇವೆಲ್ಲಾ ಚೆನ್ನಾಗಿ ಬರುತ್ತಿವೆ. ನಮ್ಮ ದೇಶ ದಲ್ಲಿ ಬಹಳ ಮುಖ್ಯವಾದ ಕನ್ನಡ ದೈನಂದಿನ ಪತ್ರಿಕೆ ಒಂದು ಎಂದರೆ 'ಪ್ರಜಾವಾಣಿ' ಎಂದು ಬರುತ್ತಿದೆ. ಇದರಲ್ಲಿ ಕೆಲವು ವೇಳೆ 'ಛೂಬಾಣ' ಎನ್ನುವ ಕಲಂ ಬರು ತ್ತದೆ. ಇವು ಬಹಳ ಸ್ವಾರಸ್ಯವಾಗಿರುತ್ತದೆ ಮತ್ತು ಆಡಳಿತದ ಆಗುಹೋಗು ಗಳನ್ನು ಬಹು ರಸವತ್ತಾಗಿ ಬರೆಯುತ್ತಾರೆ. ನಮ್ಮ ರಾಜ್ಯದಲ್ಲಿ ಸುಮಾರು ಒಂದು ಕೋಟಿಗಿಂತ ಮೇಲ್ಪಟ್ಟು ಜನರು ಇದನ್ನು ಓದುತ್ತಾರೆ. ಇದರಲ್ಲಿ ಒಂದು ಸಾರಿ ಒಂದು ವಿಚಾರ ಬಂದಿತ್ತು. ಅದೇನೆಂದರೆ ಉತ್ತರ ಪ್ರದೇಶದ ಚುನಾವಣೆಗಾಗಿ ನಮ್ಮ ರಾಜ್ಯದಿಂದ ಸುಮಾರು ಒಂದು ಕೋಟಿ ರೂಪಾಯಿ ನಷ್ಟು ಹಣ ವಂತಿಗೆಯಾಗಿ ಕೊಡಬೇಕೆಂದು ಕೇಳಲಾಗಿತ್ತು ಎಂದು. ಆದರೆ ನಮ್ಮ ರಾಜ್ಯದಿಂದ ಒಬ್ಬರು ಮಾರವಾಡಿ ಸುಮಾರು ಮೂವತ್ತು ಲಕ್ಷ ಆ ಪಕ್ಷ ದವರಿಗೆ ಹಣ ಕೊಡಲು ಹೋದಾಗ ಅವರು ಇಷ್ಟು ಕಮ್ಮಿ ಹಣ ಏಕೆ ತಂದಿರಿ ಎಂದು ಬಹು ನಾಚಿಕೆಯಿಂದ ಬೇಸರಪಟ್ಟುಕೊಂಡರು ಎಂದು ಪತ್ರಿಕೆಯಲ್ಲಿ

(ಶ್ರೀ ಕಾಗೋಡು ತಿಮ್ಮಪ್ಪ)

ಬಂದಿದೆ. ಇದನ್ನು ಯಾರಾದರೂ ಮರೆಮಾಚಲು ಸಾಧ್ಯವಿಲ್ಲ ಇದು ಸರಿಯೋ ತಪ್ಪೋ ಎನ್ನುವುದನ್ನು ನಮ್ಮ ರಾಜ್ಯದ ಜನತೆಯೇ ಹೇಳಬೇಕಾಗಿದೆ.

ಶ್ರೀ ಎಸ್. ಎಂ. ಕೃಷ್ಣ :—ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಪಕ್ಷದ ಮುಖಂಡರು. ಪತ್ರಿಕೆಗಳಲ್ಲಿ ಭೂ ಬಾಣದಂತಹ ಕೆಲವು ಕಲಂಗಳಿರುತ್ತವೆ. ವಿಚಾರಗಳನ್ನು ನೋಡಿದರೆ ಕೆಲವು ಸಮಯದಲ್ಲಿ ಗಂಭೀರವಾಗಿ, ವ್ಯಂಗ್ಯವಾಗಿ ಹಾಗೂ ನಾನಾ ದೃಷ್ಟಿಗಳಿಂದ ಅವರು ನೋಡುತ್ತಾರೆ. ಅದನ್ನೇ ಆಧಾರವಾಗಿಟ್ಟುಕೊಂಡು ಇಲ್ಲಿ ಗುರುತರವಾದ ಅಪಾದನೆಯನ್ನು ಮಾಡುವುದನ್ನು ನಾನು ಸ್ಪಷ್ಟವಾಗಿ ನಿರಾಕರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ನೀವು ನಿರಾಕರಿಸಬಹುದು. ಜನರ ಮನಸ್ಸನ್ನು ನಿರಾಕರಿಸುವುದಕ್ಕೆ ಆಗುವುದಿಲ್ಲ. ಹಿಂದೆ ಶ್ರೀಮಾನ್ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದಾಗ ಅವರು ಒಂದು ಕಡೆ ಮಾಡಿದ ಭಾಷಣವನ್ನು ಬೂಸಾ ಭಾಷಣ ಎಂದು ಹೇಳಿದರು. ಅವರು ಮತ್ತೆ ಮತ್ತೆ ತಾವು ಆ ರೀತಿ ಹೇಳಿಲ್ಲ ಎಂದರೂ ಜನ ಕೇಳಲಿಲ್ಲ. ಪತ್ರಿಕೆಗಳಲ್ಲಿ ಸಹ ಅವರು ಹೇಳಿಕೆ ಕೊಟ್ಟರು. ಹಾಗಿದ್ದರೂ ಕೂಡ ಹುಡುಗರು ದೊಡ್ಡ ಚಳುವಳಿಯನ್ನೇ ನಡೆಸಿದರು. ಇದನ್ನು ಯಾರೂ ತಡೆಯಲಾಗಲಿಲ್ಲ, ಇದೇನಾಗಿದೆಯೆಂದರೆ ತೋಳ ಕುರಿಮರಿ ನ್ಯಾಯದಂತೆ ಆಯಿತು. ಬೂಸ ಎಂದು ನಾನು ಹೇಳಿಲ್ಲ ಎಂದು ಶ್ರೀ ಬಸವಲಿಂಗಪ್ಪನವರು ಪದೇ ಪದೇ ತಿಳಿಸಿದರೂ ಸ್ಟೂಡೆಂಟ್ಸ್‌ಗಳು ದೊಡ್ಡ ಚಳುವಳಿಯನ್ನೇಕೆ ಮಾಡಬೇಕಾಗಿ ಬಂತು. ಇದರ ಬಗ್ಗೆ ಅವರಿಗೂ ಜವಾಬುದಾರಿ ಇದೆ. ಆದರೂ ವಿಚಾರ ಮಾಡುವವರು ಹಾಗೂ ಪ್ರಜಾಪ್ರಭುತ್ವದ ಕಲ್ಪನೆ ಇಟ್ಟುಕೊಂಡಿರುವವರು ಸಾರ್ವಜನಿಕ ಅಪಾದನೆ ಬಂದಾಗ ಆಗಲೇ ವಿಮುಕ್ತರಾಗುವ ಸತ್ಸಂಪ್ರದಾಯವನ್ನು ಅನುಸರಿಸಬೇಕು. ಇಲ್ಲದಿದ್ದರೆ ಪ್ರಜಾಸತ್ತೆ ಹಣವಂತರ ಕೈಗೊಂಬೆಯಾಗುತ್ತೆ ಮತ್ತು ಪ್ರಜಾಸತ್ತೆ ಉಳಿಯುವುದಕ್ಕಾಗುವುದಿಲ್ಲ. ಜನ ಇದನ್ನು ನಿರಾಕರಿಸುತ್ತಾರೆ. ಶ್ರೀ ರಾಮನ ಕಾಲದಲ್ಲಿ ಒಬ್ಬ ಅಗಸ ಒಂದು ಚಿಕ್ಕ ಮಾತು ಹೇಳಿದಾಗ ಶ್ರೀ ರಾಮ ಸೀತೆಯನ್ನು ಅಗ್ನಿ ಪರೀಕ್ಷೆಗೆ ಒಳಪಡಿಸಬೇಕಾಗಿ ಬಂತು.

ಏಕೆಂದರೆ ಶ್ರೀರಾಮನು ದೊಡ್ಡ ಪ್ರಜಾಪ್ರಭುತ್ವವಾದಿಯಾಗಿದ್ದ. ಒಂದು ವೇಳೆ ಅತನೇನಾದರೂ ಅಗಸನ ಮಾತನ್ನು ಏನು ಕೇಳುವುದು ಎಂದುಕೊಂಡು ಸುಮ್ಮನೆ ಇದ್ದಿದ್ದರೆ ಅವನು ದೊಡ್ಡ ಪ್ರಜಾಪ್ರಭುತ್ವವಾದಿಯಾಗುತ್ತಿರಲಿಲ್ಲ. ಅಗಸನ ಮಾತಿಗೆ ಬೆಲೆ ಕೊಟ್ಟು ಸೀತೆಯನ್ನು ಪರೀಕ್ಷೆಗೆ ಒಳಪಡಿಸಿದ್ದರಿಂದಲೇ ಆತನ ಹೆಸರು ಇಂದಿಗೂ ಸಹ ಇಡೀ ರಾಷ್ಟ್ರದಲ್ಲಿ ಉಳಿದಿದೆ.

ಅಧ್ಯಕ್ಷರು : ಅಂದು ಸೀತೆ ಅಮ್ಮನಿಗೆ ಹೇಳುವವರು ಮತ್ತು ಕೇಳುವವರು ಯಾರೂ ಇರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾವೂ ಸಹ ಇಂದು ಜನತೆಯಿಂದ ಚುನಾಯಿತರಾಗಿ ಆಡಳಿತ ನಡೆಸುತ್ತಿರುವುದರಿಂದ ನಿಮ್ಮ ಮೇಲೆ ಏನಾದರೂ ಆಪಾದನೆ ಬಂದರೆ, ಅದನ್ನು ವಿಚಾರಣೆಗೆ ಒಳಪಡಿಸುವುದರ ಮೂಲಕ ಮುಕ್ತ ಮಾಡಿಕೊಳ್ಳಬೇಕು. ಅದೇ ನಿಮ್ಮ ದೊಡ್ಡತನವನ್ನು ತೋರಿಸುವುದು. ಆದರೆ ಆ ರೀತಿ ತಾವು ಮಾಡುತ್ತಿಲ್ಲ. ಕಳೆದ 25 ವರ್ಷಗಳಿಂದ ಏನು ನಡೆದುಕೊಂಡು ಬಂತೋ, ಅದನ್ನೇ ತಾವು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ. ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ ಎಂಬ ಗಾದೆಯಂತೆ ತಾವು ನಡೆದುಕೊಳ್ಳುತ್ತಿದ್ದೀರಿ. ಶರಾವತಿ ಕರ್ಮಕಾಂಡದ ಬಗ್ಗೆ ಹಿಂದಿನ ಸರ್ಕಾರದವರು ವಿಚಾರಣೆ ಮಾಡಬೇಕು ಎಂದು ಕೇಂದ್ರಸರ್ಕಾರದವರಿಗೆ ತಿಳಿಸಿದ್ದರೆ, ಅವರು ಆ ಒಂದು ಆಪಾದನೆಯಿಂದ ಮುಕ್ತರಾಗುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ ಆ ರೀತಿ ಮಾಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ —ವಿಚಾರಣೆ ಮಾಡುವುದಕ್ಕೆ ನಮ್ಮ ಅಡ್ಡಿ ಇಲ್ಲ ಎಂದು ಕಳೆದ ಎರಡು ವರ್ಷಗಳಿಂದ ನಾವು ಹೇಳಿಕೊಂಡು ಬಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :—ನೀವು ಅಧಿಕಾರದಲ್ಲಿ ಇದ್ದಾಗಲೇ ಏತಕ್ಕೆ ಆ ಕೆಲಸ ಮಾಡಲಿಲ್ಲ ಎಂದು ಕೇಳುತ್ತೇನೆ ;

ಶ್ರೀ ಹೆಚ್. ಡಿ. ದೇವೇಗೌಡ :—ಕಳೆದ 25 ವರ್ಷಗಳಿಂದ ನಡೆದುಕೊಂಡು ಬಂದಿದ್ದೇ ಇಂದಿಗೂ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು ; ನೆಹರೂನಂತರ ಅವರ ಮಗಳೇ ಅಧಿಕಾರದಲ್ಲಿ ಇರುವುದು : ನಮ್ಮ ಕರ್ನಾಟಕ ರಾಜ್ಯದಲ್ಲಿ ಹಿಂದೆ ಯಾರು ಯಾರು ಮುಖ್ಯ ಮಂತ್ರಿಗಳಾಗಿದ್ದರೋ ಅವರುಗಳ ಪೈಕಿ ಯಾರೇ ತಪ್ಪು ಮಾಡಿರಲಿ, ಶ್ರೀಮಾನ್ ನಿಜಲಿಂಗಪ್ಪನವರೇ ಮಾಡಿರಲಿ, ಶ್ರೀಮಾನ್ ವೀರೇಂದ್ರ ಪಾಟೀಲರೇ ಮಾಡಿರಲಿ, ಅದರ ಬಗ್ಗೆ ತನಿಖೆಯಾಗಲಿ : ಸಂಬಂಧಪಟ್ಟ ದಾಖಲೆಗಳು ಇರುವುದರಿಂದ ತಪ್ಪು ಮಾಡಿದವರು ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಪ್ರಜಾಪ್ರಭುತ್ವದಲ್ಲಿ ಸಂಪ್ರದಾಯ ಮುಖ್ಯವಾದುದು. ಸಾರ್ವಜನಿಕ ಜೀವನವನ್ನು ಶುದ್ಧ ಮಾಡುವುದಕ್ಕೆ ನೆಹರೂ ಅವರು ಅಂದು ಪ್ರಯತ್ನ ಮಾಡಿದ್ದರೆ ನಾವು ಇಂದು ಇದನ್ನೆಲ್ಲಾ ಪ್ರಸ್ತಾಪ ಮಾಡತಕ್ಕ ಪ್ರಸಂಗವೇ ಬರುತ್ತಿರಲಿಲ್ಲ. ಪ್ರತಾಪ ಸಿಂಗ್ ಕೈರಾನ್ ಅವರ ಕಥೆ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ತಮ್ಮ ಮೇಲೆ ಬಂದಂಥ ಆಪಾದನೆಯಿಂದ

(ಶ್ರೀ ಕಾಗೋಡು ತಿಮ್ಮಪ್ಪ)

ಮುಕ್ತರಾಗುವುದಕ್ಕೆ ಅಂದೇ ಒಂದು ತೀರ್ಮಾನ ತಗೆದುಕೊಂಡಿದ್ದರೆ ಇಂದು ತಾವು ದೊಡ್ಡ ಪ್ರಜಾಪ್ರಭುತ್ವವಾದಿಯಾಗಿ ಉಳಿಯುತ್ತಿದ್ದಿರಿ. ತಮಗೆ ಅಧಿಕಾರ ಇದ್ದಾಗ ವಿಚಾರಣೆಗೆ ಏರ್ಪಾಡು ಮಾಡದೆ ಈಗ ಮಾಡಿ ಎಂದು ಹೇಳುವುದು ಸರಿಯಲ್ಲ: ಮಾನ್ಯ ಕೃಷ್ಣ ಅವರು ಈ ಕಡೆ ಕುಳಿತಿದ್ದಾಗ ತನಿಖೆಯಾಗಬೇಕೆಂದು ಹೇಳಿದ್ದರು. ದೆಹಲಿಗೆ ಹೋಗಿ ಕೇಂದ್ರ ಸರ್ಕಾರದವರಿಗೆ ಹೇಳಿದರು. ದೊಡ್ಡ ಭಾಷಣಗಳನ್ನೇ ಮಾಡಿದರು: ಆದರೆ ಇಂದು ಅವರೇ ಅಧಿಕಾರದಲ್ಲಿರುವುದರಿಂದ ಏತಕ್ಕೆ ತನಿಖೆ ಮಾಡಿಸಬಾರದೆಂದು ಕೇಳುತ್ತೇನೆ. ಮುಖ್ಯವಾಗಿ ಎಲ್ಲರೂ ನುಣುಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಸರಿಯಲ್ಲ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಏನಾದರೂ ದೂರುಗಳು ಆಡಳಿತ ನಡೆಸುವವರ ಮೇಲೆ ಬಂದರೆ ಅದನ್ನು ತನಿಖೆಗೆ ಒಳಪಡಿಸುವುದರ ಮೂಲಕ ಅದರಿಂದ ಮುಕ್ತರಾಗುವುದಕ್ಕೆ ಪ್ರಯತ್ನಪಡಬೇಕೇ ಹೊರತು ತಮ್ಮ ಮೇಲಿನ ತಪ್ಪನ್ನು ಇನ್ನೊಬ್ಬರ ಮೇಲೆ ಹೊರಿಸುವುದಕ್ಕೆ ಪ್ರಯತ್ನ ಮಾಡುವುದು ಸರಿಯಲ್ಲ ಎಂದು ಹೇಳುವುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಈ ಬಗ್ಗೆ ಇಷ್ಟು ಹೇಳಿದರೆ ಸಾಕು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಮಲೆನಾಡಿನ ಬಗ್ಗೆ ಒಂದು ವಿಷಯವನ್ನೂ ಪ್ರಸ್ತಾಪ ಮಾಡಿಲ್ಲ; ಮಲೆನಾಡಿನ ಜನರ ವಿರೋಧ ಕಟ್ಟಿಕೊಂಡು ತಾವು ಬದುಕುವುದಕ್ಕೆ ಆಗುವುದಿಲ್ಲ; ಪಶ್ಚಿಮ ಘಟ್ಟದ ಅಭಿವೃದ್ಧಿ ಬಗ್ಗೆ ಒಂದು ವಿವರವಾದ ಯೋಜನೆಯನ್ನು ತಯಾರು ಮಾಡಬೇಕೆಂದು ನಾವು ಸಾಕಷ್ಟು ವಿವರವಾಗಿ ಹೇಳಿದ್ದೇವೆ; ಮತ್ತು ಮನವರಿಕೆ ಮಾಡಿ ಕೊಟ್ಟಿದ್ದೇವೆ; ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದ ಎನ್ನುವ ಬಗ್ಗೆ ರಾಜ್ಯಪಾಲರು ಏನಾದರೂ ಹೇಳಬಹುದಾಗಿತ್ತು; ಅದರೆ ಏನನ್ನೂ ಹೇಳದಿರುವುದರಿಂದ ನಾವು ವಿಷಾದಪಡಬೇಕಾಗಿದೆ. ರಾಜ್ಯಪಾಲರು ಏನನ್ನೂ ಹೇಳದಿರುವುದಕ್ಕೆ ಕಾರಣ ಈ ಸರ್ಕಾರದ ಹೃದಯ ಕಲ್ಲಾಗಿರುವುದು ಈ ಸರ್ಕಾರಕ್ಕೆ ಕಣ್ಣಿದ್ದೂ ಕುರುಡಾಗಿದೆ, ಕಿವಿಯಿದ್ದೂ ಕಿವುಡಾಗಿದೆ ಯಾವ ಪ್ರದೇಶ ಸಂಪದ್ಭರಿತವಾಗಿದೆಯೋ, ಯಾವ ಪ್ರದೇಶದಲ್ಲಿ ಸಂಪತ್ತನ್ನು ವೃದ್ಧಿ ಮಾಡಬಹುದೋ, ಯಾವ ಪ್ರದೇಶದಲ್ಲಿ ಜನರಿಗೆ ಉದ್ಯೋಗಗಳನ್ನು ಹೆಚ್ಚಾಗಿ ಕೊಡಬಹುದೋ ಅಂತಹ ಪ್ರದೇಶದ ಕಡೆಗೆ ಇವರ ದೃಷ್ಟಿಕೋನ ಹೋಗಲಿಲ್ಲ ಎಂದರೆ ಈ ರಾಜ್ಯದ ಅಭಿವೃದ್ಧಿಯನ್ನು ಇವರು ಯಾವ ರೀತಿ ಸಾಧಿಸುತ್ತಾರೆಂಬುದು ನನಗೆ ಗೊತ್ತಿಲ್ಲ. ಉಕ್ಕಿನ ಕಾರ್ಖಾನೆಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಿರ್ಮಾಣ ಮಾಡಬಹುದು. ಆದರೆ ಇವುಗಳಿಂದ ಮಾತ್ರ ನಿರುದ್ಯೋಗಿಗಳ ಸಮಸ್ಯೆಯನ್ನು

ಬಗೆಹರಿಸಲು ಸಾಧ್ಯವೇ ಎಂದು ಕೇಳುತ್ತೇನೆ. ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಇನ್ನು ಮುಂದೆ ಗ್ರಾಮ ಗ್ರಾಮಗಳಲ್ಲಿಯೂ ಉದ್ಯೋಗ ಕೇಂದ್ರಗಳನ್ನು ಸ್ಥಾಪನೆ ಮಾಡುವ ಕಾಲ ಬರಬಹುದು. ಮಲೆನಾಡಿನ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ ಅದರಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಸದಸ್ಯರಾಗಿದ್ದಾರೆ. ಮತ್ತು ಇದಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ತೆಗೆದಿಟ್ಟಿದಾರೆ. ಆದರೆ ಆ ವಿಚಾರದಲ್ಲಿ ಇವರು ಯೋಚನೆಗಳನ್ನೇ ತಯಾರು ಮಾಡದಿದ್ದರೆ ಅವರು ಹಣ ಯಾವ ರೀತಿ ಕೊಡುತ್ತಾರೆ. ನಂತರ ಅವರು ಮುಖ ನೋಡಿ ಮಣೆ ಹಾಕುತ್ತಾರೆ ತಾವು ಮಲೆನಾಡನ್ನು ಕಡೆಗಣಿಸುವುದಕ್ಕೆ ಹೋಗಬೇಡಿ. ಯಾವುದೋ ಸ್ವಾರ್ಥ ದೃಷ್ಟಿ ಇಟ್ಟು ಕೊಂಡು ಮಲೆನಾಡನ್ನು ಅಭಿವೃದ್ಧಿ ಪಡಿಸುವುದು ಬೇಡ ಎಂದು ತಾವು ತಿಳಿದು ಕೊಂಡಿದ್ದರೆ ಅದು ತಪ್ಪು ಅಭಿಪ್ರಾಯವಾಗುತ್ತದೆ ಏಕೆಂದರೆ ನಮ್ಮ ಮಲೆನಾಡಿನ ಪ್ರದೇಶವು ಸಹ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ನಾನಾ ರೀತಿಯಿಂದ ಕಾಣಿಕೆ ಕೊಟ್ಟಿದೆ ರಾಷ್ಟ್ರಕವಿ ಕುವೆಂಪು ಅವರಂತಹ ವಿಚಾರವಂತರನ್ನು ಕೊಟ್ಟಿರುವುದು ಮಲೆನಾಡಿನ ಪ್ರದೇಶವೆ. ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿರುವುದು ಸಹ ನಮ್ಮ ಮಲೆನಾಡಿನ ಪ್ರದೇಶದಲ್ಲಿಯೇ ಎಂಬುದನ್ನು ತಾವು ಮರೆಯಬಾರದು. ಮಲೆನಾಡಿನ ಅಭಿವೃದ್ಧಿಗೆ ರಾಜ್ಯ ಸರ್ಕಾರದವರು ಹಣ ಖರ್ಚು ಮಾಡಬೇಕಾಗಿಲ್ಲ, ಅದನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಆದರೂ ಸಹ ಇವರು ಯೋಚನೆಗಳನ್ನು ತಯಾರು ಮಾಡಲು ನಿಧಾನ ಮಾಡುತ್ತಿರುವುದು ಶೋಚನೀಯವಾದ ಸಂಗತಿ. ಆ ಪ್ರದೇಶದ ಅಭಿವೃದ್ಧಿ ಬಗ್ಗೆ ಇವರ ಹೃದಯ ಮಿಡಿಯುತ್ತಿಲ್ಲ; ಆ ವಿಚಾರ ಕೈಗನ್ನಡಿಯಂತಿದೆ. ಇವರ ಹೃದಯ ಕಲ್ಲಾಗಿದೆ ಎಂಬುದಕ್ಕೆ ಇದೇ ಸಾಕ್ಷಿಯಾಗಿದೆ. ಏಪ್ರಿಲ್ ಒಂದರಿಂದ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದರಿಂದ ಅಷ್ಟರಲ್ಲಿ ತಾವು ಹಣ ಪಡೆಯಲು ಪ್ರಯತ್ನ ಮಾಡಬೇಕೇ ವಿನಃ ಆ ಭಾಗದ ಜನರ ಅಸೂಯೆಗೆ ಒಳಗಾಗಬೇಡಿ ಎಂದು ಹೇಳುತ್ತೇನೆ. ಮಲೆನಾಡಿನ ಅಭಿವೃದ್ಧಿ ಬಗ್ಗೆ ರಾಜ್ಯಪಾಲರು ಏನನ್ನೂ ಪ್ರಸ್ತಾಪ ಮಾಡದಿರುವುದು ವಿಷಾದನೀಯವಾದ ಸಂಗತಿ. ಇದು ಅತ್ಯಂತ ಖಂಡನೀಯವಾದ ಸಂಗತಿ ಎಂದು ನಾವು ಭಾವಿಸದೆ ವಿಧಿಯಿಲ್ಲ.

ಇನ್ನು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದೇ ಸಭೆಯಲ್ಲಿ ಬರಗಾಲದ ಪರಿಸ್ಥಿತಿಯನ್ನು ಚರ್ಚೆ ಮಾಡುವ ಕಾಲದಲ್ಲಿ ತಮ್ಮ ಸಮ್ಮುಖದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದರು; ಬರಗಾಲ ಪ್ರದೇಶದ ಅಭಿವೃದ್ಧಿಗೆ ನೂರು ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ಪಡೆದುಕೊಳ್ಳಬೇಕು, 150 ಕೋಟಿ ರೂಪಾಯಿಗಳನ್ನು ಪಡೆದುಕೊಳ್ಳಬೇಕು ಎಂದು ಸದಸ್ಯರುಗಳು ಸಲಹೆ ಮಾಡಿದಾಗ ಮುಖ್ಯಮಂತ್ರಿಗಳು ಸರಳವಾದ ಭಾಷೆಯಲ್ಲಿ

(ಶ್ರೀ ಕಾಗೋಡು ತಿಮ್ಮಪ್ಪ)

ಹೇಳಿದ್ದೇನೆಂದರೆ, ನೂರು ಕೋಟಿ ಬೇಕು, 150 ಕೋಟಿ ಬೇಕು ಎಂದು ನಾವು ಏಕೆ ಚೌಕಾಸಿ ಮಾಡಬೇಕು, ನೀವು ಎಷ್ಟು ಹಣ ಬೇಕಾದರೂ ಖರ್ಚು ಮಾಡಿ, ನಾವು ಅದನ್ನು ಕೊಡುತ್ತೇವೆಂದು ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳಾಗಿರುವ ಶ್ರೀಮತಿ ಇಂದಿರಾ ಗಾಂಧಿಯವರು ಪೂರ್ಣವಾದ ಭರವಸೆಯನ್ನು ಕೊಟ್ಟಿರುವುದರಿಂದ, ನಾವು ಇಷ್ಟೇ ಹಣವನ್ನು ಪಡೆದುಕೊಳ್ಳಬೇಕು ಎಂದು ಯಾರೂ ಚೌಕಾಸಿ ಮಾಡುವುದು ಬೇಡ ಎಂದು ಇದೇ ಸದನದಲ್ಲಿ ಹೇಳಿದ್ದರು.

ಅಧ್ಯಕ್ಷರು :—ತಾವು ನಾಳೆ ತಮ್ಮ ಭಾಷಣವನ್ನು ಮುಂದುವರೆಸಿ. ಈಗ ಸಭೆ ಎದ್ದು ಪುನಃ ನಾಳೆ ಮಧ್ಯಾಹ್ನ ಒಂದು ಗಂಟೆಗೆ ಸೇರುತ್ತದೆ.

The House adjourned at Six of the clock to meet again at One of the Clock on Thursday the 28th March 1974.

WD 24—GBPC—350—27-7-74